07 January 2026 Wednesday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಕ್ರಿಕೆಟ್ ಆಟದಲ್ಲಿ ಬ್ಯಾಟಿಂಗ್ ಮಾಡುವವರ ಸುತ್ತ ನಿಂತವರೆಲ್ಲ ರಕ್ಷಣೆ ಮಾಡುವವರಲ್ಲ, ಹಾಗೆಯೇ ಜೀವನದಲ್ಲೂ ಕೂಡ!
-ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ಸಮಯವಿಲ್ಲ ಎಂದು ಇರುವ ಸಂಬಂಧಗಳನ್ನು ಮರೆಯುತ್ತಾ ಹೋದರೆ ಸಮಯ ಸಿಕ್ಕಾಗ ಯಾವ ಸಂಬಂಧವು ಇರುವುದಿಲ್ಲ
ಮೈಲಾರ ಸಾವಿತ್ರಿಬಾಯಿ

info.varthaman@gmail.com

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 71 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಸಿದ್ದರಾಮಯ್ಯ ಇಲ್ಲದ ಕಾಂಗ್ರೆಸ್ ಊಹೆಯೂ ಕಷ್ಟ!: ಎಚ್‌ಸಿಎಂ



**ಮೈಸೂರು:** ಸಿದ್ದರಾಮಯ್ಯ ಇಲ್ಲದಿರುವ ಕಾಂಗ್ರೆಸ್ ಹಾಗೂ ಸರ್ಕಾರವನ್ನು ಊಹಿಸುವುದೂ ಕಷ್ಟ. 2028ರವರೆಗೂ ಅವರೇ ಮುಖ್ಯಮಂತ್ರಿ ಆಗಿರುತ್ತಾರೆ ಎಂದು ಸಚಿವ ಡಾ.ಎಚ್.ಸಿ.ಮಹದೇವಪ್ಪ ಹೇಳಿದರು.

ಇಲ್ಲಿನ ಸೆನೆಟ್ ಭವನದಲ್ಲಿ ಮಂಗಳವಾರ ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು. ಯಾವಾಗಲು ಯೋಗ್ಯರ ಕೈಯಲ್ಲಿ ಅಧಿಕಾರ ಇರಬೇಕು. ಜೈಕಾರ ಕೂಗುವವರು ನನ್ನ, ಪರಮೇಶ್ವರ್ ಪರ ಘೋಷಣೆ ಕೂಗಬಹುದು. ಆದರೆ ಇರುವುದೊಂದೇ ಮುಖ್ಯಮಂತ್ರಿ ಹುದ್ದೆ. 2028ರವರೆಗೂ ಸಿದ್ದರಾಮಯ್ಯ ತಮ್ಮ ಅವಧಿ ಪೂರೈಸಲೇ ಬೇಕು. ಸಿದ್ದರಾಮಯ್ಯ ಅಧಿಕಾರದಿಂದ ಕೆಳಗೆ ಇಳಿದರೆ ಅಹಿಂದ ಸಮುದಾಯವೇ ಮುಳುಗಲಿದೆ ಎಂದು ಅಭಿಪ್ರಾಯಪಟ್ಟರು.

ಈಚೆಗಷ್ಟೇ ಮತ್ತೆ ಮುಖ್ಯಮಂತ್ರಿ ಎಂಬ ನಾಟಕ ನೋಡಿದೆ. ರಾಜಕೀಯ ಗುಂಪುಗಾರಿಕೆಯನ್ನು ಚೆನ್ನಾಗಿ ಬಿಂಬಿಸುತ್ತದೆ. ಈ ನಾಟಕ ನೋಡಿದ ಮೇಲೆ ಯಾರನ್ನು ನಂಬಬೇಕು, ಯಾರನ್ನು ಬಿಡಬೇಕೋ ಗೊತ್ತಿಲ್ಲ. ಸಿದ್ದರಾಮಯ್ಯರಿಗೂ ನಾಟಕ ನೋಡುವಂತೆ ಸಲಹೆ ನೀಡಿದ್ದೇನೆ ಎಂದು ಹೇಳಿದರು.

## ಸೋನಿಯಾ ಗಾಂಧಿ ಆಸ್ಪತ್ರೆಗೆ ದಾಖಲು



**ನವದೆಹಲಿ:** ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಸರ್ ಗಂಗಾ ರಾಮ್ ಆಸ್ಪತ್ರೆಗೆ ಸೋಮವಾರ ರಾತ್ರಿ ದಾಖಲಾಗಿದ್ದಾರೆ. ಸೋನಿಯಾ ಅವರಿಗೆ ದೀರ್ಘಕಾಲದ ಕೆಮ್ಮಿನ ಸಮಸ್ಯೆ ಇದ್ದು ದೆಹಲಿಯಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯ ಮತ್ತು ಚಳಿಗಾಲದಿಂದ ತೀವ್ರಗೊಂಡಿದೆ. ವೈದ್ಯರು ಸೋನಿಯಾ ಗಾಂಧಿ ಅವರ ಆರೋಗ್ಯದ ಮೇಲೆ ನಿಗಾ ಇರಿಸಿದ್ದಾರೆ. ಡಿಸೆಂಬರ್ 2025 ರಲ್ಲಿ 79 ವರ್ಷ ತುಂಬಿದ ಸೋನಿಯಾ ಗಾಂಧಿ ಅವರು ಹಿಂದೆಯೂ ಆರೋಗ್ಯ ಸಮಸ್ಯೆಗಳಿಂದ ಆಸ್ಪತ್ರೆಗೆ ದಾಖಲಾಗಿದ್ದರು.

## ಸಿದ್ದುಗೆ ಪೂರ್ಣಾವಧಿ ಸಿಎಂ ಆಸೆ

### ದೀರ್ಘಾವಧಿ ಆಯ್ತು, ಪೂರ್ಣಾವಧಿ ಹೈಕಮಾಂಡ್ ತೀರ್ಮಾನ: ಸಿದ್ದರಾಮಯ್ಯ



**ಮೈಸೂರು:** ದೀರ್ಘಾವಧಿ ಮುಖ್ಯಮಂತ್ರಿ ಆಗುವ ಮೂಲಕ ದೇವರಾಜ ಅರಸು ದಾಖಲೆ ಮುರಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗ ಪೂರ್ಣಾವಧಿ ಆಗುವ ಆಸೆ ವ್ಯಕ್ತಪಡಿಸಿದರು.

ನಗರದಲ್ಲಿ ಮಂಗಳವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ನನಗೆ ಪೂರ್ಣಾವಧಿ ಮುಖ್ಯಮಂತ್ರಿ ಆಗುವ ವಿಶ್ವಾಸ ಇದೆ. ಆದರೆ, ಎಲ್ಲವೂ ಹೈಕಮಾಂಡ್ ತೀರ್ಮಾನವನ್ನು ಅವಲಂಬಿಸಿದೆ ಎಂದು ಅಭಿಪ್ರಾಯಪಟ್ಟರು.

ನನಗೆ ಕಾಂಗ್ರೆಸ್ ಹೈಕಮಾಂಡ್ ಮೇಲೆ ಪೂರ್ಣ ವಿಶ್ವಾಸವಿದೆ. ಪೂರ್ಣಾವಧಿ ಸಿಎಂ ಆಗುವ ವಿಶ್ವಾಸವು ಇದೆ. ಏನೇ ಆದರೂ ಹೈಕಮಾಂಡ್ ಎಲ್ಲವನ್ನೂ ತೀರ್ಮಾನ ಮಾಡುತ್ತದೆ. ಹೈಕಮಾಂಡ್ ನಿರ್ಧಾರವೇ ಅಂತಿಮ ಎಂದು ಪುನರುಚ್ಚರಿಸಿದರು. ಈ ಮೂಲಕ ಮತ್ತೆ ಪೂರ್ಣಾವಧಿ ಸಿಎಂ ಚರ್ಚೆಗೆ ನಾಂದಿ ಹಾಡಿದರು.

ರಾಜಕಾರಣ ತೃಪ್ತಿಕೊಟ್ಟಿದೆ. ಜನರಿಗೆ ಕೆಲಸ ಮಾಡುವುದೇ ಖುಷಿ. ಬಡವರು, ದಲಿತರು, ಹಿಂದುಳಿದವರಿಗೆ ನ್ಯಾಯ ಕೊಡಿಸುವುದೇ ರಾಜಕಾರಣ. ಸುದೀರ್ಘ ಅವಧಿಯ ಮುಖ್ಯಮಂತ್ರಿಯೆಂಬ ದಾಖಲೆ ಮಾಡುತ್ತೇನೆಂದು ಅಂದುಕೊಂಡಿರಲಿಲ್ಲ. ಡಿ.ದೇವರಾಜ ಅರಸು ಮತ್ತು ನಾನು, ಇಬ್ಬರೂ ಮೈಸೂರಿನವರಾದರೂ ನಮ್ಮ ಕಾಲಘಟ್ಟ ಬೇರೆ ಎಂದು ಹೇಳಿದರು.

ತಮ್ಮ ರಾಜಕೀಯ ಭವಿಷ್ಯ, ದೇವರಾಜ ಅರಸು ಅವರ ದಾಖಲೆ ಸರಿಗಟ್ಟಿದ ಸಂಭ್ರಮ ಹಾಗೂ ರಾಜ್ಯದ ಪ್ರಚಲಿತ ವಿದ್ಯಮಾನಗಳ ಬಗ್ಗೆ ಮಾತನಾಡಿದ ಅವರು, ದೇವರಾಜ ಅರಸು 1972ರಿಂದ 1980ರವರೆಗೆ ಮುಖ್ಯಮಂತ್ರಿಯಾಗಿದ್ದರು. ಜನರ ಆಶೀರ್ವಾದದಿಂದ ನಾನು

ಪುಟ 2ಕ್ಕೆ

### ರಾಜಕೀಯ ಚರ್ಚೆ ಆಗಿಲ್ಲ

ಸಂಕ್ರಾಂತಿ ಹಬ್ಬ ಬಳಿಕ ಸಂಪುಟ ಪುನಾರಚನೆ ಮಾಡುವ ಬಗ್ಗೆ ಕೇಳಿದಾಗ ಹಾಗೂ ನಿನ್ನೆ ಕೆ.ಸಿ. ವೇಣುಗೋಪಾಲ್ ಭೇಟಿಯಾಗಿ ಏನು ಚರ್ಚಿಸಿದ್ದೀರಿ ಎಂಬ ಪ್ರಶ್ನೆಗೆ, 'ವೇಣುಗೋಪಾಲ್ ಅವರು ಮೈಸೂರು ಮಾರ್ಗವಾಗಿ ಬೆಂಗಳೂರಿಗೆ ಹೋಗಿ ದೆಹಲಿಗೆ ಹೋಗುತ್ತಿದ್ದರು. ಹೀಗಾಗಿ ಅವರನ್ನ ಭೇಟಿಯಾಗಿದ್ದೇನೆ ಅಷ್ಟೇ. ಅವರೊಂದಿಗೆ ಯಾವ ರಾಜಕಾರಣವೂ ಚರ್ಚೆ ಆಗಿಲ್ಲ. ಸಂಪುಟ ಪುನಾರಚನೆ ಬಗ್ಗೆಯೂ ಅವರ ಬಳಿ ಚರ್ಚೆ ಮಾಡಿಲ್ಲ. ಸಂಪುಟ ಪುನಾರಚನೆ ವಿಚಾರದಲ್ಲಿ ಹೈಕಮಾಂಡ್ ಯಾವತ್ತು ದೆಹಲಿಗೆ

ಪುಟ 2ಕ್ಕೆ

### ನಾಟಿ ಕೋಳಿ ಪಲಾವ್

ರಾಜ್ಯದ ಹಲವಡೆ ನಿಮ್ಮ ಹೆಸರಿನಲ್ಲಿ ನಾಟಿ ಕೋಳಿ ಪಲಾವ್ ಅನ್ನು ಅಭಿಮಾನಿಗಳು ಹಂಚುತ್ತಿದ್ದಾರೆ ಎಂದಾಗ, ಯಾರು ನಾಟಿ ಕೋಳಿ ಪಲಾವ್ ಹಂಚುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ನಾನು ಹಳ್ಳಿಯಿಂದ ಬಂದವನು, ಸಹಜವಾಗಿ ನನಗೆ ನಾಟಿ ಕೋಳಿ ಇಷ್ಟ. ನನ್ನಂತೆಯೇ ಹಳ್ಳಿಯಿಂದ ಬಂದವರಿಗೆ ನಾಟಿ ಕೋಳಿ ಊಟ ಇಷ್ಟ ಇರುತ್ತದೆ. ನಾನು ಮೊದಲು ಹೆಚ್ಚು ನಾಟಿ ಕೋಳಿ ತಿನ್ನುತ್ತಿದ್ದೆ, ಈಗ ಕಡಿಮೆ ಮಾಡಿದ್ದೇನೆ. ಇಂದು ಯಾರು ಹಂಚಿದ್ದಾರೆ ನನ್ನ ಗಮನದಲ್ಲಿ ಇಲ್ಲ ಎಂದು ನಕ್ಕು ಹೇಳಿದರು.

## ಪಲಾವ್, ಲಾಡು ಹಂಚಿ ಸಂಭ್ರಮ

**ಮೈಸೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೀರ್ಘಾವಧಿ ಸಿಎಂ ದಾಖಲೆ ಬರೆದದ್ದರಿಂದ ಅವರ ನಿವಾಸದ ಸುತ್ತಲೂ ಸಂಭ್ರಮ ಮನೆ ಮಾಡಿತ್ತು. ಕರ್ನಾಟಕ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಮತ್ತು ಅಹಿಂದ ಮೈಸೂರು ಸಂಘಟನೆಗಳ ಸದಸ್ಯರು, ಮುಖ್ಯಮಂತ್ರಿ ಅವರಿಗೆ ಅಹವಾಲು ಸಲ್ಲಿಸಲು ಬಂದಿದ್ದ ಜನರಿಗೆ 'ನಾಟಿ ಕೋಳಿ ಪಲಾವ್' ಹಾಗೂ ಲಾಡು ವಿತರಿಸಿ ಸಂಭ್ರಮಿಸಿದರು. ರಸ್ತೆಗಳಲ್ಲಿ ಮುಖಂಡರು, ಅಭಿಮಾನಿಗಳು ಅಭಿನಂದನೆಗಳ ಫ್ಲೆಕ್ಸ್‌ಗಳನ್ನು ಹಾಕಿದ್ದರು. ಎಲ್ಲೆಡೆ ಸಿದ್ದರಾಮಯ್ಯ ಅವರಿಗೆ ಶುಭಾಶಯಗಳ ಫ್ಲೆಕ್ಸ್‌ಗಳು ರಾರಾಜಿಸಿದವು.

## ಪವಿತ್ರಾಗೆ ಮನೆಯೂಟ: ಜೈಲಾಧಿಕಾರಿಗಳ ಕೊಕ್ಕೆ



**ಬೆಂಗಳೂರು:** ರೇಣುಕಾಸ್ವಾಮಿ ಕೊಲೆ ಆರೋಪದಲ್ಲಿ ಪರಪ್ಪನ ಅಗ್ರಹಾರ ಜೈಲು ಸೇರಿರುವ ಪವಿತ್ರಗೌಡಗೆ ಮನೆ ಊಟಕ್ಕೆ ಅನುಮತಿ ನೀಡದಂತೆ ಜೈಲಾಧಿಕಾರಿಗಳು ತೀರ್ಮಾನಿಸಿದ್ದಾರೆ.

ಜೈಲಿನ ವಿಚಾರಣಾಧೀನ ಕೈದಿಗಳಿಗೆ ಈ ರೀತಿಯಲ್ಲಿ ಮನೆ ಊಟಕ್ಕೆ ಅವಕಾಶ ನೀಡಿದರೆ ಮುಂದೆ ಎಲ್ಲಾ ಆರೋಪಿಗಳು ಇದೇ ಆದೇಶ ಬಳಸಿಕೊಂಡು ಮನೆ ಊಟ ಕೇಳುವ ಸಾಧ್ಯತೆ ಇರುವುದರಿಂದ ಮನೆ ಊಟ ನೀಡದಿರಲು ಜೈಲಾಧಿಕಾರಿಗಳು ಮುಂದಾಗಿದ್ದಾರೆ.

ಮನೆ ಊಟ ಬಂದರೆ ಪರಿಶೀಲನೆ ಮಾಡಿದ ಬಳಿಕ ಜೈಲಿನ ಒಳಗೆ ಕೊಡಬೇಕಾಗುತ್ತದೆ. ಅದಕ್ಕಾಗಿಯೇ ಪ್ರತ್ಯೇಕವಾಗಿ ತಂಡ ಬೇಕಾಗುತ್ತದೆ. ಪರಪ್ಪನ ಅಗ್ರಹಾರದಲ್ಲಿ ಇರುವ 3 ಸಾವಿರ ಆರೋಪಿಗಳು ಇದೇ ಆದೇಶದ ಮೇಲೆ ಅರ್ಜಿ ಹಾಕಿದರೆ ಕಷ್ಟ ಆಗುತ್ತದೆ. ಹೀಗಾಗಿ ಮನೆ ಊಟ ನೀಡಲು ಸಾಧ್ಯವಿಲ್ಲ

ಪುಟ 2ಕ್ಕೆ

**ಹಿಂದೂ ಸಮುದಾಯಕ್ಕೆ ಅವಮಾನ**

## ನೇಪಾಳದಲ್ಲಿ ಮಸೀದಿ ಧ್ವಂಸ; ಭಾರತದ ಗಡಿ ಬಂದ್



**ನೇಪಾಳ:** ನೇಪಾಳದಲ್ಲಿ ಮತ್ತೆ ಪ್ರಕ್ಷುಬ್ಧ ನಿರ್ಮಾಣವಾಗಿದೆ. ಭಾರತದ ಗಡಿಯಲ್ಲಿರುವ ಪರ್ಸಾ ಮತ್ತು ಧನುಸಾ ಧಾಮ್ ಜಿಲ್ಲೆಗಳಲ್ಲಿ ಉದ್ವಿಗ್ನತೆ ಭುಗಿಲೆದ್ದಿದೆ. ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆದ 'ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ' ವೀಡಿಯೊವೊಂದು ವೇಗವಾಗಿ ಹರಡುತ್ತಿದೆ. ಅನೇಕ ಜನರು ಬೀದಿಗಿಳಿದು ಪ್ರತಿಭಟಿಸುತ್ತಿದ್ದು ಪ್ರತಿಭಟನೆ ಹಿಂಸಾತ್ಮಕ ರೂಪಪಡೆದುಕೊಂಡಿದೆ. ಉದ್ರಿಕ್ತ ಗುಂಪೊಂದು ಸ್ಥಳೀಯ ಮಸೀದಿಯನ್ನು ಧ್ವಂಸಗೊಳಿಸಿದ್ದು ಪರಿಸ್ಥಿತಿಯಿಂದಾಗಿ ಭಾರತ ಬಿಹಾರದ ಭಾರತ–ನೇಪಾಳ ಗಡಿಯನ್ನು ಸಂಪೂರ್ಣವಾಗಿ ಮುಚ್ಚಿದೆ.

ಭಾರತೀಯ ಸಶಸ್ತ್ರ ಗಡಿ ಪಡೆ (ಎಸ್‌ಎಸ್‌ಬಿ) ಬಿಹಾರದ ರಕ್ಸೌಲ್ ಬಳಿಯ ಭಾರತ–ನೇಪಾಳ ಗಡಿಯನ್ನು ಮುಚ್ಚಿದೆ. ವೀಡಿಯೊ ವೈರಲ್ ಆದ ಕೂಡಲೇ, ಧನುಸಾ ಮತ್ತು ಪರ್ಸಾ ಜಿಲ್ಲೆಗಳಲ್ಲಿ ಉದ್ವಿಗ್ನತೆ ಹರಡಿತು. ಸ್ಥಳೀಯ ಜನಸಮೂಹ ಇಬ್ಬರು ಯುವಕರನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿತು. ಆದರೆ ಪರಿಸ್ಥಿತಿ ಶಾಂತವಾಗಲಿಲ್ಲ.

ಸಕುವಾ ಮಾರನ್ ಪ್ರದೇಶದಲ್ಲಿ ಮಸೀದಿಯ ಮೇಲೆ ದಾಳಿ ಮಾಡಿ ಧ್ವಂಸಗೊಳಿಸಿದ ಬೆನ್ನಲ್ಲೇ ಉದ್ವಿಗ್ನತೆ ತಾರಕಕ್ಕೇರಿದೆ. ಪ್ರತಿಭಟನೆಕಾರರು ಪೊಲೀಸರ ಮೇಲೆ ದಾಳಿ ನಡೆಸಿದರು. ಬಿರ್ಗಂಜ್ ಪ್ರದೇಶದಲ್ಲಿ ಪ್ರತಿಭಟನಾಕಾರರು ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿದ್ದು ಅಲ್ಲದೆ ಪೊಲೀಸ್ ಠಾಣೆಯನ್ನು ಧ್ವಂಸಗೊಳಿಸಿದರು.

ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು

## ಕೋರ್ಟ್‌ಗೆ ಹುಸಿ ಬಾಂಬ್ ಬೆದರಿಕೆ



**ಮೈಸೂರು:** ಮೈಸೂರಿನ ಜಿಲ್ಲಾ ನ್ಯಾಯಾಲಯಕ್ಕೆ ಮಂಗಳವಾರ ಇಮೇಲ್ ಮೂಲಕ ಬಾಂಬ್ ಬೆದರಿಕೆ ಬಂದಿದ್ದ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಕಲಾಪ ಸ್ಥಗಿತಗೊಳಿಸಿ, ಅಲ್ಲಿದ್ದವರನ್ನು ಹೊರಗೆ ಕಳುಹಿಸಲಾಯಿತು.

ಬಾಂಬ್ ಬೆದರಿಕೆ ನಂತರ, ನ್ಯಾಯಾಂಗ ಅಧಿಕಾರಿಗಳು, ವಕೀಲರು, ದಾವೆದಾರರು ಮತ್ತು ನ್ಯಾಯಾಲಯದ ಸಿಬ್ಬಂದಿಯನ್ನು ಕೋರ್ಟ್ ಆವರಣದಿಂದ ಸ್ಥಳಾಂತರಿಸಲಾಯಿತು ಮತ್ತು ನ್ಯಾಯಾಲಯದ ಕಲಾಪಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಯಿತು.

ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಆವರಣದಲ್ಲಿ ಸಂಪೂರ್ಣ ಶೋಧ ನಡೆಸಲಾಗಿದೆ. ಆನಂತರ ಅದೊಂದು ಹುಸಿ ಬಾಂಬ್ ಬೆದರಿಕೆ ಎಂದು ತಿಳಿದುಬಂದಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

## 'ಪೂರ್ಣಾವಧಿ ಸಿಎಂ'ಗೆ ಆಲ್ ದಿ ಬೆಸ್ಟ್!

### ಸಿಎಂ ಹೇಳಿಕೆಗೆ ಡಿ.ಕೆ.ಶಿವಕುಮಾರ್ ವ್ಯಂಗ್ಯದ ಪ್ರತಿಕ್ರಿಯೆ



**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಒಳ್ಳೆಯದಾಗಲಿ. ಐ ವಿಶ್ ಹಿಮ್ ಆಲ್ ದ ಬೆಸ್ಟ್, ಗುಡ್ ಲಕ್ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ಮಾಧ್ಯಮಗಳ ಜೊತೆ ಮಂಗಳವಾರ ಮಾತನಾಡಿದ ಅವರು, ಪೂರ್ಣಾವಧಿಗೆ ನಾನೇ ಸಿಎಂ ಆಗಿ ಮುಂದುವರಿಯುವ ವಿಶ್ವಾಸವಿದೆ ಎಂಬ ಸಿದ್ದರಾಮಯ್ಯ ಅವರ ಹೇಳಿಕೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, ಅವರಿಗೆ ಒಳ್ಳೆಯದಾಗಲಿ. ನಾನು ಅವರಿಗೆ ಶುಭ ಹಾರೈಸುತ್ತೇನೆ ಎಂದು ತಿಳಿಸಿದರು.

ಮುಖ್ಯಮಂತ್ರಿ ಹೇಳಿಕೆ ಗೊಂದಲಕ್ಕೆ ಕಾರಣವಾಗಬಹುದೇ ಎಂದು ಕೇಳಿದಾಗ, ಮಾಧ್ಯಮಗಳು ಗೊಂದಲ ಸೃಷ್ಟಿಸುತ್ತಿದ್ದೀರಿ. ನಮ್ಮಲ್ಲಿ ಯಾವುದೇ ಗೊಂದಲವಿಲ್ಲ. ನಿಮಗೆ ಗೊಂದಲವಿದೆ ಎಂದರು.

ಕರ್ನಾಟಕದ ಅತಿ ಹೆಚ್ಚು ಕಾಲ ಮುಖ್ಯಮಂತ್ರಿಯಾಗಿ ದಾಖಲೆ ಬರೆದ ಕುರಿತು ಮಾತನಾಡಿ, ಮುಖ್ಯಮಂತ್ರಿಗಳಿಗೆ ಯಶಸ್ಸಾಗಲಿ, ಒಳ್ಳೆಯದಾಗಲಿ. ಅವರಿಗೆ ಹೆಚ್ಚು ಆರೋಗ್ಯ ಸಿಗಲಿ, ಜನರ ಸೇವೆ ಮಾಡುವ ಅವಕಾಶವನ್ನು ಭಗವಂತ ಅವರಿಗೆ ನೀಡಲಿ ಎಂದು ಪ್ರಾರ್ಥಿಸುತ್ತೇನೆ

ಪುಟ 2ಕ್ಕೆ

### ಕುಮಾರಸ್ವಾಮಿ ಜೇಬಲ್ಲೇ ಐಟಿ!

ಮೃತ ಕಾಂಗ್ರೆಸ್ ಕಾರ್ಯಕರ್ತನ ಕುಟುಂಬಕ್ಕೆ ನೀಡಿದ ಪರಿಹಾರ ಹಣ ಮೂಲ ಕಾಂಗ್ರೆಸ್ ಪಕ್ಷದ್ದೋ, ಸರ್ಕಾರದಿಂದಲೋ? ಐಟಿ ಇಲಾಖೆ ಏನು ಮಾಡುತ್ತಿದೆ ಎನ್ನುವ ಕುಮಾರಸ್ವಾಮಿ ಹಾಗೂ ಪ್ರತಿಪಕ್ಷಗಳ ಆರೋಪದ ಬಗ್ಗೆ ಕೇಳಿದಾಗ, ಐಟಿ ಸೇರಿದಂತೆ ಇತರೇ ಎಲ್ಲಾ ಇಲಾಖೆಗಳು ವಿರೋಧ ಪಕ್ಷಗಳ ಹತ್ತಿರವೇ ಇದೆಯಲ್ಲವೇ? ಕುಮಾರಸ್ವಾಮಿ ಜೇಬಲ್ಲೇ ಇದ್ದಾವಲ್ಲ? ಎಂದು ಡಿ.ಕೆ.ಶಿವಕುಮಾರ್ ಲೇವಡಿ ಮಾಡಿದರು.

## ಸಿದ್ದು, ಡಿಕೆಶಿ, ಖರ್ಗೆ ವಿರುದ್ಧ ತನಿಖೆಗೆ ಆದೇಶ

**ಮುಂಬೈ:** ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ವಿಎಚ್‌ಪಿಯನ್ನು ಪಿಎಫ್‌ಐ ಜೊತೆ ಎಂದು ಹೋಲಿಸಿದ್ದಕ್ಕೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧ ವಿಎಚ್‌ಪಿ ಕಾರ್ಯಕರ್ತ ಸಲ್ಲಿಸಿದ್ದ ಮಾನನಷ್ಟ ಮೊಕದ್ದಮೆ ತನಿಖೆಗೆ ಮುಂಬೈ ನ್ಯಾಯಾಲಯ ಮಂಗಳವಾರ ಆದೇಶ ನೀಡಿದೆ. ಫೆಬ್ರವರಿ 17ರೊಳಗೆ ಪ್ರಾಥಮಿಕ ತನಿಖೆಯನ್ನು ಪೂರ್ಣಗೊಳಿಸಲು ಭಾಂಡಪ್ ಪೊಲೀಸರಿಗೆ ಸೂಚಿಸಿದೆ. ಕರ್ನಾಟಕ ಕಾಂಗ್ರೆಸ್ ಮೇ 2, 2023ರಂದು ಪ್ರಣಾಳಿಕೆ ಬಿಡುಗಡೆ ಮಾಡಿತ್ತು. ಧರ್ಮ ಮತ್ತು ಜಾತಿ ಹೆಸರಿನಲ್ಲಿ ಸಮಾಜದಲ್ಲಿ ದ್ವೇಷ ವನ್ನು ಬಿತ್ತಿ ವಿಭಜನೆಗೆ ಕಾರಣವಾಗುವ, ವ್ಯಕ್ತಿಗಳು ಮತ್ತು ಸಂಘಟನೆಗಳ ವಿರುದ್ಧ ಕಠಿಣ ಮತ್ತು ನಿರ್ಣಾಯಕ ಕಾನೂನು ಕ್ರಮವನ್ನು ತೆಗೆದುಕೊಳ್ಳಲು ಕಾಂಗ್ರೆಸ್ ಪಕ್ಷ ಬದ್ಧವಾಗಿದೆ ಎಂದು ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಹೇಳಿತ್ತು.

## ಸಿಎಂ ಪರ ರಾಯರೆಡ್ಡಿ ಬ್ಯಾಟಿಂಗ್



**ಬೆಂಗಳೂರು:** ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿ 5 ವರ್ಷ ಪೂರೈಸುತ್ತಾರೆ. 2.5 ವರ್ಷಕ್ಕೆ ಅವರನ್ನು ಸಿಎಂ ಆಗಿ ಶಾಸಕರು ಆಯ್ಕೆ ಮಾಡಿಲ್ಲ ಎಂದು ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಮತ್ತೊಮ್ಮೆ ಸಿದ್ದರಾಮಯ್ಯ ಪರ ಬ್ಯಾಟಿಂಗ್ ಮಾಡಿದ್ದಾರೆ.

ವಿಧಾನಸೌಧದಲ್ಲಿ ಮಾತನಾಡಿದ ಅವರು, ಸಿಎಂ ಬದಲಾವಣೆ ವಿಚಾರ ಮಾಧ್ಯಮ ಸೃಷ್ಟಿ. ಯಾರಿಗೆ ಸಿಎಂ ಆಗಲು ಇಷ್ಟ ಇರುವುದಿಲ್ಲ ಹೇಳಿ. ನಾನು ಸಿಎಂ ಯಾಕೆ ಆಗಬಾರದು? ಸಿಎಂ ಬದಲಾವಣೆ ಆಗಬೇಕಾದರೆ ಶಾಸಕರ ಅಭಿಪ್ರಾಯ ಪಡೆಯಬೇಕು. ಇದೆಲ್ಲವೂ ಆಗದೇ ಹೇಗೆ ಬದಲಾವಣೆ ಆಗುತ್ತದೆ ಎಂದು ಪ್ರಶ್ನಿಸಿದರು.

ಹೈಕಮಾಂಡ್ ನಿರ್ಧಾರ ಅಂತಿಮ ಎಂದು ಡಿಕೆಶಿ ಹೇಳಿದ್ದಾರೆ. ಇಕ್ಬಾಲ್ ಹುಸೇನ್ ಮನೋರಂಜನೆಗೋಸ್ಕರ ಡಿಕೆಶಿ ಸಿಎಂ ಅಂತ ಹೇಳುತ್ತಾರೆ. ಡಿ.ಕೆ.ಶಿವಕುಮಾರ್ ಅವರಿಗೆ ಮುಂದೆ ಸಿಎಂ ಆಗುವ ಅವಕಾಶ ಸಿಗಬಹುದು. ಡಿಕೆಶಿ ಆಕಾಂಕ್ಷಿ ಆಗುವುದರಲ್ಲಿ ತಪ್ಪಿಲ್ಲ ಎಂದು ಹೇಳಿದರು.

ಸಿಎಂ ಬಜೆಟ್ ಸಿದ್ಧತೆ ಪ್ರಾರಂಭ ಮಾಡಿದ್ದಾರೆ. ಜನವರಿ 16ರ ಬಳಿಕ ಬಜೆಟ್‌ಗೆ ಒಂದು ರೂಪ ಸಿಗುತ್ತದೆ. ಫೆಬ್ರವರಿಯಲ್ಲಿ ಬಜೆಟ್ ಮಂಡನೆಗೆ ಸಿಎಂ

ಪುಟ 2ಕ್ಕೆ

## ಧರ್ಮಸ್ಥಳ: ಮರು ತನಿಖೆ ಕೋರಿ ಸುಪ್ರೀಂಗೆ ಅರ್ಜಿ



**ನವದೆಹಲಿ:** ಧರ್ಮಸ್ಥಳ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕೆಲವು ವರ್ಷಗಳಿಂದ ದಾಖಲಾಗಿರುವ 74 ಮಹಿಳೆಯರ ನಾಪತ್ತೆ ಪ್ರಕರಣಗಳು ಹಾಗೂ ಅನಾಥ ಶವಗಳ ಪ್ರಕರಣಗಳಿಗೆ ಸಂಬಂಧಿಸಿದಂತೆ ಹೊಸದಾಗಿ ತನಿಖೆ ನಡೆಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮಾರ್ಚ್ 23ಕ್ಕೆ ಮುಂದೂಡಿದೆ.

ಅತ್ಯಾಚಾರವಾಗಿ ಕೊಲೆಯಾದ ಸೌಜನ್ಯ ತಾಯಿ ಕುಸುಮವತಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾ.ಸಂಜಯ್ ಕುಮಾರ್ ನೇತೃತ್ವದ ದ್ವಿಸದಸ್ಯ ಪೀಠದಲ್ಲಿ ವಿಚಾರಣೆ ನಡೆಸಲಾಯಿತು. ವಿಚಾರಣೆ ಸಮಯದಲ್ಲಿ ವಕೀಲರ ಅನುಪಸ್ಥಿತಿ ಹಿನ್ನೆಲೆಯಲ್ಲಿ ವಿಚಾರಣೆ ಮುಂದೂಡಲಾಯಿತು. ಸತತವಾಗಿ ಎರಡು ವರ್ಷಗಳವರೆಗೆ ನೂರಾರು ಅನಾಥ ಶವಗಳನ್ನು ಹೂತುಹಾಕಿದ್ದಾಗಿ ಈ ಹಿಂದೆ ಹೇಳಿಕೆ ನೀಡಿದ್ದ

ಪುಟ 2ಕ್ಕೆ

## ಸಿದ್ದು ರಾಜ್ಯಕ್ಕೆ ನೀಡಿದ ಕೊಡುಗೆ ಏನು?

### ಸಿದ್ದರಾಮಯ್ಯ ಅದೃಷ್ಟದ ಮುಖ್ಯಮಂತ್ರಿ: ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ

**ಬೆಂಗಳೂರು:** ದೇವರಾಜ ಅರಸು ದಾಖಲೆ ಮುರಿದಿರುವುದಾಗಿ ಹೇಳಿಕೊಳ್ಳುವ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯಕ್ಕೆ ನೀಡಿದ ಕೊಡುಗೆಗಳು ಏನು? ಭ್ರಷ್ಟಾಚಾರ, ಹಗರಣಗಳ ಸರಮಾಲೆ, ಹಳಿ ತಪ್ಪಿದ ಮತ್ತು ಕಾನೂನು ಸುವ್ಯವಸ್ಥೆ ಹದಗೆಟ್ಟ ಆಡಳಿತ. ಇವೇ ಇವರ ದಾಖಲೆಗಳು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಾಗ್ದಾಳಿ ನಡೆಸಿದರು.

ಸಿದ್ದರಾಮಯ್ಯ ಹೋರಾಟಗಳಿಂದ ಬಂದು ಮುಖ್ಯಮಂತ್ರಿ ಆಗಲಿಲ್ಲ. ಅದೃಷ್ಟದ ಮೂಲಕ ಮತ್ತು ಅವಕಾಶವಾದಿತನದಿಂದ ಮುಖ್ಯಮಂತ್ರಿ ಆದರು. ತಮ್ಮ ಎರಡನೇ ಅವಧಿಯಲ್ಲಿ ಮುಡಾ ನಿವೇಶನ ಹಗರಣದಲ್ಲಿ ಸಿಕ್ಕಿಕೊಂಡು 14 ನಿವೇಶಗಳನ್ನು ಹಿಂತಿರುಗಿಸಿದರು ಎಂದು ವಿಜಯೇಂದ್ರ ಟೀಕಿಸಿದರು.

ಸಿದ್ದರಾಮಯ್ಯ ಅವರನ್ನು ಅರಸು ಜೊತೆ ಯಾವುದೇ ರೀತಿಯಲ್ಲೂ ಹೋಲಿಸಲು ಸಾಧ್ಯವಿಲ್ಲ.

ಪುಟ 2ಕ್ಕೆ

### ದುರಾಡಳಿತದ ದಾಖಲೆ: ಜೆಡಿಎಸ್



**ಬೆಂಗಳೂರು:** ರಾಜ್ಯದ ಅತಿ ಹೆಚ್ಚು ಅವಧಿಯ ಸಿಎಂ ಆಗಿ ಸಿದ್ದರಾಮಯ್ಯ ದಾಖಲೆ ನಿರ್ಮಾಣ ಮಾಡಿರುವ ವಿಚಾರಕ್ಕೆ ಜೆಡಿಎಸ್ ಲೇವಡಿ ಮಾಡಿದೆ. ಸಿದ್ದರಾಮಯ್ಯ ಅವಧಿ ದುರಾಡಳಿತದ ಅವಧಿ ಅಂತ ಕಿಡಿಕಾರಿರುವ ಜೆಡಿಎಸ್, ಸಿದ್ದರಾಮಯ್ಯ ಅವಧಿಯಲ್ಲಾದ ಭ್ರಷ್ಟಾಚಾರಗಳ ಕೇಸ್ ಪಟ್ಟಿ ಬಿಡುಗಡೆ ಮಾಡಿ ತಿರುಗೇಟು ಕೊಟ್ಟಿದೆ.

ರಾಜ್ಯದಲ್ಲಿ ಅತೀ ಹೆಚ್ಚು ಕೋಮುಗಲಭೆ ಮತ್ತು ಹಿಂಸಾಚಾರ. ಅತೀ ಹೆಚ್ಚು ರೈತರ ಆತ್ಮಹತ್ಯೆ ಪ್ರಕರಣ. ಭ್ರಷ್ಟಾಚಾರದಲ್ಲಿ ಕರ್ನಾಟಕ ನಂಬರ್–1 ರಾಜ್ಯ ಆಗಿದ್ದು ಸಿದ್ದರಾಮಯ್ಯ ಅವಧಿಯಲ್ಲಿ. ಭ್ರಷ್ಟಾಚಾರ ಆರೋಪದಲ್ಲಿ ಕಾಂಗ್ರೆಸ್ ಪಕ್ಷದ ಅತಿ ಹೆಚ್ಚು ಶಾಸಕರು ಜೈಲು ಸೇರಿದ್ದು. ಅತೀ ಹೆಚ್ಚು ಸರ್ಕಾರಿ ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಂಡಿದ್ದು. ವಾಲ್ಮೀಕಿ ನಿಗಮ, ಭೋವಿ ನಿಗಮ, ಅಂಬೇಡ್ಕರ್ ನಿಗಮದ ಹಣ, ಎಸ್‌ಸಿ/ಎಸ್‌ಟಿ ಅನುದಾನ ಸೇರಿದಂತೆ ದಲಿತರ ಅಭಿವೃದ್ಧಿಗೆ ಮೀಸಲಿಟ್ಟ ಸಾವಿರಾರು ಕೋಟಿ ಲೂಟಿ ಮಾಡಿರುವುದು, ಬೆಲೆ

ಪುಟ 2ಕ್ಕೆ

## ಕೇಂದ್ರ ಪರಿಶಿಷ್ಟರ ಅನುದಾನ ನೀಡಿಲ್ಲ

### ಸಿಎಂ ಸಿದ್ದರಾಮಯ್ಯ ಹೇಳಿಕೆ | ಕೆ.ಶಿವಕುಮಾರ್ ಅಭಿನಂದನಾ ಸಮಾರಂಭ

**ಮೈಸೂರು:** ಕೇಂದ್ರದಲ್ಲಿ ನರೇಂದ್ರ ಮೋದಿ ಪ್ರಧಾನಿ ಆಗಿ 11 ವರ್ಷ ಕಳೆದಿದೆ. ವಾಜಪೇಯಿ ಸಹ ಆರು ವರ್ಷ ಪ್ರಧಾನಿ ಆಗಿದ್ದರು. ಆದರೂ ಏಕೆ ಜನಸಂಖ್ಯೆಗೆ ಅನುಗುಣವಾಗಿ ಎಸ್‌ಸಿಟಿ/ ಟಿಎಸ್‌ಪಿ ಅನುದಾನ ನೀಡಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ನಗರದ ಮಾನಸಗಂಗೋತ್ರಿಯ ಸೆನೆಟ್ ಭವನದಲ್ಲಿ ಮಂಗಳವಾರ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾದ ಪತ್ರಕರ್ತ ಕೆ.ಶಿವಕುಮಾರ್ ಅವರ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು. ಬಡ್ತಿಯಲ್ಲಿ ಮೀಸಲಾತಿಗೆ ಸಂಬಂಧಿಸಿ ರತ್ನಪ್ರಭಾ ನೇತೃತ್ವದಲ್ಲಿ ಸಮಿತಿ ರಚಿಸಿ, ಅದರ ಶಿಫಾರಸಿನಂತೆ ವರದಿ ಜಾರಿ ಮಾಡಿದ್ದು ನಮ್ಮ ಸರ್ಕಾರ. ಬಿಜೆಪಿ ಅಧಿಕಾರದಲ್ಲಿ ಇರುವ ರಾಜ್ಯಗಳಲ್ಲಿ ಏಕೆ ಈ ಕೆಲಸ ಆಗಿಲ್ಲ ಎಂದು ಪ್ರಶ್ನಿಸಿದರು.

ಬ್ಯಾಗ್ ಲಾಗ್ ಹುದ್ದೆ ಭರ್ತಿ ಸಂಬಂಧ ಮಹದೇವಪ್ಪ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಶೀಘ್ರ ಭರ್ತಿ ಮಾಡುತ್ತೇವೆ. ಮೈಸೂರು ವಿ.ವಿ. ನಿವೃತ್ತ ಸಿಬ್ಬಂದಿಗೆ ವೇತನ ನೀಡಲು ಹಣ ಬಿಡುಗಡೆ ಮಾಡಲಾಗಿದೆ. ಈ ದುಃಸ್ಥಿತಿಗೆ ಹಿಂದಿನ ಕುಲಪತಿ ಕಾರಣ.

ಪುಟ 2ಕ್ಕೆ




### ಬ್ಯಾಕ್ ಲಾಗ್ ಹುದ್ದೆ ತುಂಬಿ: ಎಂಎಲ್ಸಿ ಶಿವಕುಮಾರ್ ಮನವಿ

**ಮೈಸೂರು:** ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಸಾಮಾಜಿಕ ನ್ಯಾಯದ ಪರ ಇರುವವರು. ನಿಮ್ಮ ಅವಧಿಯಲ್ಲೇ ಬ್ಯಾಕ್ ಲಾಗ್ ಹುದ್ದೆ ತುಂಬಬೇಕು ಎಂದು ವಿಧಾನಪರಿಷತ್ ಸದಸ್ಯ ಡಾ.ಕೆ.ಶಿವಕುಮಾರ್ ಮನವಿ ಮಾಡಿದರು.

ಪುಟ 2ಕ್ಕೆ

ವರ್ತಮಾನ

ಬುಧವಾರ
ಜನವರಿ 7, 2026

**ಮೊದಲ ಪುಟದಿಂದ**

## ಕೇಂದ್ರ ಪರಿಶಿಷ್ಟರ ಅನುದಾನ ನೀಡಿಲ್ಲ

ಅದನ್ನು ಸರಿಪಡಿಸುವ ಕೆಲಸ ಮಾಡಲಾಗುವುದು ಎಂದು ಭರವಸೆ ನೀಡಿದರು. ಕೇಂದ್ರ ಸರ್ಕಾರ ಎಂಟು ವರ್ಷ ಜಿಎಸ್‌ಟಿ ಹಣ ಮಜಾ ಮಾಡಿ ಈಗ ಕಡಿತಗೊಳಿಸಿದೆ. ರಾಜ್ಯಕ್ಕೆ 6 ಸಾವಿರ ಕೋಟಿ ಆದಾಯ ಕಡಿಮೆ ಆಗಿದೆ ಎಂದು ಟೀಕಿಸಿದರು. ಕಳೆದ 20 ವರ್ಷದಿಂದ ನರೇಗಾ ಅನುದಾನವನ್ನು ಕೇಂದ್ರವೇ ಕೊಡುತ್ತಿತ್ತು. ಈಗ ರಾಜ್ಯವೂ ಶೇ 40ರಷ್ಟು ಪಾಲು ಭರಿಸುವಂತೆ ಹೇಳಿದ್ದಾರೆ. ಆರ್ಥಿಕ ವರ್ಷದ ಮಧ್ಯದಲ್ಲಿ ಈ ಘೋಷಣೆ ಮಾಡಿದೆ ಎಂದು ಕಿಡಿಕಾರಿದರು.

ಕೆ.ಶಿವಕುಮಾರ್ ಅವರು ದೀರ್ಘ ಕಾಲ ಪತ್ರಕರ್ತರಾಗಿ ಕೆಲಸ ಮಾಡಿದ್ದಾರೆ. ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ಪತ್ರಿಕೆಯಲ್ಲಿ ಬರೆದು ಸಮಾಜದ ಪರವಾಗಿ ಕೆಲಸ ಮಾಡಿದ್ದಾರೆ. ಅವರಿಗೆ ವಿಧಾನ ಪರಿಷತ್ತಿನ ಸದಸ್ಯರಾಗಿ ಕೆಲಸ ಮಾಡಲು ಅವಕಾಶ ಕೊಟ್ಟಿರುವುದು ಸಂತಸದ ವಿಚಾರ. ದಲಿತರ ಪರವಾಗಿ ಮಾತನಾಡಲು ಒಳ್ಳೆಯ ವೇದಿಕೆ ಸಿಕ್ಕಿದೆ ಎಂದು ಸಚಿವ ಕೆ.ವೆಂಕಟೇಶ್ ಹೇಳಿದರು.

ಶಾಸಕ ತನ್ವೀರ್ ಸೇಠ್ ಮಾತನಾಡಿ, ಪ್ರಶ್ನೆ ಕೇಳುತ್ತಿದ್ದ ಕೆ.ಶಿವಕುಮಾರ್ ಉತ್ತರ ಕೊಡುವ ಸ್ಥಾನಕ್ಕೆ ಬಂದಿದ್ದಾರೆ ಎಂದರು. ಸಚಿವ ಕೆ.ವೆಂಕಟೇಶ್, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಕೆ.ಹರೀಶ್‌ಗೌಡ, ಡಿ.ರವಿಶಂಕರ್, ದರ್ಶನ್ ಧ್ರುವನಾರಾಯಣ, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಇತರರು ಭಾಗವಹಿಸಿದದರು.

## ಸಿಎಂ ಪರ ರಾಯರೆಡ್ಡಿ ಬ್ಯಾಟಿಂಗ್

ಅವರೇ ದಿನಾಂಕ ನಿಗದಿ ಮಾಡುತ್ತಾರೆ. ಈ ಬಾರಿ ಅಭಿವೃದ್ಧಿಗೆ ಹೆಚ್ಚು ಮಹತ್ವದ ಕೊಡುವ ಚಿಂತನೆ ಇದೆ ಎಂದು ತಿಳಿಸಿದರು.

## ನೇಪಾಳದಲ್ಲಿ ಜನಾಂಗೀಯ ಸಂಘರ್ಷ, ಮಸೀದಿ ಧ್ವಂಸ; ಭಾರತದ ಗಡಿ ಬಂದ್

ಗಡಿಯನ್ನು ನಿಯಂತ್ರಿಸುತ್ತಿದೆ. ತುರ್ತು ಸೇವೆಗಳನ್ನು ಹೊರತುಪಡಿಸಿ ಎಲ್ಲಾ ರೀತಿಯ ಪ್ರಯಾಣವನ್ನು ಸ್ಥಗಿತಗೊಳಿಸಲಾಗಿದೆ. ಗಡಿ ಪ್ರದೇಶಗಳಲ್ಲಿ ಹೆಚ್ಚುವರಿ ಭದ್ರತಾ ಪಡೆಗಳನ್ನು ನಿಯೋಜಿಸಲಾಗಿದೆ.

## ರಾಜಕೀಯ ಚರ್ಚೆ ಆಗಿಲ್ಲ

ಕರೆಯುತ್ತದೆ ಅಂದು ದೆಹಲಿಗೆ ಹೋಗುತ್ತೇನೆ ಚರ್ಚೆ ಮಾಡುತ್ತೇನೆ ಎಂದು ತಿಳಿಸಿದರು.

ಬಳ್ಳಾರಿ ಗಲಾಟೆ ವಿಚಾರದಲ್ಲಿ ಜೆಡಿಎಸ್ ಮತ್ತು ಬಿಜೆಪಿ ರಾಜಕಾರಣ ಮಾಡುತ್ತಿವೆ. ಅದರ ಬಗ್ಗೆ ಈಗ ತನಿಖೆ ನಡೆಯುತ್ತಿದೆ. ವರದಿ ಬರಲಿ ಆ ನಂತರ ಮಾತನಾಡುತ್ತೇನೆ. ಸಿಒಡಿ ತನಿಖೆಗೆ ಕೊಡುವ ಬಗ್ಗೆ ಇಂದು ಬೆಂಗಳೂರಿಗೆ ಗೃಹ ಸಚಿವರ ಜೊತೆ ಚರ್ಚೆ ಮಾಡುತ್ತೇನೆ. ನಂತರ ಸರ್ಕಾರದ ಮಟ್ಟದಲ್ಲಿ ತೀರ್ಮಾನ ಕೈಗೊಂಡು ಸೂಕ್ತ ತನಿಖೆ ನಡೆಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

## ಸಿದ್ದುಗೆ ಪೂರ್ಣಾವಧಿ ಸಿಎಂ ಆಸೆ

2013–18, 2023ರಲ್ಲಿ ಎರಡು ಅವಧಿಗೆ ಮುಖ್ಯಮಂತ್ರಿ ಆಗಿದ್ದೇನೆ. ಮುಂದೆ ಹೈಕಮಾಂಡ್ ಏನು ತೀರ್ಮಾನಿಸುತ್ತದೆಯೋ ನೋಡಬೇಕು ಎಂದು ಹೇಳಿದರು.

ಸಮಾಜದಲ್ಲಿ ಅಸಮಾನತೆ ಇನ್ನೂ ಇದೆ. ಅದು ಹೋಗುವವರೆಗೂ, ಜನರಿಗೆ ಸಾಮಾಜಿಕ ನ್ಯಾಯ ಸಿಗುವವರೆಗೂ ಹೋರಾಟ ಮಾಡುತ್ತಲೇ ಇರಬೇಕು. ಜನರ ಕೆಲಸ ಮಾಡುತ್ತಲೇ ಇರುವೆ ಎಂದು ಹೇಳಿದರು.

## ‘ಪೂರ್ಣಾವಧಿ ಸಿಎಂ’ಗೆ ಆಲ್ ದಿ ಬೆಸ್ಟ್!

ಎಂದು ತಿಳಿಸಿದರು. ಅನಾರೋಗ್ಯದ ಕಾರಣಕ್ಕೆ ಸೋನಿಯಾ ಗಾಂಧಿ ಅವರು ಆಸ್ಪತ್ರೆಗೆ ದಾಖಲಾಗಿದ್ದಾರೆ ಎನ್ನುವುದರ ಬಗ್ಗೆ ಅಧಿಕೃತ ಮಾಹಿತಿಯಿಲ್ಲ. ನನಗೂ ಇದರ ಬಗ್ಗೆ ಮಾಹಿತಿ ನೀಡಿದರು. ಅವರು ಶೀಘ್ರ ಗುಣಮುಖರಾಗಲಿ ಎಂದು ನಾವೆಲ್ಲರೂ ಪ್ರಾರ್ಥನೆ ಮಾಡುತ್ತೇವೆ ಎಂದರು.

## ದುರಾಡಳಿತದ ದಾಖಲೆ: ಜೆಡಿಎಸ್

ಏರಿಕೆ ಮಾಡಿ ಜನಸಾಮಾನ್ಯರ ಬದುಕು ನರಕ ಮಾಡಿದ್ದು. ರಸ್ತೆ ಗುಂಡಿಯನ್ನು ಮುಚ್ಚದೆ ಅನೇಕ ಅಮಾಯಕರನ್ನು ಬಲಿ ಪಡೆದಿದ್ದು. ಜಾತಿ ಜಾತಿಗಳ ಮಧ್ಯೆ ದ್ವೇಷದ ಬೆಂಕಿ ಹಚ್ಚಿದ ಜಾತಿವಾದಿ. ಸಿಎಂ ಆಗಿ ಅತೀ ಹೆಚ್ಚು ಸಾಲ ಮಾಡಿದ ಸಾಲಗಾರ ಸಿದ್ದರಾಮಯ್ಯನವರ ಕ್ ರೆಕಾರ್ಡ್ ಇನ್ನೂ ಇದೆ ಅಂತ ಜೆಡಿಎಸ್ ಆರೋಪ ಪಟ್ಟಿಯನ್ನು ಬಿಡುಗಡೆ ಮಾಡಿದೆ.

## ಸಿದ್ದು ರಾಜ್ಯಕ್ಕೆ ನೀಡಿದ ಕೊಡುಗೆ ಏನು?

ಅರಸು ಧ್ವನಿ ಇಲ್ಲದವರ ಧ್ವನಿಯಾಗಿದ್ದರು. ಕ್ರಾಂತಿಕಾರಿ ಕಾನೂನುಗಳನ್ನು ಜಾರಿ ತಂದರು. ಆದರೆ, ಅವರನ್ನು ಕಾಂಗ್ರೆಸ್ ಪಕ್ಷವು ಮುಖ್ಯಮಂತ್ರಿ ಸ್ಥಾನದಿಂದ ಹೊರದಬ್ಬಿ ಅಪಮಾನ ಮಾಡಿತು ಎಂದು ಅವರು ಆರೋಪಿಸಿದರು.

## ಪವಿತ್ರಾಗೆ ಮನೆಯೂಟ: ಜೈಲಾಧಿಕಾರಿಗಳ ಕೊಕ್ಕೆ

ಎಂದು ನ್ಯಾಯಾಲಯಕ್ಕೆ ಪುನರ್ ಪರಿಶೀಲನೆ ಅರ್ಜಿ ಸಲ್ಲಿಕೆ ಮಾಡಲು ಕಾರಾಗೃಹ ಇಲಾಖೆ ನಿರ್ಧಾರ ಮಾಡಿದೆ. ಜೈಲಿನಲ್ಲಿ ಒಳ್ಳೆಯ ಊಟ ಇಲ್ಲ. ಇದರಿಂದ ಅನಾರೋಗ್ಯ ಉಂಟಾಗುತ್ತಿದೆ. ಮನೆಯೂಟ ಬೇಕೆಂದು ಆರೋಪಿ ಪವಿತ್ರ ಗೌಡ ಮನವಿ ಪುರಸ್ಕರಿಸಿದ್ದ ನ್ಯಾಯಾಲಯ ದಿನಕ್ಕೊಂದು ಬಾರಿ ಮನೆಯೂಟ ನೀಡಲು ಅವಕಾಶ ನೀಡಿತ್ತು.

## ಬ್ಯಾಕ್ ಲಾಗ್ ಹುದ್ದೆ ತುಂಬಿ: ಎಂಎಲ್ಸಿ ಶಿವಕುಮಾರ್ ಮನವಿ

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ರಾಜ್ಯದ ದಲಿತರಲ್ಲಿ ಲ್ಯಾಂಡ್ ರೆಕಾರ್ಡ್ ಇಲ್ಲದೆ ಸಂಕಷ್ಟ ಅನುಭವಿಸುತ್ತಿದ್ದಾರೆ. ಅವರೆಲ್ಲರಿಗೂ ಲ್ಯಾಂಡ್ ರೆಕಾಡ್9 ಮಾಡಿಸಿಕೊಡಬೇಕು. ಎಲ್ಲಾ ವಿವಿ ಗಳಲ್ಲೂ ಬುದ್ದಿಸಂ ಕೋರ್ಸ್ ಪ್ರಾರಂಭ ಮಾಡಬೇಕು ಎಂದು ಹೇಳಿದರು.

## ಧರ್ಮಸ್ಥಳ: ಮರು ತನಿಖೆ ಕೋರಿ ಸುಪ್ರೀಂಗೆ ಅರ್ಜಿ

ಮಾಸ್ಕ್ ಮ್ಯಾನ್ ಚಿನ್ನಯ್ಯ ಉಲ್ಟಾ ಹೊಡೆದಿದ್ದೇಕೆ ಎಂದ ಬಗ್ಗೆಯೂ ತನಿಖೆಯಾಗಬೇಕು ಎಂದು ಅರ್ಜಿದಾರರು ಆಗ್ರಹಿಸಿದ್ದಾರೆ.


ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

## ಶ್ರೀ ಶಿವಶರಣ ಮಾದಾರ ಚೆನ್ನಯ್ಯ ಜಯಂತಿ

ಮೈಸೂರು: ಶ್ರೀ ಶಿವಶರಣ ಮಾದರ ಚೆನ್ನಯ್ಯ ಸೇವಾ ಸಮಿತಿಯಿಂದ ಮೈಸೂರಿನಲ್ಲಿ ಶ್ರೀ ಶಿವಶ ರಣ ಮಾದಾರ ಚೆನ್ನಯ್ಯ ಅವರ ಜಯಂತೋತ್ಸವ ಕಾರ್ಯಕ್ರಮ ನಡೆಯಿತು. ಇದೇ ವೇಳೆ ಸಮಿತಿ ಅಧ್ಯ ಕ್ಷರಾದ ತಿಲಕ್‌ನಗರದ ಸ್ವಾಮಿ ಅಧ್ಯಕ್ಷತೆಯಲ್ಲಿ ನಡೆಯಿತು.

ಇದೇ ವೇಳೆ ಜಿಲ್ಲಾ ಪದಾಧಿಕಾರಿಗಳ ಸಭೆಯೂ ಸಹ ನಡೆದು ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಡಾ. ಆನಂದ್ ಕುಮಾರ್, ಪ್ರಧಾನ ಕಾರ್ಯದರ್ಶಿ ಮಧು ರಾಜ್, ವೆಂಕಟರಾಮು, ಜಿಲ್ಲಾ ಉಪಾಧ್ಯಕ್ಷರುಗಳಾದ ನರಸಿಂಹಮೂರ್ತಿ, ಬಿ. ಎಸ್.ಸುಬ್ರಹ್ಮಣ್ಯ, ಮೂಗೂರು ಸಿದ್ದರಾಜು, ಕಾರ್ಯದರ್ಶಿಗಳಾದ ದೇವು ನಂಜ ನಗೂಡು, ಮಹದೇವು ಮತ್ತು ಸುಬ್ರಹ್ಮಣ್ಯ ಜ್ಯೋತಿ ನಗರ, ಕುಮಾರ್ ಪಿರಿಯಾಪಟ್ಟಣ, ಶಿವಣ್ಣ ಹಳಿ ಮಾವು, ಮಹಾದೇವ, ಕೆ.ಆರ್. ಕ್ಷೇತ್ರ, ಹರೀಶ್ ಹೆಚ್.ಡಿ. ಕೋಟೆ, ಪ್ರಸನ್ನ ಕುಮಾರ್ ನಂಜನ ಗೂಡು, ಕೆ.ಆರ್. ನಗರದ ರಾಜೇಶ್ ಮತ್ತು ಮಂಜು, ದುದ್ದಗೆರೆ ಅರುಣ್ ಕುಮಾರ್, ಮನು, ಶಿವರಾಜ್ ಹುಣಸೂರು, ರಾಹುಲ್, ಮಾದೇವಯ್ಯ ಮತ್ತು ಇತರೆ ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು.



## ಸಿಎಂ ದಾಖಲೆ: ನಾಟಿಕೋಳಿ ಪಲಾವ್ ಹಂಚಿ ಸಂಭ್ರಮ



ಮೈಸೂರು: ದೇವರಾಜ ಅರಸು ಅವರ ಆಡಳಿತದ ದಿನವನ್ನು ಮೀರಿ ಆಡಳಿತ ನೀಡಿದ ಸಿಎಂ ಸಿದ್ದರಾಮಯ್ಯ ದಾಖಲೆ ಬರೆದ ಹಿನ್ನೆಲೆಯಲ್ಲಿ ಮೈಸೂರಿನ ಸಿಎಂ ಅವರ ರಾಮಕೃಷ್ಣನಗರ ನಿವಾಸದಲ್ಲಿ ನಾಟಿಕೋಳಿ ಪಲಾವ್ ಹಂಚಿ ಸಂಭ್ರಮಿಸಿದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ 1ಟನ್ ನಾಟಿ ಕೋಳಿ ಪಲಾವ್ ಹಂಚಿದರು. ಬಳಿಕ ಮಾತನಾಡಿದ ಅವರು, ಸಾಮಾಜಿಕ ನ್ಯಾಯದ ಹರಿಕಾರರಾದ ದಿ.ದೇವರಾಜ ಅರಸು ಅವರು 2792 ದಿನಗಳ ಕಾಲ ಮುಖ್ಯಮಂತ್ರಿ ಆಗಿ ಹಿಂದುಳಿದ ಸಮಾಜಕ್ಕೆ ಸಾಮಾಜಿಕ ನ್ಯಾಯ ಸಿಗುವಂತೆ ಮಾಡಿದ್ದರು. ಇಂದಿಗೆ ಸಿಎಂ ಸಿದ್ದರಾಮಯ್ಯ 2793ದಿನಕ್ಕೆ ಕಾಲಿಟ್ಟಿದ್ದಾರೆ. ಗ್ಯಾರಂಟಿ ಯೋಜನೆ, ಭಾಗ್ಯಗಳ ಮೂಲಕ ಮತ್ತೆ ದನಿ ಇಲ್ಲದ ಸಮಾಜಕ್ಕೆ ದನಿಯಾಗಿ ಆಡಳಿತ ನೀಡಿದ್ದಾರೆಂದರು.

ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸಪ್ಪ, ಮೊಗಣ್ಣ ಇನ್ನಿತರರು ಉಪಸ್ಥಿತರಿದ್ದರು.

# ಮಕ್ಕಳಲ್ಲಿ ವೈಜ್ಞಾನಿಕತೆ ಮತ್ತು ವೈಚಾರಿಕತೆ ಬಿತ್ತೋಣ

### ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕರೆ | ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ

ಮೈಸೂರು: ವಿದ್ಯಾರ್ಥಿಗಳು ತಮ್ಮ ಪಠ್ಯ ಚಟುವಟಿಕೆಗಳ ಜೊತೆ ಕಲೆ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳನ್ನು ರೂಡಿಸಿಕೊಳ್ಳಬೇಕು. ಶಿಕ್ಷಕರು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕತೆ ಮತ್ತು ವೈಚಾರಿಕತೆ ಬಿತ್ತಬೇಕು ಎಂದು ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ ಮಹದೇವಪ್ಪ ತಿಳಿಸಿದರು.

ಮಹಾರಾಜ ಕಾಲೇಜಿನ ಪ್ರೌಢಶಾಲಾ ವಿಭಾಗದಲ್ಲಿ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಕಲೋತ್ಸವದ ಕಾರ್ಯ ಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಮೈಸೂರು ಜಿಲ್ಲೆ ಕಲೆ, ಸಾಹಿತ್ಯ, ಪುರಾತತ್ವ, ಸಂಗೀತಗಳ ಉಗಮ ಸ್ಥಾನ. ನಾಲ್ವಡಿ ಕೃಷ್ಣಾರಾಜ ಒಡೆಯರ್ ಅವರು ತಮ್ಮ ಆಡಳಿತದ ಸಮಯದಲ್ಲೇ ಸಾಹಿತ್ಯ ಹಾಗೂ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದರು ಎಂದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸ್ವಾತಂತ್ರ್ಯಕ್ಕೆ ಮೊದಲು ಜನ ಜೀವನ ಹೇಗಿರಬೇಕು ಎಂದು ಅಡಿಪಾಯ ಹಾಕಿದರು. ಶಿಕ್ಷಣ, ಮೀಸಲಾತಿ, ಮಹಿಳಾ ಸಬಲೀಕಾರಣ, ಅರೋಗ್ಯ, ಕೃಷಿ, ತೋಟಗಾರಿಕೆ, ವಿದ್ಯುತ್, ರೈಲ್ವೆ, ಮೈಸೂರು ಪೇಪರ್ ಮಿಲ್,ಕನ್ನಡ ಸಾಹಿತ್ಯ ಪರಿಷತ್ ನಿರ್ಮಾಣ ಮಾಡಿದರು. ವಿದ್ಯಾ ರ್ಥಿಗಳು ನಾಲ್ವಡಿ ಕೃಷ್ಣ ಒಡೆಯರ್ ಅವರ ಬಗ್ಗೆ ಹೆಚ್ಚು ತಿಳಿದುಕೊಳ್ಳಬೇಕು ಎಂದರು.

ಮೈಸೂರು ಜಿಲ್ಲೆಯನ್ನು ಶಿಕ್ಷಣ ಕ್ಷೇತ್ರದಲ್ಲಿ ಮೊದಲ ಸ್ಥಾನ ಗಳಿಸಬೇಕು. ಶಿಕ್ಷಕರು ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬಿತ್ತಬೇಕು ಹಾಗೂ ಸಂವಿಧಾನದ ಆಶಯಗಳಾದ ಸ್ವತಂತ್ರ, ಸಮಾನತೆ, ಭ್ರಾತೃತ್ವ ಭಾವನೆಗಳನ್ನು ಬೆಳೆಸಬೇಕು. ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಸಂವಿಧಾನದ ಪೀಠಿಕೆಯ ಬಗ್ಗೆ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಿ ಉತ್ತಮ ಭಾರತದ ಪ್ರಜೆಗಳಾಗಿ ಹೊರಹೊಮ್ಮವಂತೆ ಮಾಡಬೇಕು ಎಂದು ಹೇಳಿದರು.



ಶಾಸಕ ಕೆ.ಹರೀಶ್ ಗೌಡ ಶಾಲಾ ಮಕ್ಕಳಿಗೆ ಶುಭ ಹಾರೈಸಿ, ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಮಕ್ಕಳ ಪ್ರತಿಭೆಯನ್ನು ಆನಾವರಣಗೊಳಿಸಲಿಕ್ಕೆ ಉತ್ತಮ ವೇದಿಕೆಯಾಗಿದೆ. ಸೋಲು, ಗೆಲುವಿನ ಬಗ್ಗೆ ಚಿಂತಿಸಬೇಡಿ, ಪ್ರತಿಭೆಯ ಪ್ರದರ್ಶನ ನೀಡಿ ಒಂದಲ್ಲ ಒಂದು ದಿನ ಗೆಲುವು ಸಿಕ್ಕೆಸಿಗುತ್ತದೆ ಎಂದು ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ತುಂಬಿದರು.

ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೆ. ಬಿ. ಸೋಮೇಗೌಡ ಮಾತನಾಡಿ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಭಾಗವಹಿಸುತ್ತಿರುವ ವಿದ್ಯಾರ್ಥಿಗಳು ಶಾಲಾ, ತಾಲ್ಲೂಕು ಹಾಗೂ ಕ್ಲಸ್ಟರ್ ಮಟ್ಟದಲ್ಲಿ ಭಾಗವಹಿಸಿ ವಿಜೇತರಾಗಿ ಬಂದಿದ್ದಾರೆ. ಜಿಲ್ಲಾ ಮಟ್ಟಕ್ಕೆ ವಿದ್ಯಾರ್ಥಿಗಳು ತಲುಪಿರುವಿದು ಅವರ ಶ್ರಮದ ಪ್ರತಿಫಲ. ಶ್ರಮ ಹಾಗೂ ಅಭ್ಯಾಸದಿಂದ ಗುರಿ ತಲುಪಬಹುದು. ಸೋಮರಿತನವನ್ನು ಬಿಡಿ ಜ್ಞಾನವನ್ನು ತುಂಬಿಕೊಳ್ಳಿ ಎಂದು ಕಿವಿಮಾತು ಹೇಳಿದರು. ಕಾರ್ಯಕ್ರಮದಲ್ಲಿ ಡಯಟ್ ನ ಉಪ ನಿರ್ದೇಶಕ ಹಾಗೂ ಪ್ರಾಂಶುಪಾಲರಾದ ಸಿ. ರ್ ನಾಗರಾಜಯ್ಯ, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಡಿ ಉದಯಕುಮಾರ್, ಶಾಲಾ ಶಿಕ್ಷಣ ಇಲಾಖೆ ನೋಡಲ್ ಅಧಿಕಾರಿ ಹಾಗೂ ಶಿಕ್ಷಣಾಧಿಕಾರಿ ಎಂ. ಆರ್. ಅನಂತರಾಜು ಸೇರಿ ಮತ್ತಿತರರು ಉಪಸ್ಥಿತರಿದ್ದರು.

## ಟ್ರ್ಯಾಕ್ಟರ್ ಸಮೇತ ನೀಲಗಿರಿ ಮರಗಳ ವಶ

ನಾಗಮಂಗಲ: ಅರಣ್ಯ ಪ್ರದೇಶದಲ್ಲಿ ಕದ್ದು ಕೊಯ್ದಿದ್ದ ನೀಲಗಿರಿ ಮರದ ತುಂಡುಗಳನ್ನು ಸಾಗಿಸುತಿದ್ದ ಟ್ರ್ಯಾಕ್ಟರ್ ಅನ್ನು ಹಿಂಬಾಲಿಸಿದ ಅರಣ್ಯ ಇಲಾಖೆಯ ಅಧಿಕಾರಿ ಗಳು ಮತ್ತು ಸಿಬ್ಬಂದಿ ಮಾಲು ಸಮೇತ ಟ್ರ್ಯಾಕ್ಟರ್ ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ನಂಬರ್ ಪ್ಲೇಟ್ ಇಲ್ಲದ ಈ ಟ್ರ್ಯಾಕ್ಟರ್ ತಾಲ್ಲೂಕಿನ ಮದಲಹಳ್ಳಿ ಗ್ರಾಮದ ವ್ಯಕ್ತಿಯೊಬ್ಬರಿಗೆ ಸೇರಿದ್ದು ಎನ್ನಲಾಗಿದೆ.

ತಾಲ್ಲೂಕಿನ ಕಾಚೇನಹಳ್ಳಿ ಅರಣ್ಯ ಪ್ರದೇಶದಲ್ಲಿ ಕದ್ದು ಕೊಯ್ದಿದ್ದ ನೀಲಗಿರಿ ಮರದ ತುಂಡುಗಳನ್ನು ಟ್ರ್ಯಾಕ್ಟರ್‌ನಲ್ಲಿ ತುಂಬಿ ಮಂಡ್ಯ ಮುಖ್ಯ ರಸ್ತೆ ಕಡೆಗೆ ಸಾಗಿಸುತ್ತಿರುವ ಬಗ್ಗೆ ಖಚಿತ ಮಾಹಿತಿ ಸಿಗುತ್ತಿದ್ದಂತೆ ಅರಣ್ಯ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿ ಕಾರ್ಯಾಚರಣೆಗಿಳಿದರು.

ಬೆನ್ನತ್ತಿ ಬರುತ್ತಿದ್ದ ಅರಣ್ಯ ಇಲಾಖೆಯ ಸಿಬ್ಬಂದಿ ಗಳನ್ನು ಕಂಡ ಮರಗಳ್ಳರು ತಪ್ಪಿಸಿಕೊಳ್ಳಲಾಗದೆ ಕರಡ ಹಳ್ಳಿ ಸಮೀಪದ ಶ್ರೀ ಮಹದೇಶ್ವರ ದೇವಸ್ಥಾನದ ರಸ್ತೆ ಯಲ್ಲಿ ಟ್ರಾಲಿಯ ಲಿಫ್ಟ್ ಎತ್ತಿ ಟ್ರ್ಯಾಕ್ಟರ್ ಬಿಟ್ಟು ಕತ್ತಲಲ್ಲಿಯೇ ಪರಾರಿಯಾಗಿದ್ದಾರೆ.

ನೀಲಗಿರಿ ಮರದ ತುಂಡುಗಳನ್ನು ಅದೇ ಟ್ರ್ಯಾಕ್ಟ ರ್‌ಗೆ ತುಂಬಿ ಪಟ್ಟಣದ ವಲಯ ಅರಣ್ಯಾಧಿಕಾರಿ ಕಚೇರಿ ಆವರಣಕ್ಕೆ ತಂದು ನಿಲ್ಲಿಸಿರುವ ಅರಣ್ಯ ಇಲಾಖೆಯ ಅಧಿಕಾರಿಗಳು, ಟ್ರ್ಯಾಕ್ಟರ್ ಮಾಲೀಕ ತಾಲ್ಲೂಕಿನ ಮದಲ ಹಳ್ಳಿ ಗ್ರಾಮದ ಹರೀಶ್ ಮತ್ತು ಚಾಲಕ ಸಿದ್ದಲಿಂಗಮೂರ್ತಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮವಹಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಉಪ ಅರಣ್ಯಾಧಿಕಾರಿ ಕೆ.ಆರ್.ಮಂಜು, ಶಿವಲಿಂಗಯ್ಯ, ಗಸ್ತು ಅರಣ್ಯಪಾಲಕರಾದ ಪ್ರಜ್ವಲ್, ಸಚ್ಚಿನ್, ಶಿವರಾಜು, ನೂರ್‌ಪಾಷ, ಅರಣ್ಯ ವೀಕ್ಷಕ ಹೃತ್ವಿಕ್ ಭಾಗವಹಿಸಿದ್ದರು.



ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ



ಮೈಸೂರು ಪೋಟೊ ಜರ್ನಲಿಸ್ಟ್ ಅಸೋಸಿಯೇಷನ್ ನ 2026ನೇ ವರ್ಷದ ವಾರ್ಷಿಕ ದಿನದರ್ಶಿಕೆಯನ್ನು ಚಾಮುಂಡಿ ಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠದಲ್ಲಿ ಶ್ರೀ ಶಿವರಾತ್ರಿದೇಶಿಕೇಂದ್ರ ಸ್ವಾಮೀಜಿ ಬಿಡುಗಡೆ ಮಾಡಿದರು. ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮೈಸೂರು ಕೈಗಾ–ರಿಕಾ ಸಂಘದ ಅಧ್ಯಕ್ಷ ಕೆ.ಬಿ.ಲಿಂಗರಾಜು, ಮೈಸೂರು ಹೋಟಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಣ, ಮೈಸೂರು ಫೋಟೊ ಜರ್ನಲಿಸ್ಟ್ ಅಸೋಸಿಯೇಷನ್ ಅಧ್ಯಕ್ಷ ಪ್ರಗತಿಗೋಪಾಲಕೃಷ್ಣ, ಉಪಾಧ್ಯಕ್ಷ ಎಸ್.ಆರ್.ಮಧುಸೂದನ್, ಪ್ರಧಾನ ಕಾರ್ಯದರ್ಶಿ ಎಂ.ಎನ್.ಲಕ್ಷ್ಮಿನಾರಾಯಣ ಯಾದವ್, ಖಜಾಂಚಿ ಎ.ನಂದನ್, ಸಮಿತಿ ಸದಸ್ಯರಾದ ಎಂ.ಎಸ್.ಬಸವಣ್ಣ( ಅನುರಾಗ್ ಬಸವರಾಜು), ಕೆ.ಎಚ್.ಚಂದ್ರು, ಎಂ.ಎ.ಶ್ರೀರಾಮ್, ನಾಗೇಶ್ ಪಾಣತ್ತಲೆ, ಹಂಪಾ ನಾಗರಾಜು, ಗವಿಮಠ ರವಿ, ಟಿ. ಅನೂಪ್ ರಾಘ್, ನಿಶಾಂತ್ ಪಾಲ್, ಎ.ಕೃಷ್ಣಜೀರಾವ್ ಇನ್ನಿತರರು ಉಪಸ್ಥಿತರಿದ್ದರು.

**ಚಾಮರಾಜದಲ್ಲಿ ಕಮಲ ಕದನ**

# ಮಾಜಿ ಸಂಸದ ಕಣಕ್ಕಿಳಿಯುವ ಇಂಗಿತ: ಮಾಜಿ ಶಾಸಕ ಕಿಡಿ

ಮೈಸೂರು: 2028ರ ವಿಧಾನಸಭಾ ಚುನಾವಣೆ ಇನ್ನೂ ಮುಂದಿರುವ ಈ ಹೊತ್ತಿನಲ್ಲೇ ಚಾಮರಾಜ ವಿಧಾನ ಸಭಾ ಕ್ಷೇತ್ರದಲ್ಲಿ ಗದ್ದುಗೆಗೆ ಕಮಲ ಕಲಿಗಳ ಗುದ್ದಾಟ ಬಯಲಾಗಿದೆ

ಲೋಕಸಭಾ ಚುನಾವಣೆ ಟಿಕೆಟ್ ನಿಂದ ವಂಚಿತರಾದ ಪ್ರತಾಪಸಿಂಹ ಹೆಚ್ಚಾಗಿ ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಸುತ್ತಾಟ ನಡೆಸಿರುವ ಬಗ್ಗೆ ಸಾಕಷ್ಟು ಗುಸು ಗುಸು ಉಂಟಾಗಿತ್ತು. ಈ ಬಗ್ಗೆ ನಿನ್ನೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಾಜಿ ಸಂಸದ ಪ್ರತಾಪಸಿಂಹ ಚಾಮರಾಜ ಕ್ಷೇತ್ರದಿಂದ ಸ್ಪರ್ಧಿಸುವ ಬಗ್ಗೆ ಇಂಗಿತ ವ್ಯಕ್ತಪಡಿಸಿದರು. ಈ ಹಿನ್ನೆಲೆಯಲ್ಲಿ ಇಂದು ಮಾತನಾಡಿದ ಚಾಮರಾಜ ಕ್ಷೇತ್ರದ ಮಾಜಿ ಶಾಸಕ ಹಾಗೂ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಕಿಡಿಕಾರಿದ್ದಾರೆ. ಈ ಬಗ್ಗೆ ಮಾತನಾಡಿ, ಮಾಜಿ ಸಂಸದ ಪ್ರತಾಪಸಿಂಹಗೆ ಕ್ಷೇತ್ರದ ಯಾವ ಮೂಲೆ ಗೊತ್ತಿದಿಯೋ ಗೊತ್ತಿಲ್ಲ. ಇಡೀ ಕ್ಷೇತ್ರದ ಗಲ್ಲಿ ಗೊತ್ತಿರುವುದು ನನಗೆ ಮಾತ್ರ. ಇಲ್ಲಿನ ಕಾರ್ಯಕರ್ತರಿಗೆ ಗೊತ್ತಿರುವುದು ನಾನು ಮಾತ್ರ ಎಂದರು.

ಲೋಕಸಭಾ ಚುನಾವಣೆಯಲ್ಲಿ ಬಂದೂ ಪ್ರಚಾರ ಮಾಡಿದ್ದಿರಾ? ವಿಧಾನ ಸಭಾ ಚುನಾವಣೆಯಲ್ಲಿ ಹೋರಾಟ ಮಾಡಲು ಬಂದು ಶಕ್ತಿ ತುಂಬಿದಿದ್ದರಾ? ಲೋಕಸಭಾ ಚುನಾವಣೆಯಲ್ಲಿ ನಾವು ಅವರ ಬೆಂಬಲಕ್ಕೆ ನಿಂತಿದ್ದೆವು. ಭಾರತೀಯ ಜನತಾ ಪಾರ್ಟಿ ಹಾಗೂ ನರೇಂದ್ರ ಮೋದಿಯವರ ಮುಖ ನೋಡಿ ಅವರಿಗೆ ಮತ ಹಾಕಿದ್ದಾರೆ. ವೈಯುಕ್ತಿಕ ವರ್ಚಸ್ಸು ಅವರಿಗೆ ಇದ್ದಿದ್ದರೆ ಅವರಿಗೆ ಕಳೆದ ಲೋಕಸಭಾ ಚುನಾವಣೆಯಲ್ಲಿ ಯಾಕೆ ಟಿಕೇಟ್ ಕೈ ತಪ್ಪುತ್ತಿತ್ತು ಹೇಳಲಿ. ವೈಯುಕ್ತಿಕ ವರ್ಚಸ್ಸು ಇದ್ದಿದ್ದರೆ ಅವರ ವ್ಯಾಪ್ತಿಗೆ ಬರುವ ಎಷ್ಟು ಜಿಲ್ಲಾ ಪಂಚಾಯಿತಿಗಳನ್ನು ಗೆಲ್ಲಿಸಿದ್ದಾರೆ. ನಾನು ಶಾಸಕನಾಗಿದ್ದ ಅವಧಿಯಲ್ಲಿ ಅವರು ಕೈ ಆಡಿಸಿ ಕೆಲವರಿಗೆ ಟಿಕೇಟ್ ಕೊಡಿಸಿದರೂ ಗೆಲ್ಲಿಸಿದ್ದಾರಾ? ನಾನು ಆರು ಮಂದಿಯನ್ನು ಗೆಲ್ಲಿಸಿಕೊಂಡಿದ್ದೇನೆ ಎಂದು ಹೇಳಿದರು. ವರ್ಚಸ್ಸು ಇದ್ದರೆ ಗೆಲ್ಲಿಸಬೇಕಲ್ಲವೆ? ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ವರ್ಚಸ್ಸಿನಿಂದ 136 ಸೀಟು ಗೆಲ್ಲಿಸಿದ್ದರು. ಇವರ ಮಿತಿಯಲ್ಲಿಎಷ್ಟು ಮಂದಿ ಗೆಲ್ಲಿಸಿದ್ದೀರಿ. ಇವರು ಗೆದ್ದಿದ್ದೆ ನರೇಂದ್ರ ಮೋದಿಯವರ ವರ್ಚಸ್ಸಿನಲ್ಲಿ ಆಗಿದೆ ಎಂದರು.





ನಾನು ಗೆದ್ದಿದ್ದು ನರೇಂದ್ರ ಮೋದಿ ವರ್ಚಸ್ಸಿನಲ್ಲೇ ಆದರೆ ಗೆಲುವಿಗೆ ಹೋರಾಟ ಮಾಡಿದ್ದೇನೆ. ಅವರ ಗೆಲುವಿಗೂ ನಾನು ಹೋರಾಟ ಮಾಡಿದ್ದೇನೆ. ಈಗ ಯಾವ ನೈತಿಕತೆಯಿಂದ ಬಂದು ಕ್ಷೇತ್ರದ ಟಿಕೇಟ್ ಕೇಳುತ್ತಿದ್ದಾರೆ.

ಮಹಾರಾಜ ಜತೆ ಬಂದು ಇವರು ಪ್ರಚಾರ ಮಾಡಿದರಾ? ನಾನು ಪ್ರಚಾರ ಮಾಡಿ 56 ಸಾವಿರ ಲೀಡ್ ಕೊಡಿಸಿದ ಮೇಲೆ ಈ ಕ್ಷೇತ್ರನಿಮಗೆ ಬೇಕಾಯಿತೇ? ರಾಜ್ಯ ನಾಯಕ, ಹಿಂದೂ ಹುಲಿ ಎನ್ನುತ್ತಿರಲ್ಲ ಹೋಗಿ ರಾಜ್ಯದಲ್ಲಿ ಬೇರೆಡೆ ಹೋಗಿ ಮಾಡಿ. ಬೇರೆ ಕ್ಷೇತ್ರದಲ್ಲಿ ಹೋಗಿ ನಿಂತುಕೊಳ್ಳಿ. ತಾಕತ್ ಇಲ್ಲವೆ ಎಂಟು ಕ್ಷೇತ್ರದಲ್ಲಿ ಹೋಗಿ ನಿಂತುಕೊಳ್ಳಿ. ಬೇರೆಯವರಿಗೆ ಬಡವರ ಮಕ್ಕಳ ಬಲಿ ತೆಗೆದುಕೊಳ್ಳಬೇಡಿ ಎನ್ನುತ್ತೀರಿ. ಈಗ ನನ್ನನ್ನು ಬಲಿ ತೆಗೆದುಕೊಳ್ಳಲು ಹೊರಟಿದ್ದಿರಿ. ನನ್ನ ಬಲಿ ತೆಗೆದುಕೊಂಡು ನೀವು ಶಾಸಕರಾಗಬೇಕಾ? 32 ವರ್ಷದಿಂದ ಪಕ್ಷಕ್ಕಾಗಿ ದುಡಿದಿಲ್ಲವೇ? ಪಕ್ಷಕ್ಕಾಗಿ ನೀವೇನೂ ಮಾಡಿದ್ದಿರಿ? ಎಂದರು.

ಮುಂದಿನ ದಿನಗಳಲ್ಲಿ ನಾನೇನೂ ಮಾಡಿದ್ದೀನಿ? ನಾನೇನೂ ಅಭಿವೃದ್ಧಿ ಮಾಡಿದ್ದಿನಿ? ಎಷ್ಟು ಜನ ಕಾರ್ಯಕರ್ತರನ್ನು ಕರೆತಂದಿದ್ದಿರಿ? ಗೆಲ್ಲಿಸಿದ್ದಿರಿ ಎಂದು ಬಹಿರಂಗವಾಗಿ ಹೇಳಿ ಚರ್ಚೆ ಆಗಲಿ ಎಂದರು. 2028ಕ್ಕೆ ಜನ ಹಾಗೂ ಪಕ್ಷ ನನ್ನ ಕೈ ಬಿಡುವುದಿಲ್ಲ. ಈ ಬಗ್ಗೆ ಬಹಿರಂಗ ಸವಾಲು ಹಾಕುತ್ತೇನೆ. ಕಾರ್ಯಕರ್ತರು ನನ್ನ ಜತೆ ಇದ್ದಾರೆ ಎಂದು ಬಹಿರಂಗವಾಗಿ ಸವಾಲು ಹಾಕಿದ್ದಾರೆ. ಆ ಮೂಲಕ ಮುಸುಕಿನ ಗುದ್ದಾಟದಲ್ಲಿದ್ದ ಕಮಲ ನಾಯಕರ ಕಚ್ಚಾಟದ ಆಕ್ರೋಶ ಬಹಿರಂಗವಾಗಿದೆ.

# ರೋಟರಿ ಕಣ್ಣಿನ ಆಸ್ಪತ್ರೆಗೆ ಜಾಗ ಕೊಡಿಸುವೆ: ಶಿಲ್ಪಾನಾಗ್



ಚಾಮರಾಜನಗರ: ಸೇವಾ ಕಾರ್ಯ ಮಾಡುತ್ತಿರುವ ರೋಟರಿ ಸಂಸ್ಥೆಯ ಕಣ್ಣಿನ ಆಸ್ಪತ್ರೆಗೆ ಜಿಲ್ಲಾಡಳಿತ ವತಿಯಿಂದ ಜಾಗ ಕೊಡಿಸುವುದಾಗಿ ವರ್ಗಾವಣೆ ಗೊಂಡ ಜಿಲ್ಲಾಧಿಕಾರಿ ಶಿಲ್ಪಾನಾಗ್ ಹೇಳಿದರು.

ನಗರದ ರೋಟರಿ ಭವನದಲ್ಲಿ ರೋಟರಿ ಸಂಸ್ಥೆ, ರೋಟರಿ ಸಿಲ್ಕ್ ಸಿಟಿ ಹಾಗೂ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು. ರೋಟರಿ ಸಂಸ್ಥೆಯು ಚಾಮರಾಜನಗರದಲ್ಲಿ ಕಣ್ಣಿನ ಆಸ್ಪತ್ರೆಗೆ ಜಿಲ್ಲಾಡಳಿತ ವತಿಯಿಂದ ಜಾಗ ಕೊಡಿಸುವಂತೆ ಮನವಿ ಮಾಡಿದ್ದಾರೆ. ನಾನು ಬೇರೆಕಡೆ ವರ್ಗಾವಣೆಯಾಗಿದ್ದರು ಕೂಡ ಜಿಲ್ಲಾಡಳಿತದೊಂದಿಗೆ ಸಂಪರ್ಕದಲ್ಲಿದ್ದು ರೋಟರಿ ಕಣ್ಣಿನ ಆಸ್ಪತ್ರೆಗೆ ಜಾಗ, ಸಿಎಸ್‌ಆರ್ ಅನುದಾನ ಮುಂದುವರಿಸುವುದಾಗಿ ಭರವಸೆ ನೀಡಿದರು. ಯಾರೋ ಒಬ್ಬರಿಂದ ಒಂದು ತಂಡವಾಗಿ ಕೆಲಸ ಮಾಡಿದರೆ ಅಭಿವೃದ್ಧಿ ಸಾಧ್ಯವಾಗುತ್ತದೆ. ನಮ್ಮೊಂದಿಗೆ ಎಲ್ಲ ಅಧಿಕಾರಿಗಳು ಒಗ್ಗಟ್ಟಾಗಿ ಕೆಲಸ ಮಾಡಿದ ಕಾರಣದಿಂದ ಜಿಲ್ಲೆಯಲ್ಲಿ. ಅಭಿವೃದ್ಧಿಗಳು ಕಾರ್ಯಕ್ರಮಗಳು ಯಶಸ್ವಿಯಾಯಿತು. ಜಿಲ್ಲೆಯಲ್ಲಿ ಉತ್ತಮ ಸೇವೆ ಸಲ್ಲಿಸಿದ ಆತ್ಮತೃಪ್ತಿ ನನಗಿದೆ. ಚಾಮ ರಾಜನಗರ ಜಿಲ್ಲೆಯು ನನ್ನ ಅಚ್ಚುಮೆಚ್ಚಿನ ಜಿಲ್ಲೆ ಯಾಗಿದ್ದು, ಇದನ್ನು ಮುಂದುವರೆದ ಜಿಲ್ಲೆಯಾಗಿ ನೋಡಬೇಕು ಆಗಾಗಿ ನಾನು ರಾಜ್ಯಮಟ್ಟದಲ್ಲಿದ್ದರು ಜಿಲ್ಲೆಗೆ ವಿಶೇಷ ಒತ್ತು ನೀಡುವುದಾಗಿ ತಿಳಿಸಿದರು.

ರೋಟರಿ ಸಂಸ್ಥೆಯ ಜಿಲ್ಲಾ ಸಹಾಯಕ ಗೌರ್ನರ್ ದೊಡ್ಡರಾಯಪೇಟೆ ಗಿರೀಶ್ ಮಾತನಾಡಿ, ಜಿಲ್ಲೆಯ ಅಭಿವೃದ್ಧಿ ಪಡಿಸಿದ ಸಾಲಿನಲ್ಲಿ ಹಿಂದಿನ ಜಿಲ್ಲಾಧಿಕಾರಿ ಹರ್ಷಗುಪ್ತ ನಂತರ ಶಿಲ್ಪಾನಾಗ್ ಅವರು ಹೆಚ್ಚಿನ ಒತ್ತು ನೀಡಿ ಹೆಸರುವಾಸಿಯಾಗಿದ್ದರು. ಸರ್ಕಾರಿ ಸೇವೆಯಲ್ಲಿ ನಿವೃತ್ತಿ, ವರ್ಗಾವಣೆ ಸರ್ವೇಸಾಮಾನ್ಯ ವಾದದ್ದು, ಶಿಲ್ಪಾನಾಗ್ ಅವರು ಜಿಲ್ಲೆಯ ಅಭಿವೃದ್ಧಿ ಗಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ಮುಂದಿನ ದಿನಗಳಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಬರುವಂತ ಅವಕಾಶ ದೊರೆಯಲಿ ಎಂದು ಆಶಿಸಿದರು. ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರ ಮಾತನಾಡಿ, ಚಾಮರಾಜನಗರ ಜಿಲ್ಲೆಯಲ್ಲಿ 25 ವರ್ಷದಿಂದ ಅನೇಕ ಜಿಲ್ಲಾಧಿಕಾರಿಗಳು ಬಂದು ಸೇವೆ ಸಲ್ಲಿಸಿ ಹೋಗಿದ್ದಾರೆ. ಅದರಲ್ಲಿ ಕೆಲವು. ಅಧಿಕಾರಿಗಳು ನೆನಪಿನಲ್ಲಿ ಉಳಿಸುವ ಸೇವೆ ಸಲ್ಲಿಸಿ ಹೋಗುತ್ತಾರೆ ಅ ಸಾಲಿನಲ್ಲಿ... ಹರ್ಷಗುಪ್ತ, ಶಿಲ್ಪಾನಾಗ್ ಅವರು ಬರುತ್ತಾರೆ. ಅವರು ಜನಮಾನಸದಲ್ಲಿ ಉಳಿಯುವ ಕೆಲಸ. ಮಾಡಿದ್ದಾರೆ ಎಂದರು.

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಪ್ರಭಾಕರ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬದನಗುಪ್ಪೆ, ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶ ಮಾಡಿದರು. ಅಲ್ಲಿಗೆ.. ಯಾರು ಕೈಗಾರಿಕೋದ್ಯಮಿಗಳು ಬರುತ್ತಿರಲಿಲ್ಲ. ಶಿಲ್ಪಾನಾಗ್ ಅವರು ಜಿಲ್ಲಾಧಿಕಾರಿಯಾಗಿ ಜಿಲ್ಲೆಗೆ ಬಂದ ಮೇಲೆ ಸರ್ಕಾರದೊಂದಿಗೆ ಮಾತುಕತೆ ನಡೆಸಿ ಜಿಲ್ಲೆಗೆ ಕೈಗಾರಿಕೋದ್ಯಮಿಗಳು ಬರುವಂತೆ ಮಾಡಿ ಕೈಗಾರಿಕಾ ಬೆಳವಣಿಗೆ ಅವಕಾಶ ಮಾಡಿಕೊಟ್ಟರು ಎಂದರು. ಕಾರ್ಯಕ್ರಮದಲ್ಲಿ ರೋಟರಿ ಕಾರ್ಯದರ್ಶಿ ಸಿದ್ದರಾಜು, ರೋಟರಿ ಸಿಲ್ಕ್ ಸಿಟಿ ಅಧ್ಯಕ್ಷ ಶಮಿತ್‌ಕುಮಾರ್, ಕಾರ್ಯದರ್ಶಿ ಸಂತೋಷ್, ಅಮೃತಾ ಪ್ರಭಾಕರ್ ಹಾಗೂ ಪದಾಧಿಕಾರಿಗಳು ಹಾಜರಿದ್ದರು.

## ಫುಡ್ ಕಿಟ್ ವಿತರಣೆ



ಎಚ್.ಡಿ.ಕೋಟೆ: ತಾಲೂಕಿನ ಹಾಡಿಯಲ್ಲಿರುವ ಜನರ ಸ್ಥಿತಿ ಹೇಳತೀರ ದಾಗಿದೆ. ಮೂಲಭೂತ ಸೌಕರ್ಯದಿಂದ ಸಂಪೂರ್ಣ ವಂಚಿತರಾಗಿ ದ್ದಾರೆ. ಪ್ರಪಂಚದ ಅರಿವು ಇಲ್ಲದೆ ಬದುಕುತ್ತಿರುವ ಆದಿವಾಸಿಗಳು ಮುಗ್ಧರು, ಅಮಾಯಕರು, ಅವಿದ್ಯಾವಂತರು. ತಮಗೆ ಸಿಗಬೇಕಾದ ಸೌಲಭ್ಯಗಳ ಬಗ್ಗೆ ಅರಿವಿಲ್ಲದೆ ಬದುಕುತ್ತಿದ್ದಾರೆ. ಈ ಸಂಬಂಧ ನಮ್ಮ ಸಂಸ್ಥೆ ಅಧ್ಯಯನ ನಡೆಸಿ, ಮಾಹಿತಿ ಕಲೆಹಾಕಿದ್ದು, ಅವರ ಜೀವನ ಮಟ್ಟ ಸುಧಾರಿಸಲು, ಸಮಾಜದ ಮುಂಚೂಣಿಗೆ ತರಲು ಮುಂದಾಗಿದೆ ಎಂದು ಸುರಕ್ಷಾ ಜನಸೇವಾ ಟ್ರಸ್ಟ್ ನ ಪ್ರಧಾನ ಕಾರ್ಯದರ್ಶಿ ನಾಗರತ್ನ ಹೇಳಿದರು.

ತಾಲೂಕಿನ ಸೋನಹಳ್ಳಿ ಹಾಡಿಗೆ ಭೇಟಿ ಕೊಟ್ಟು ಆದಿವಾಸಿಗಳಿಗೆ ಫುಡ್ ಕಿಟ್ ವಿತರಿಸಿ ಮಾತನಾಡಿದರು. 2011, ಅಕ್ಟೋಬರ್ 3 ರಂದು ತಲೆಯೆತ್ತಿರುವ ಮೈಸೂರಿನ ಸುರಕ್ಷಾ ಜನಸೇವಾ ಟ್ರಸ್ಟ್, ಅನೇಕ ಸಮಾಜಮುಖಿ ಕೆಲಸಗಳನ್ನು ಮಾಡುತ್ತಾ ಬಂದಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳು, ವಿಕಲಚೇತನರಿಗೆ ಬೇಕಾಗುವ ಸಲಕರಣೆಗಳು, ಹಿರಿಯ ನಾಗರಿಕರಿಗೆ ಪಿಂಚಣಿ ವ್ಯವಸ್ಥೆ, ಮಹಿಳಾ ಸಂಘಟನೆಗಳ ಮೂಲಕ ಮಹಿಳೆಯರ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಆರ್ಥಿಕ ನೆರವು, ಹೆಣ್ಣು ಮಕ್ಕಳಿಗೆ ಬ್ಯೂಟಿಷಿಯನ್, ಟೈಲರಿಂಗ್ , ಹೋಂ ಪ್ರಾಡಕ್ಟ್ ಕ್ಲಾಸ್, ಕೃತಕ ಚಿನ್ನಾಭರಣ ಮೇಕಿಂಗ್ ತರಬೇತಿ ಸೇರಿದಂತೆ ಅನೇಕ ಸಮಾಜಮುಖಿ ಕೆಲಸ ಕಾರ್ಯ ಮಾಡುತ್ತಾ ಬರುತ್ತಿದೆ. ಇದರ ಜೊತೆಗೆ ನಾಗರಹೊಳೆ, ಬಂಡೀಪುರ ಅರಣ್ಯ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಹಾಡಿ ಜನರರು, ಮೂಲಭೂತ ಸೌಕರ್ಯದಿಂದ ಸಂಪೂರ್ಣವಾಗಿ ವಂಚಿತರಾಗಿರುವ ಬಗ್ಗೆ ಎರಡು ವರ್ಷಗಳ ಹಿಂದೆ ನಡೆಸಿದ್ದ ಸರ್ವೆಯಲ್ಲಿ ಗೊತ್ತಾಯ್ತು. ಹೀಗಾಗಿ ಅವರಿಗೆ ವಿದ್ಯಾಭ್ಯಾಸ ಎಷ್ಟು ಮುಖ್ಯ ಎಂಬುದರ ಬಗ್ಗೆ ಅರಿವು ಮೂಡಿಸಿ, ಅವರ ಮಕ್ಕಳನ್ನು ಶಾಲೆಗೆ ಸೇರಿಸುವುದು, ಉಚಿತವಾಗಿ ಪುಸ್ತಕ, ನೋಟ್ ಬುಕ್ ಸೇರಿದಂತೆ ಶಿಕ್ಷಣ ಕೊಡಿಸಲು ಉತ್ತೇಜಿಸಲಾಗುತ್ತಿದೆ. ಜೊತೆಗೆ ಅವರಿಗೆ ಪುನರ್ವಸತಿ ಕಲ್ಪಿಸುವ ನಿಟ್ಟನಲ್ಲಿ ಸದ್ಯ ಆಹಾರ ಕಿಟ್ ನೀಡುತ್ತಾ ಬರುತ್ತಿದ್ದೇವೆ ಎಂದು ನಾಗರತ್ನ ಹೇಳಿದರು. ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷ ವಿಜಯ್ ಕುಮಾರ್ ಮಾತನಾಡಿ, ನಮ್ಮ ಸಮುದಾಯದ ಬದುಕು ಹೇಳತೀರದಾಗಿದೆ. ಒಂದೊತ್ತಿನ ಊಟಕ್ಕೂ ಪರದಾಡುತ್ತಿದ್ದಾರೆ. ಗಿರಿಜನರ ಏಳಿಗೆಗಾಗಿ ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೊಳಿಸಿದೆ. ಆದರೆ, ಅವುಗಳು ನಮ್ಮ ಸಮುದಾಯದ ಜನರ ತಲುಪುತ್ತಿಲ್ಲ. ಅರಣ್ಯ ಹಕ್ಕು ಕಾಯ್ದೆ ಕೂಡ ಅದೇ ಪಟ್ಟಿಗೆ ಸೇರಿದೆ. ಸುರಕ್ಷಾ ಜನಸೇವಾ ಟ್ರಸ್ಟ್ ನಮ್ಮ ಸಮುದಾಯದ ಸ್ಥಿತಿಗತಿ ಬಗ್ಗೆ ಅಧ್ಯಯನ ನಡೆಸಿ, ಇದೀಗ ಅವರ ಬದುಕಿಗೆ ಒಂದಿಷ್ಟು ನೆರವು ನೀಡಲು ಮುಂದಾಗಿದೆ. ಇದಕ್ಕೆ ನಾವು ಅವರಿಗೆ ಅಭಿನಂದನೆ ಸಲ್ಲಿಸುತ್ತೇವೆ ಎಂದು ಹೇಳಿದರು. ಈ ವೇಳೆ ಸುರಕ್ಷಾ ಜನಸೇವಾ ಟ್ರಸ್ಟ್ ನ ಪ್ರಧಾನ ಕಾರ್ಯದರ್ಶಿ ನಾಗರತ್ನ, ನಾಗೇಶ್, ಶ್ರೀಧರ್, ಗಿರೀಶ್, ಗಂಗಾಧರ್, ಚಿನ್ನು ಮತ್ತು ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷ ವಿಜಯ್ ಕುಮಾರ್ ಉಪಸ್ಥಿತರಿದ್ದರು.

## ಜ.14ರಂದು ಲೋಕ್ ಅದಾಲತ್

ಬೆಂಗಳೂರು: ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಜನವರಿ 14 ರಂದು ರಾಷ್ಟ್ರೀಯ ಲೋಕ್ ಅದಾಲತ್ ಅನ್ನು ರಾಜ್ಯಾದಾದ್ಯಂತ ಎಲ್ಲಾ ನ್ಯಾಯಾಲಯಗಳ ಆವರಣದಲ್ಲಿ ವರ್ಚುವಲ್ ಮತ್ತು ಭೌತಿಕವಾಗಿ ನಡೆಸಲಿದೆ. ಹಾಗಾಗಿ ಬಾಕಿ ಇರುವ ವಿವಾದಗಳನ್ನು ಪರಿಹರಿಸಲು ಆಸಕ್ತಿ ಹೊಂದಿರುವ ಸಾರ್ವಜನಿಕರು ಹತ್ತಿರದ ತಾಲೂಕು ಕಾನೂನು ಸೇವೆಗಳ ಸಮಿತಿ ಅಥವಾ ಆಯಾ ನ್ಯಾಯಾಲಯದ ಆವರಣದಲ್ಲಿ ಸ್ಥಾಪಿಸಲಾದ ಜಿಲ್ಲಾ ಕಾನೂನು ಸೇವಿಗಳ ಪ್ರಾಧಿಕಾರವನ್ನು ಸಂಪರ್ಕಿಸಲು ವಿನಂತಿಸಿದೆ.


ಸಂಪರ್ಕ ಸಂಖ್ಯೆಗಳು ವೆಬ್ ಸೈಟ್ www.kslsa.kar.nic.in ಅಲ್ಲಿ ಲಭ್ಯವಿರುತ್ತದೆ ಎಂದು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಹೆಚ್.ಶಶಿಧರ ಶೆಟ್ಟಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಭಾರತೀಯ ಪರಂಪರೆಯಲ್ಲಿ ವಿಮರ್ಶೆಯ ಪರಂಪರೆ ಇರಲಿಲ್ಲ

### ಎಚ್.ಎಸ್. ಶಿವಪ್ರಕಾಶ್ ಹೇಳಿಕೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ ಪ್ರತಿ?ನದ ಸಂಯುಕ್ತ ಆಶ್ರಯದಲ್ಲಿ ಇಂದು ಕನ್ನಡ ಭವನದ ನಯನ ಸಭಾಂಗಣದಲ್ಲಿ, 'ಭಾರತೀಯ ವಿಮರ್ಶೆ: ಸಮಕಾಲೀನ ಸಂದರ್ಭ' ಎಂಬ ವಿ?ಯದ ಕುರಿತು ರಾಷ್ಟ್ರೀಯ ಸಂವಾದ ಕಾರ್ಯಕ್ರಮದಲ್ಲಿ ಹಿರಿಯ ಕವಿಗಳಾದ ಎಚ್.ಎಸ್. ಶಿವಪ್ರಕಾಶ್ ಅವರು ದೀಪ ಬೆಳಗುವ ಮೂಲಕ ಸಂವಾದಕ್ಕೆ ಚಾಲನೆ ನೀಡಿ ಮಾತನಾಡಿ, ಭಾರತೀಯ ಪರಂಪರೆಯಲ್ಲಿ ಒಂದು ವಿಮ ರ್ಶೆಯ ಪರಂಪರೆ ಎನ್ನುವುದು ಇರಲಿಲ್ಲ. ಕಾವ್ಯ ವೀಮಾಂಸೆ ಇತ್ತು. ವಿಮರ್ಶೆ ಎನ್ನುವ ಸಾಹಿತ್ಯ ಪ್ರಕಾರ ದಕ್ಷಿಣದಿಂದ ಬಂದಿದೆ. ಕವಿಗಳೇ ವಿಮರ್ಶಕರಾಗಿದ್ದ ಕಾಲವೊಂದಿತ್ತು. ಅದಕ್ಕೆ ಉತ್ತಮ ಉದಾಹರಣ ಬೇಂದ್ರೆ ಎಂದರು. ಇನ್ನು ವಚನದಲ್ಲಿ ಕಾವ್ಯ ವಿಮರ್ಶೆಯ ಕಟುವಾದ ಟೀಕೆಯಿದೆ. ಆದರೆ ಅದು ವಚನದ ಚೌಕಟ್ಟಿನಲ್ಲಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಪ್ರತಿ?ನದ ಸದಸ್ಯರಾದ ಡಾ. ಎಂ.ಎಸ್. ಆಶಾದೇವಿ ಅವರು, ಇಂದಿನ ಸಂಕೀರ್ಣ ಸಂದರ್ಭದಲ್ಲಿ ಸಾಹಿತ್ಯಿಕ ವಿಮ ರ್ಶೆಯ ಅಗತ್ಯತೆ ಮತ್ತು ಅದರ ಆಶಯಗಳ ಕುರಿತು ಸವಿಸ್ತಾ ರವಾಗಿ ವಿವರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರತಿ?ನದ ಅಧ್ಯಕ್ಷರಾದ ಮೋಹನ್ ಕೊಂಡಜ್ಜಿ ಅವರು ವಹಿಸಿ ದ್ದರು. ಮುಂದುವರಿದು, ಮೂರನೇ ಗೋಷ್ಠಿಯಲ್ಲಿ ಚಿತ್ರದುರ್ಗದ ಹಿರಿಯ ಲೇಖಕಿ ತಾರಿಣಿ ಶುಭದಾಯಿನಿ ಅವರು 'ದಲಿತ ಮತ್ತು ಮಹಿಳಾ ಸಂದರ್ಭದ ವಿಮರ್ಶೆ' ಕುರಿತು ಮಾತನಾಡಿ, ಈ ಆಯಾಮಗಳಲ್ಲಿ ವಿಮರ್ಶಾ ಪ್ರಜ್ಞೆ ಬೆಳೆದು ಬಂದ ಹಾದಿಯನ್ನು ವಿವರಿಸಿದರು. ಕಾರ್ಯಕ್ರಮದಲ್ಲಿ ರಾಷ್ಟ್ರಕವಿ ಡಾ ಜಿ. ಎಸ್ ಶಿವರುದ್ರಪ್ಪ ಪ್ರತಿ?ನದ ಸದಸ್ಯ ಕಾರ್ಯದರ್ಶಿಗಳಾದ ಆರ್. ಚಂದ್ರಶೇಖರ, ಸದಸ್ಯ ಸಂಚಾಲಕ ಡಾ.ಸಿರಾಜ್ ಅಹಮದ್ ಹಾಗೂ ಡಾ. ಮೂಡ್ನಾಕೂಡು ಚಿನ್ನಸ್ವಾಮಿ, ಜಾಣಗೆರೆ ವೆಂಕಟರಾಮಯ್ಯ, ಆರ್.ಜಿ. ಹಳ್ಳಿ ನಾಗರಾಜ್ ಸಿ.ಕೆ. ಗುಂಡಣ್ಣ, ಡಾ. ಸಾಸ್ವೇಹಳ್ಳಿ ಸತೀಶ್, ಚಂದ್ರಶೇಖರ ನಂಗಲಿ ಇದ್ದರು.



# ಮುಖ್ಯಮಂತ್ರಿ ಟ್ವಿಟ್, ಮಾಹಿತಿಗೂ ಸಿಗದ ಮನ್ನಣೆ

## ಯುವಕನಿಗೆ ಖಾಯಂ ಆಗದ ನೌಕರಿ

ಮೈಸೂರು: ಸ್ವತಃ ರಾಜ್ಯದ ಮುಖ್ಯಮಂತ್ರಿಗಳು ಟ್ವಿಟ್ ಮಾಡಿ, ಮೃತರ ಮನೆಗೆ ಹೋಗಿ ನೌಕರಿಯ ಭರವಸೆ ನೀಡಿ ವರ್ಷ ಕಳೆದರೂ ಸಹ ಯುವಕನಿಗೆ ಇದುವರೆವಿಗೂ ಉದ್ಯೋಗ ಭಾಗ್ಯ ದೊರಕಿಲ್ಲವಾಗಿದೆ.

ಹೌದು ಮೈಸೂರು ತಾಲ್ಲೂಕಿನ ಡಿ.ಸಾಲುಂಡಿ ಗ್ರಾಮದಲ್ಲಿ 2024ರಲ್ಲಿ ಮೇ.21ರಂದು ಕಲುಷಿತ ನೀರು ಸೇವಿಸಿ ಕನಕರಾಜು ಎಂಬುವವರು ಮೃತರಾಗಿದ್ದರು. ಈ ಹಿನ್ನೆಲೆಯಲ್ಲಿ ಕನಕರಾಜು ಕುಟುಂಬಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬದಲ್ಲಿ ರವಿ ಎಂಬ ಯುವಕನಿಗೆ ನೌಕರಿ ಭರವಸೆ ನೀಡಿದ್ದರು. ಈ ಬಗ್ಗೆ ಟ್ವಿಟ್ ಸಹ ಮಾಡಿದ್ದರು.

ಪ್ರಸ್ತುತ ಬೋಗಾದಿ ಪಟ್ಟಣ ಪಂಚಾಯಿತಿಯಲ್ಲಿ ಡಿಟಿಪಿ ಅಪರೇಟರ್ ಆಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಆದರೆ, ಪಟ್ಟಣ ಪಂಚಾಯಿತಿ ಪಾಲಿಕೆಗೆ ಸೇರ್ಪಡೆಗೊಂಡರೆ ಈತನ ಕೆಲಸ ಹೋಗುವವ ಸಂಭವವಿದೆ. ಅಲ್ಲದೆ ಇದುವರೆವಿಗೂ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದು, ಇದುವರೆವಿಗೂ ಯಾವುದೇ ನೇಮಕಾತಿಆದೇಶ ಪತ್ರ ನೀಡಿಲ್ಲವಾಗಿದೆ. ಹೀಗಾಗಿ ಮುಂದೇನೂ ಎಂಬ ಚಿಂತೆ ಅವರನ್ನು ಕಾಡಲಾರಂಭಿಸಿದೆ.

ಮನೆ ಬಿದ್ದೋಗಿದೆ. ಅಪ್ಪ ಇಲ್ಲ, ಆಧಾರವಾಗಿದ್ದ ಅಣ್ಣ ತೀರಿದಾಗ ಮನೆ ಕೊಡುವುದಾಗಿ, ಖಾಯಂ ನೌಕರಿ ಕೊಡಿಸುವುದಾಗಿ ಸಿದ್ದರಾಮಯ್ಯರೇ ಹೇಳಿದ್ದರು. ಆದರೆ, ಪಾಲಿಕೆಯಾದರೆ ಕೆಲಸ ಇಲ್ಲ ಎನ್ನುತ್ತಿದ್ದಾರೆ. ಮುಂದೇನೂ ಮಾಡಬೇಕೆಂಬುದು ತಿಳಿಯದಾಗಿದೆ.

▶▶ **ರವಿ** ಯುವಕ

ಸದ್ಯಕ್ಕೆ ಯುವಕ ನಮ್ಮಲ್ಲಿ ಹೊರ ಗುತ್ತಿಗೆಯಡಿ ಕೆಲಸ ಮಾಡುತ್ತಿದ್ದಾರೆ. ಆದರೆ, ಖಾಯಂ ಸಂಬಂಧ ಮೇಲಾಧಿಕಾರಿಗಳ ಆದೇಶ ಬರಬೇಕಿದೆ. ಅದು ಆಗದ ಹೊರತು ಬೇರೆನೂ ಮಾಡಲು ಸಾಧ್ಯವಿಲ್ಲ.

▶▶ **ಸಂಜಯ್**
ಬೋಗಾದಿ ಪಟ್ಟಣ ಪಂಚಾಯಿತಿ ಅಧಿಕಾರಿ.




### ಪರಿಶೀಲಿಸುವೆ ಎಂದ ಸಿಎಂ

ಈ ಕುರಿತು ನಿವಾಸದಲ್ಲಿ ಮಾದ್ಯಮಗಳೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಬಗ್ಗೆ ಪತಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

## ನಾಳೆ ಪ್ರಶಸ್ತಿ-ಪ್ರತಿಭಾ ಪುರಸ್ಕಾರ



ಚಾಮರಾಜನಗರ, ನಗರದ ವರನಟ ಡಾ.ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಜ.8 ರಂದು ಸಂಜೆ 5.30ಕ್ಕೆ ಕೆ.ಪಿ.ಚಿಕ್ಕವೀರಯ್ಯ ಶಿಕ್ಷಕ ಪ್ರಶಸ್ತಿ ಹಾಗೂ ಕೆ.ಸಿ.ಶಿವಪ್ಪ ಪ್ರತಿಭಾ ಪುರಸ್ಕಾರ ಪ್ರದಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪರಿಷತ್ತಿನ ಜಿಲ್ಲಾ ಅಧ್ಯಕ್ಷ ಬಿ.ಕೆ. ರವಿಕುಮಾರ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತ ನಾಡಿದ ಅವರು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಸಮಿತಿ ವತಿಯಿಂದ ಆಯೋಜಿಸಿ ರುವ ಸಮಾರಂಭದಲ್ಲಿ ಪಡಗೂರು ಅಡವೀಮಠದ ಶ್ರೀ ಶಿವಲಿಂಗೇಂದ್ರಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸ ಲಿದ್ದಾರೆ. ರಾಜ್ಯಾಧ್ಯಕ್ಷ ಡಾ.ಸಿ.ಸೋಮ ಶೇಖರ್ ಅಧ್ಯಕ್ಷತೆ ವಹಿಸಲಿದ್ದು, ನಿಕಟ ಪೂರ್ವ ಜಿಲ್ಲಾಧಿಕಾರಿ ಶಿಲ್ಪಾನಾಗ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. 2025– 26 ನೇ ಸಾಲಿನ ಕೆ.ಪಿ.ಚಿಕ್ಕವೀರಯ್ಯ ಶಿಕ್ಷಕ ಪ್ರಶಸ್ತಿಗೆ ಯಳಂದೂರಿನ ಶಿಕ್ಷಕ ರಾಜು ಹಾಗೂ ಕೆ.ಸಿ.ಶಿವಪ್ಪ ಪ್ರತಿಭಾ ಪುರ ಸ್ಕಾರಕ್ಕೆ ಗುಂಡ್ಲು ಪೇಟೆ ತಾಲೂಕಿನ ಮಹಾಲಕ್ಷ್ಮೀ ಆಯ್ಕೆಯಾಗಿದ್ದಾರೆ ಎಂದು ತಿಳಿಸಿದರು. ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶ ಸ್ವಿಗೊಳಿಸಬೇಕೆಂದು ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಪರಿಷತ್‌ನ ಖಜಾಂಜಿ ಪ್ರಭುಸ್ವಾಮಿ, ಮಹಿಳಾ ವೇದಿಕೆ ಅಧ್ಯಕ್ಷೆ ವಸಂತಮ್ಮ, ಪದಾಧಿಕಾರಿಗಳಾದ ನಿಂಗರಾಜು, ಸುಂದರ್ ಹಾಜರಿದ್ದರು.

## ಮೂಲ ಸೌಲಭ್ಯ ನೀಡದೇ ಹಣ ವಸೂಲಿ: ಪ್ರತಿಭಟನೆ



ಗುಂಡ್ಲುಪೇಟೆ: ತಾಲ್ಲೂಕಿನ ಹಿಮವದ್ ಗೋಪಾ ಲಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ಸಾರ್ವಜನಿಕ ಪ್ರವಾಸಿಗರಿಗೆ ಮೂಲ ಭೂತ ಸೌಲಭ್ಯ ಇಲ್ಲ ಹಾಗಾಗಿ ತಪ್ಪಲಿನಲ್ಲಿ ಗೇಟ್ ಹಾಕಿ ಕೊಂಡು ಹಣ ವಸೂಲಿ ಮಾಡುತಿದ್ದಾರೆ

ಲೋಕೋಪಯೋಗಿ ಇಲಾಖೆ ರಸ್ತೆ ಗೆ ಮತ್ತು ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಕ್ಕೆ ಹೋಗಲು ಅರಣ್ಯ ಇಲಾಖೆ ಯವರು ಗೇಟ್ ಹಾಕಲು ಯಾವುದೇ ಅನುಮತಿ ಇಲ್ಲ, ಅಗಾಗಿ ಗೇಟ್ ತೆರವು ಮಾಡಿ ಮುಕ್ತವಾಗಿ ಸಾರ್ವಜನಿಕರಿಗೆ ವಾಹ ನದಲ್ಲಿ ತೆರಳಲು ಅವಕಾಶ ನೀಡು ವಂತೆ ರೈತಸಂಘದ ಮುಖಂಡರು ಪ್ರತಿಭಟನೆ ನಡೆಸಿದರು. ಹಿಮವದ್ ಗೋಪಾಲಸ್ವಾಮಿ ಬೆಟ್ಟದ ರಸ್ತೆ ಲೋಕೋ ಪಯೋಗಿ ಇಲಾ ಖೆಗೆ ಬರುತ್ತದೆ, ದೇವಸ್ಥಾನ ಮುಜರಾಯಿ ಇಲಾಖೆಗೆ ಬರುತ್ತದೆ, ಅಧಿಕಾರಿಗಳ ಕಾರುಗಳಲ್ಲಿ ಬೇಕಾದ ವರನ್ನು ಇಷ್ಟ ಬಂದಂತೆ ಬಿಡುತ್ತಾರೆ, ಆಗಾಗಿ ಸಾರ್ವ ಜನಿಕರ ವಾಹನಗಳಿಗೂ ಮುಕ್ತ ಅವಕಾಶ ನೀಡಬೇಕು ಎಂದು ಪ್ರತಿಭಟಿಸಿದರು. ಚಾಮುಂ ಡಿಬೆಟ್ಟ ಅರಣ್ಯ ಇಲಾಖೆಗೆ ಒಳಪಡುತ್ತದೆ, ಬೆಳಗಿರಿ ರಂಗನಬೆಟ್ಟ ಹುಲಿ ಸಂರಕ್ಷಣ ವಲಯಕ್ಕೆ ಬರುತ್ತದೆ ಆದರೆ ಅಲ್ಲಿಗೆ ಸಾರ್ವ ಜನಿಕರ ವಾಹನಗಳಿಗೆ ಪ್ರವೇಶ ಇರುತ್ತದೆ ಆಗಾದರೆ ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ಮಾತ್ರ ಯಾಕೆ ಪ್ರವೇಶ ನಿಷೇಧ ಹಾಗೆ ಬೇಲದಕುಪ್ಪೆ ಮಾದೇಶ್ವರನ ದೇವಸ್ಥಾನಕ್ಕೂ ನಿರ್ಭಂದ ಏರಿದ್ದು ಸರಿಯಲ್ಲ ಎಂದು ಪ್ರತಿಭಟಿಸಿದರು.

ಬೆಟ್ಟಕ್ಕೆ ರಾಜಕಾರಣಿಗಳು,ಹಿಂಬಾಲಕರು ಅಧಿಕಾರಿಗಳ ವಾಹನ ಬಿಡುವುದು, ಅಲ್ಲದೆ ಪ್ರಧಾನ ಅರ್ಚಕರ ಕಾರು ಹತ್ತಾರು ಭಾರಿ ಬೆಟ್ಟಕ್ಕೆ ಹೊರ ರಾಜ್ಯದವರನ್ನು ಕರೆದೊ ಯ್ಯುತ್ತದೆ, ಸಿಎಫ್ ತಮಿಳುನಾಡಿನ ಜನರಿಗೆ ವಾಹನ ದುರ್ಬಳಕೆ ಮಾಡಿಕೊಳ್ಳುತ್ತಾರೆ ಅದರೆ ಸ್ಥಳೀಯ ಸಾರ್ವ ಜನಿಕರಿಗೆ ಮಾತ್ರ ನಿಷೇಧ ಮಾಡಿದ್ದಾರೆ ಎಂದು ಆರೋಪಿ ಸಿದರು.ಸ್ಥಳಕ್ಕೆ ಅದಿಕಾರಿಗಳ ಭೇಟಿ: ಅಗಮಿಸಿದ ಡಿವೈಎಸ್ಪಿ ಸ್ನೇಹರಾಜ್ ವಲ ಯಾಧಿಕಾರಿ ರೈತರಿಗೆ ಸರಿಯಾದ ಮಾಹಿತಿ ನೀಡುವಂತೆ ಸೂಚಿಸಿದರು, ತಹಶೀಲ್ದಾರ್ ತನ್ಮಯ್ ಮಾತನಾಡಿ ಗೇಟ್ ನಿರ್ಮಾಣ ಮಾಡಲು ಅವಕಾಶ ಯಾವಾಗಿಂತ ಬಂತು ಯಾವ ಮಾನದಂಡದ ಮೇಲೆ ಮಾಡಿ ದ್ದಾರೆ ಎಂಬ ಬಗ್ಗೆ ಮಾಹಿತಿನೀಡಲು ಸೂಚಿಸಿದರು. ವಲಯಾಧಿಕಾರಿ ಮಲ್ಲೇಶ್ ಮಾತನಾಡಿ ಹುಲಿ ಸಂರಕ್ಷಿತ ಪ್ರದೇಶವಾದ್ದ ರಿಂದ ಅರಣ್ಯ ಇಲಾಖೆಗೆ ಒಳಪಡುವುದ ರಿಂದ ಸಾರ್ವಜನಿಕರಿಗೆ ಪ್ರವೇಶವಿಲ್ಲ ಎಂದರು, ಇದಕ್ಕೆ ಒಪ್ಪದ ರೈತರು ಗೇಟ್ ತೆರವಿಗೆ ಪಟ್ಟು ಹಿಡಿದರು. ರೈತಸಂಘದ ರಾಜ್ಯ ಉಪಾಧ್ಯಕ್ಷ ಡಾ.ಗುರುಪ್ರಸಾದ್, ಜಿಲ್ಲಾಧ್ಯಕ್ಷ ಮಹದೇವಪ್ಪ ಮಾಡ್ರಹಳ್ಳಿ, ಉಪಾಧ್ಯಕ್ಷ ಸಂಪತ್ತು ಕುಂದಕೆರೆ,ಹಸಿರುಸೇನೆ ಅಧ್ಯಕ್ಷ ಚಿಕ್ಕಣ್ಣ ಹಿರಿಕಾಟಿ, ತಾಲ್ಲೂಕು ಅಧ್ಯಕ್ಷ ಹೊಸೂರು ಮಹೇಶ್, ಗುರು ಬೆಟ್ಟಹಳ್ಳಿ, ಸುರೇಶ್, ರೇವಣ್ಣ, ಪುಟ್ಟಸ್ವಾಮಿ, ಸತೀಶ್, ರಘು ಅಣ್ಣೂರುಕೇರಿ, ಶಂಭುಲಿಂ ಗಪ್ಪ, ನಾಗೇಂದ್ರ, ಯೋಗೇಶ, ದೊರಸ್ವಾಮಿ, ರವಿ, ಸ್ವಾಮಿ, ಪುಟ್ಟು ,ಚಂದು, ನಿರಂಜನ್ ,ಮಹೇಶ್, ಮತ್ತಿತರರಿದ್ದರು.

**ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾದ ಎಸ್.ಪ್ರಭಾಕರನ್ ಹೇಳಿಕೆ**

# ಕಾಡು ಪ್ರಾಣಿಗಳು ಗ್ರಾಮಗಳತ್ತ ಬರದಂತೆ ತಡೆಯಲು ಅರಣ್ಯ ಇಲಾಖೆ ಕ್ರಮ

ಚಾಮರಾಜನಗರ: ಕಾಡು ಪ್ರಾಣಿಗಳು ಕಾಡಂಚಿನ ಗ್ರಾಮಗಳತ್ತ ಬರದಂತೆ ತಡೆಯಲು ಅರಣ್ಯ ಇಲಾಖೆ ಎಲ್ಲ ಕ್ರಮಗಳನ್ನು ಕೈಗೊಂಡಿದೆ. ರೈಲ್ವೆ ಕಂಬಿ ಬೇಲಿ, ಕಂದಕ, ಸೋಲಾರ್ ಬೇಲಿ ಹಾಕಲಾಗಿದೆ ಎಂದು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾದ ಎಸ್.ಪ್ರಭಾಕರನ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಅಂಚಿನಲ್ಲಿ ಜಮೀನು ಅಥವಾ ಜನರ ಮೇಲೆ ಹುಲಿ, ಆನೆ, ಚಿರತೆ ದಾಳಿ ನಡೆದ ಸಂದರ್ಭ ಅವುಗಳನ್ನು ಸೆರೆ ಹಿಡಿಯಲು ಇತ್ತೀಚೆಗೆ ಎಐ ಕ್ಯಾಮರಾ ಬಳಲಾಗುತ್ತಿದೆ ಎಂದರು. ಸಫಾರಿಯಿಂದ ದಾಳಿ ಹೆಚ್ಚಳ ಎಂಬುದು ಅವೈಜ್ಞಾನಿಕ ಸಫಾರಿಯಿಂದ ಕಾಡು ಪ್ರಾಣಿಗಳು ಗ್ರಾಮಗಳತ್ತ ಬಂದು ಜನರು ಮತ್ತು ಪ್ರಾಣಿಗಳ ಮೇಲೆ ದಾಳಿ ನಡೆಸುವುದು ಹೆಚ್ಚಾಗಿದೆ ಎಂಬುದು ಅವೈಜ್ಞಾನಿಕ ವಾದವಾಗಿದೆ ಎಂದು ಸ್ಪಷ್ಟಪಡಿಸಿದರು. ಈಗಾಗಲೇ ಬಂಡೀಪುರ ಅರಣ್ಯದ ಜಿ.ಎಸ್.ಬೆಟ್ಟ ವಲಯಾರಣ್ಯದ ಅಂಚಿನಲ್ಲಿ ಎಐ ಕ್ಯಾಮರಾವನ್ನು ಪ್ರಾಯೋಗಿಕವಾಗಿ ಬಳಸಲಾಗಿದೆ. ಇದರ ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸಿ ಮುಂದಿನ ದಿನಗಳಲ್ಲಿ ಎಲ್ಲ ಕಡೆ ಬಳಸಲು ಚಿಂತನೆ ನಡೆಸಲಾಗಿದೆ ಎಂದು ಹೇಳಿದರು.



ಹುಲಿ, ಚಿರತೆಗಳನ್ನು ಸೆರೆ ಹಿಡಿಯಲು ಈಗಾಗಲೇ ಡ್ರೋಣ್, ಥರ್ಮಲ್ ಡ್ರೋಣ್ಗಳನ್ನು ಬಳಸಲಾಗುತ್ತಿದೆ. ಇನ್ನೊಂದು ಹೆಜ್ಜೆ ಮುಂದೆ ಹೋಗಿ ಆಧುನಿಕವಾದ ಎಐ ಕ್ಯಾಮರಾಗಳನ್ನು ಬಳಸಲು ಉದ್ದೇಶಿಸಲಾಗಿದೆ ಎಂದು ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸಿದರು. ಇನ್ನೇನು ಬೇಸಿಗೆ ಆರಂಭವಾಗಲಿದ್ದು, ಸಂಭವನೀಯ ಕಾಡ್ಗಿಚ್ಚು ತಡೆಯಲು ಈ ವರ್ಷ 500 ಬೆಂಕಿ ತಡೆ ಕಾವಲುಗಾರರನು ನೇಮಿಸಲಾಗುವುದು. ಇವರಿಗೆ ಕಾಡಿಗೆ ಬೆಂಕಿ ಬಿದ್ದಾಗ ತಡೆಯುವುದು ಹೇಗೆ ಎಂಬುದರ ಕುರಿತು ತರಬೇತಿ ನೀಡಲಾಗುತ್ತದೆ. ಅರಣ್ಯದೊಳಗಿನ 1800 ಕಿ.ಮೀ. ಉದ್ದದ ರಸ್ತೆಗಳ ಬದಿಗಳಲ್ಲಿ ಬೆಂಕಿ ರೇಖೆ ನಿರ್ಮಿಸಲಾಗುವುದು ಎಂದು ತಿಳಿಸಿದರು.

1036 ಚದರ ಕಿ.ಮೀ.ವಿಸ್ತೀರ್ಣದ ಬಂಡೀಪುರ ಹುಲಿ ಸಂರಕ್ಷಿತಾರಣ್ಯದ ವ್ಯಾಪ್ತಿಯಲ್ಲಿ 190 ಹುಲಿಗಳು ಹಾಗೂ 1116 ಆನೆಗಳಿದ್ದು, ಇವುಗಳ ಸಂಖ್ಯೆ ಹೆಚ್ಚಳವಾಗಿದೆ ಎಂದು ಎಸ್.ಪ್ರಭಾಕರನ್ ತಿಳಿಸಿದರು. ಹುಲಿ ಸಂರಕ್ಷಣೆಯಲ್ಲಿ ಬಂಡೀಪುರ ಹುಲಿ ಸಂರಕ್ಷಿತಾರಣ್ಯ ದೇಶದಲ್ಲೇ 2 ಸ್ಥಾನ ಹಾಗೂ ಕರ್ನಾಟಕದಲ್ಲಿ ಮೊದಲ ಸ್ಥಾನ ಪಡೆದುಕೊಂಡಿದೆ. ಇದಕ್ಕೆ ಸ್ಥಳೀಯರ ಸಹಕಾರ, ಅರಣ್ಯಾಧಿಕಾರಿಗಳ ಶ್ರಮ, ಸರ್ಕಾರಗಳ ಕಾರ್ಯಕ್ರಮಗಳು ಕಾರಣ ಎಂದು ತಿಳಿಸಿದರು.

6 ರಿಂದ 10 ವರ್ಷದೊಳಗಿನ ಹುಲಿಗಳು ಶಕ್ತಶಾಲಿ ಆಗಿರುತ್ತವೆ. ಆವಾಸ ಸ್ಥಾನ ಮಾಡಿಕೊಳ್ಳಲು ಹುಲಿಗಳ ನಡುವೆ ಕಾಳಗ ನಡೆಯುತ್ತದೆ. ಆಗ ಗಾಯಗೊಂಡ ಹುಲಿಗಳು ಮತ್ತು ವಯಸ್ಸಾದ ಹುಲಿಗಳು ಹೊಸ ಆವಾಸ ಸ್ಥಾನ ಹುಡುಕಲು ಶುರು ಮಾಡುತ್ತವೆ. ಕಾಡಂಚಿಗೆ ಬಂದಾಗ ಕ್ವಾರಿ, ಬರಡು ಭೂಮಿ, ಪೊದೆಗಳುಳ್ಳ ಕೆರೆಗಳನ್ನು ಸೇರಿಕೊಳ್ಳುತ್ತವೆ. ಸಂಸಾರ ಹೂಡುತ್ತವೆ ಎಂದರು.

ಸಫಾರಿ ಹಲವು ವರುಷಗಳಿಂದ ನಡೆಯುತ್ತಿದೆ. ಸಫಾರಿ ಒಂದರಿಂದಲೇ ಪ್ರಾಣಿಗಳು ನಾಡಿನತ್ತ ಬರುವುದಿಲ್ಲ. ಅದಕ್ಕೆ ಸಾಕಷ್ಟು ಕಾರಣಗಳಿವೆ. ಉತ್ತರ ಭಾರತದ ಸಂರಕ್ಷಿತ ಅರಣ್ಯಗಳಲ್ಲಿಬಫರ್ ವಲಯ ಮತ್ತು ರಾತ್ರಿ ವೇಳೆಯಲ್ಲೂ ಸಫಾರಿ ನಡೆಯುತ್ತಿದೆ. ಬಂಡೀಪುರ ಅರಣ್ಯದಲ್ಲಿ ಶೇ.8 ರಷ್ಟು ಮಾತ್ರ ಸೂಕ್ಷ್ಮವಾಗಿ ಸಫಾರಿ ಮಾಡುತ್ತಿದ್ದೇವೆ. ಸಫಾರಿ ವಲಯದಲ್ಲಿ 27 ಹುಲಿಗಳಿವೆ. 31 ಸಫಾರಿ ವಾಹನಗಳಿವೆ. ಮತ್ತೆ ಸಫಾರಿ ಆರಂಭಿಸುವ ಪ್ರಕ್ರಿಯೆ ಸರ್ಕಾರದ ಮಟ್ಟದಲ್ಲಿದೆ. ಎಂದರು. ಸಂವಾದ ಕಾರ್ಯಕ್ರಮದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಾದ ನವೀನ್ ಕುಮಾರ್, ಸುರೇಶ್, ಸಂಘದ ಜಿಲ್ಲಾಧ್ಯಕ್ಷ ಸಿದ್ದಲಿಂಗಸ್ವಾಮಿ, ಪ್ರಧಾನ ಕಾರ್ಯದರ್ಶಿ ಪ್ರಸಾದ್ ಲಕ್ಕೂರು ಹಾಗೂ ಪತ್ರಕರ್ತರು ಹಾಜರಿದ್ದರು.

# ಕೇಂಬ್ರಿಡ್ಜ್ ಪಬ್ಲಿಕ್ ಸ್ಕೂಲ್‌ನಲ್ಲಿ ವಿಜ್ಞಾನ ವಸ್ತು ಪ್ರದರ್ಶನ



ಕೆ.ಆರ್.ಪೇಟೆ: ವಿಜ್ಞಾನ ಹಾಗೂ ತಂತ್ರಜ್ಞಾನದ ಆವಿಷ್ಕಾರಗಳ ಫಲದಿಂದಾಗಿ ದೇಶದ ಸಮಗ್ರವಾದ ಅಭಿವೃದ್ಧಿಗೆ ಸಹಾಯವಾಗಿದೆಯೆಂದು ಆಡೀಟರ್ ಪಿ.ವಿ.ರಮೇಶ್ ಹೇಳಿದರು.

ಪಟ್ಟಣದ ಹೇಮಾವತಿ ಬಡಾವಣೆಯಲ್ಲಿರುವ ಕೇಂ ಬ್ರಿಡ್ಜ್ ಪಬ್ಲಿಕ್ ಸ್ಕೂಲ್'ನ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮವನ್ನು ಜ್ಯೋತಿ ಬೆಳಗುವಮೂಲಕ ಮೂಲಕ ಉದ್ಘಾಟಿಸಿ ಪೋಷಕರು ಹಾಗೂ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಜಾಗತಿಕ ಜಗತ್ತಿನ ಇಂದಿನ ಸ್ಪರ್ಧಾ ಪ್ರಪಂಚವನ್ನು ವಿದ್ಯಾರ್ಥಿಗಳು ಹಾಗೂ ಯುವ ಜನರು ಆತ್ಮ ವಿಶ್ವಾಸದಿಂದ ಎದುರಿಸಿ ಮುನ್ನಡೆದು ಸಾಧನೆಯನ್ನು ಮಾಡಬೇಕಾದರೆ ವಿಜ್ಞಾನ ಮತ್ತು ತಂತ್ರಜ್ಞಾನದ ಆವಿಷ್ಕಾರಗಳ ಫಲವನ್ನು ಪಡೆಯುವುದು ಇಂದಿನ ಅಗತ್ಯವಾಗಿದೆ. ವೈಜ್ಞಾನಿಕ ಮಾದರಿಯ ಹಲವು ಆವಿಷ್ಕಾರ ಮಾಡಿರುವ ವಿದ್ಯಾರ್ಥಿಗಳು ವಿಜ್ಞಾನದ ಪ್ರಯೋಗದಿಂದ ಆಗುವ ಪ್ರಯೋಜನಗಳ ಬಗ್ಗೆ ಇಂದಿನ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಪ್ರಾತ್ಯಕ್ಷಿತೆಯ ಮೂಲಕ ವಿವರಿಸಿ ಮಾಹಿತಿ ನೀಡಿದ್ದಾರೆ. ವಿಜ್ಞಾನದ ಆವಿಷ್ಕಾರದ ಫಲವನ್ನು ದೇಶದ ಸಮಗ್ರವಾದ ಅಭಿವೃದ್ಧಿಗೆ ಬಳಸಿಕೊಳ್ಳುವುದರಿಂದ ವಿಶ್ವದ ಅಮೇರಿಕಾ, ಚೀನಾ, ಜಪಾನ್ ಸೇರಿದಂತೆ ಹಲವು ರಾಷ್ಟ್ರಗಳಿಂದ ಭಾರತ ದೇಶವು ಎದುರಿಸುತ್ತಿರುವ ಪೈಪೋಟಿಯನ್ನು ಸಮರ್ಥವಾಗಿ ಎದುರಿಸಿ ಭಾರತೀಯರಾದ ನಾವು ಕೂಡ ವೈಜ್ಞಾನಿಕ ಹಾಗೂ ಬಾಹ್ಯಾಕಾಶ ಸಂಶೋಧನೆಯಲ್ಲಿ ಕಡಿಮೆ ಇಲ್ಲ ಎಂಬುದನ್ನು ಸಾಬೀತುಪಡಿಸಲು ಸಾಧ್ಯವಾಗಿದೆ ಎಂದು ತಿಳಿಸಿದ ರಮೇಶ್ ವಿದ್ಯಾರ್ಥಿಗಳ ಸಮಗ್ರವಾದ ವ್ಯಕ್ತಿತ್ವದ ವಿಕಸನಕ್ಕೆ ವೈಜ್ಞಾನಿಕ ಮನೋಭಾವನೆ ಹಾಗೂ ಸಂಶೋಧನೆಯ ವರದಾನವಾಗಿದೆ ಎಂದು ಹೇಳಿದರು. ಕೇಂಬ್ರಿಡ್ಜ್ ಶಾಲೆಯ ಆಡಳಿತ ಅಧಿಕಾರಿ ಶಿವಕುಮಾರ್ ಸೇರಿದಂತೆ ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಅಧ್ಯಾಪಕ ವೃಂದ ಪೋಷಕರು ವಿಜ್ಞಾನ ವಸ್ತು ಪ್ರದರ್ಶನದಲ್ಲಿ ವಿದ್ಯಾರ್ಥಿಗಳು ಪ್ರದರ್ಶನ ಮಾಡಿದ ವೈಜ್ಞಾನಿಕ ಮಾದರಿಗಳನ್ನು ಕಂಡು ರೋಮಾಂಚನಗೊಂಡರು. ಇದೆ ಸಂದರ್ಭದಲ್ಲಿ ಮಾತನಾಡಿದ ಇನ್ಸ್ಪೆಕ್ಟರ್ ಸುಮಾರಾಣಿ ನಿಮ್ಮ ಮಕ್ಕಳ ಮೇಲೆ ನಿಗಾ ಇಡಿ ಹಾಗೂ ಇವತ್ತಿನ ದಿನಗಳಲ್ಲಿ ಅತಿ ಹೆಚ್ಚು ಮಕ್ಕಳು ಮೊಬೈಲ್ ಕಡೆ ಗಮನ ಹರಿಸುತ್ತಾರೆ ಓದಿನ ಕಡೆ ಆಸಕ್ತಿ ಕಡಿಮೆ ಹಾಗಿದೆ ಆದರೂ ಈ ಶಾಲೆಯ ಮಕ್ಕಳ ನೋಡಿದರೆ ಖುಷಿ ಹಾಗುತೆ, ನಮ್ಮ ತಾಲ್ಲೂಕಿನ ಯಾವುದೇ ಶಾಲೆ ಯಲ್ಲಿನು ಈ ರೀತಿ ವಿಜ್ಞಾನ ವಸ್ತು ಪ್ರದರ್ಶನ ಮಾಡಿರಲಿಲ್ಲ ಮಕ್ಕಳು, ಜೊತೆಗೆ ಮಕ್ಕಳ ಸಾಧನೆ ಜೊತೆಗೆ ಶಿಕ್ಷಕರು ಕೂಡ. ರಾಕೆಟ್ ನಿರ್ಮಿಸಿ ಎಲ್ಲಾರ ಗಮನ ಸೆಳೆದರು ಎಂದರು,

ಈ ಸಂದರ್ಭದಲ್ಲಿ ಅಧ್ಯಕ್ಷರು ರಮೇಶ್ , ಶಿವಣ್ಣ ವ್ಯವಸ್ಥಾಪಕರು, ಚಿರಾಗ್ ಪಿ, ಎಸ್, ಕಾರ್ಯದರ್ಶಿ, ರಹಿಲ್ಲಾ ಭಾನು ಮುಖ್ಯ ಶಿಕ್ಷಕಿ, ಸಂದ್ಯಾ ಶಿಕ್ಷಕರಾದ ಸಂದ್ಯಾ ಪ್ರೀತಿ ಪ್ರಕಾಶ್, ಸಭಾಂನಾ ಭಾನು, ಶ್ರೀ ಕಾಂತ್ ರಶ್ಮಿ, ವಸಂತಿ ಜಯಶ್ರೀ, ಹರೀಶ್, ಸೌಮ್ಯ, ಸಂಗೀತ ಪ್ರಿಯಾಂಕಾ ಭವ್ಯ ರಮ್ಯ ಚೈತ್ರ ಮಹಾಲಕ್ಷ್ಮಿ, ಮದಿಹಾ, ಸೇರಿದಂತೆ ಇನ್ನಿತರ ಉಪಸ್ಥಿತರಿದ್ದರು

**ರಾಮಸಮುದ್ರದಲ್ಲಿ ನೀರಿನ ಸಮಸ್ಯೆ ಪರಿಹರಿಸಲು ಸೂಚನೆ**

# ತಾತ್ಕಾಲಿಕವಾಗಿ ಟ್ಯಾಂಕರ್‌ನಿಂದ ನೀರು ಪೂರೈಕೆ

ಚಾಮರಾಜನಗರ, ನಗರದ ರಾಮಸಮುದ್ರ ಬಡಾವಣೆಯ ಚಿಕ್ಕ ಬೀದಿ ಮತ್ತು ಆದಿ ಜಾಂಬವರ ಬೀದಿಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಬೇಕೆಂಬ ಸ್ಥಳೀಯ ನಿವಾಸಿಗಳ ಮನವಿಯ



ಹಿನ್ನೆಲೆಯಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಸ್ಥಳಕ್ಕೆ ತೆರಳಿ ಪರಿಶೀಲಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಶಾಸಕರನ್ನು ಭೇಟಿಯಾದ 2 ಬೀದಿಗಳ ನಿವಾಸಿಗಳು, ಬೀದಿಗಳಲ್ಲಿನ ಬೋರ್ ವೆಲ್ಗಳಲ್ಲಿಅಂತರ್ಜಲ ಕುಸಿದಿದ್ದು ಕಡಿಮೆ ನೀರು ಬರುತ್ತಿದೆ. ಕಾವೇರಿ ನೀರು ಸಹ ಸಾಕಷ್ಟು ಬರುತ್ತಿಲ್ಲ. ಈ ಸಮಸ್ಯೆಯನ್ನು ಪರಿಹರಿಸಿಕೊಡಿ ಎಂದು ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಶಾಸಕರು, ನಗರಸಭೆ ಪೌರಾಯುಕ್ತರಾದ ಪ್ರಕಾಶ್, ಇಂಜಿನಿಯರ್ ಕುಮಾರ ಆರಾಧ್ಯ, ಅವರೊಡನೆ ಬೀದಿಗಳಿಗೆ ತೆರಳಿ ಪರಿಶೀಲಿಸಿದರು. ಬೀದಿಗಳಲ್ಲಿ ಉದ್ಭವಿಸಿರುವ ನೀರಿನ ಸಮಸ್ಯೆ ಪರಿಹರಿಸಲು ಸದ್ಯಕ್ಕೆ ತಾತ್ಕಾಲಿಕವಾಗಿ ಟ್ಯಾಂಕರ್ಗಳ ಮೂಲಕ ನೀರು ಪೂರೈಸಲು ಕ್ರಮ ವಹಿಸಬೇಕು ಎಂದು ಸೂಚಿಸಿದರು.

ಬೀದಿಗಳಲ್ಲಿರುವ ಬೋರ್ ವೆಲ್ಗಳನ್ನು ಮತ್ತಷ್ಟು ಆಳಕ್ಕೆ ಇಳಿಸಿ ನೀರು ಪೂರೈಸಬಹುದೇ ಅಥವಾ ಹೊಸ ಬೋರ್‌ವೆಲ್ ಕೊರೆಸಬಹುದೇ ಎಂಬುದನ್ನು ಪರಿಶೀಲಿಸಬೇಕು. ಇಲ್ಲವೇ ಸಮೀಪದ ಕೋಡಿಮೋಳೆ ಕೆರೆಗೆ ಸಂಪರ್ಕ ರಸ್ತೆಯ ಬದಿಗಳಲ್ಲಿ ಹೊಸ ಬೋರ್‌ವೆಲ್ ಕೊರೆಸಲು ಸ್ಥಳ ನಿಗದಿ ಮಾಡಬೇಕು ಎಂದು ಸ್ಥಳದಲ್ಲಿದ್ದ ಪೌರಾಯುಕ್ತರಿಗೆ ಸೂಚಿಸಿದರು. ಕೋಡಿಮೋಳೆ ಕೆರೆ ಸಂಪರ್ಕ ರಸ್ತೆ ಬದಿಯಲ್ಲಿ ಬೋರ್ ವೆಲ್ ಕೊರೆಸಿ ನೀರು ತರಲು ಪೈಪ್ಲೈನ್ ಮತ್ತು ಇತರ ಕೆಲಸಗಳಿಗೆ ಅಂದಾಜು ವೆಚ್ಚ ಸಿದ್ದಪಡಿಸಬೇಕು ಎಂದು ನಗಸಸಭೆಯ ಅಧಿಕಾರಿಗಳಿಗೆ ಸೂಚಿಸಿದರು. ಬಡಾವಣೆಯ ಮುಖಂಡರು, ನಿವಾಸಿಗಳು ಹಾಜರಿದ್ದರು.

# ವೇಣುಗೋಪಾಲ ದೇಗುಲಕ್ಕೆ ಪಾದಯಾತ್ರೆ



ಮೈಸೂರು: ಅರಮನೆ ಮುಂಭಾಗದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ 25 ಕ್ಕೂ ಹೆಚ್ಚು ಭಕ್ತರು ಹಿಟ್ಟುವಳ್ಳಿ ಶ್ರೀ ವೇಣುಗೋಪಾಲ ಸ್ವಾಮಿ ದೇವಸ್ಥಾನಕ್ಕೆ ಪಾದಯಾತ್ರೆ ಮೂಲಕ ತಲುಪಿ ದೇವರ ದರ್ಶನ ಪಡೆದರು.

ಪ್ರಧಾನ ಆರಾಧಿಕವಾದ ಟಿ.ಎನ್ ಅಭಿಜಿತ್ ಭಕ್ತರನ್ನು ಉದ್ದೇಶಿಸಿ ಮಾತನಾಡಿ, ಪಾದಯಾತ್ರೆ ಎಂದರೆ ನಡಿಗೆಯ ಮೂಲಕ ಮಾಡುವ ದೈಹಿಕ, ಮಾನಸಿಕ, ಆಧ್ಯಾತ್ಮಿಕ ಮತ್ತು ಸಾಮಾಜಿಕ ಚಟುವಟಿಕೆಯಾಗಿದ್ದು, ಇದು ಆರೋಗ್ಯ ಸುಧಾರಣೆ, ಗ್ರಹದೋಷ ನಿವಾರಣೆ, ಆಧ್ಯಾತ್ಮಿಕ ಒಳನೋಟ, ಆಲೋಚನೆಯ ಸ್ಪಷ್ಟತೆ ಮತ್ತು ಸಾಮಾಜಿಕ-ರಾಜಕೀಯ ಜಾಗೃತಿ ಮೂಡಿಸುವಲ್ಲಿ ಮಹತ್ವ ಪಡೆದಿದೆ ಎಂದು ತಿಳಿಸಿದರು.

ಶ್ರೀ ಕೃಷ್ಣನು ಮುಖ್ಯವಾಗಿ ಕರ್ಮಯೋಗ (ಫಲದ ಆಸೆಯಿಲ್ಲದೆ ಕರ್ತವ್ಯ ನಿರ್ವಹಣೆ), ನಿಯಂತ್ರಣ, ಧರ್ಮದ ಪಾಲನೆ, ಮತ್ತು ಸಮತೋಲಿತ ಜೀವನದ ಬಗ್ಗೆ ಹೇಳುತ್ತದೆ ಹಾಗೆ ನಡೆಯಬೇಕು ಎಂದರು. ದೇವಸ್ಥಾನದ ನಾಗಮಣಿ ನಾಗರಾಜನ್, ಟಿ.ಎ.ಶ್ರೀಧರ್, ಟಿ.ಎನ್.ಅಜಯ್, ಟಿ.ಎಸ್ ಅರುಣ್, ಸ್ವಪ್ನ, ರಾಘವ ಸಿಂಹ, ಅನಘ ಹಾಗೂ ಪಾದಯಾತ್ರೆ ಮೂಲಕ ಬಂದ ಭಕ್ತರು ಉಪಸ್ಥಿತರಿದ್ದರು.

# ನಾಳೆ ನಿಜಮಹಾತ್ಮ ಬಾಬಾಸಾಹೇಬ ನಾಟಕ

ಮೈಸೂರು:ನಗರದ ಕಿರು ರಂಗಮಂದಿರದಲ್ಲಿ ಜ.8ರಂದು ಕೊಡಗಿನ ರಂಗಭೂಮಿ ಟ್ರಸ್ಟ್ ನಿಂದ ನಿಜಮಹಾತ್ಮ ಬಾಬಾಸಾಹೇಬ ನಾಟಕದ 25ನೇ ಪ್ರದರ್ಶನ ಆಯೋಜಿಸಲಾಗಿದೆ ಎಂದು ನಾಟಕ ರಚನೆಕಾರ ಹಾಗೂ ನಿರ್ದೇಶಕರಾದ ಅಡ್ಡಂಡ ಕಾರ್ಯಪ್ಪ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಬೆಳಿಗ್ಗೆ 10.30ಕ್ಕೆ ಮಹಿಳೆಯರಿಗಾಗಿ ವಿಶೇಷ ಪ್ರದರ್ಶನ ಹಾಗೂ ಸಂಜೆ 6ಕ್ಕೆ ಸಾರ್ವಜನಿಕ ಪ್ರದರ್ಶನ ಆಯೋಜಿಸಲಾಗಿದೆ. ಸಂಜೆ ಕಾರ್ಯಕ್ರಮಕ್ಕೆ ಮಾಜಿ ಶಾಸಕ ಹರ್ಷವರ್ಧನ್, ಸಮಾಜ ಸೇವಕ ಡಾ. ಸುಶ್ರುತ್ ಗೌಡ ಭಾಗವಹಿಸುವರು.ಅಂಬೇಡ್ಕರ್ ಬಗ್ಗೆ ಅನೇಕ ಸತ್ಯಸಂಗತಿಗಳನ್ನು ಕಾಂಗ್ರೆಸ್ ಪಕ್ಷ ಮುಚ್ಚಿಟ್ಟಿದ್ದು, ನಾಟಕವು ಅದನ್ನು ಬಯಲಿಗೆಳೆದಿದೆ. ಇದರಿಂದ ಕೆಲವೆಡೆ ಸಮಸ್ಯೆಗಳನ್ನೂ ಎದುರಿಸಿದ್ದೇವೆ. ಹಾಗಿದ್ದರೂ ರಾಜ್ಯದ ಎಲ್ಲೆಡೆ ಉತ್ತಮ ಪ್ರದರ್ಶನಗಳು ನಡೆದಿವೆ. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದರು.

ಈ ನಾಟಕ ಅಂಬೇಡ್ಕರ್ ಕುರಿತಂತೆ ಅನೇಕ ಸಂಗತಿ ಒಳಗೊಂಡಿದೆ. ದೇಶ ವಿಭಜನೆ ವೇಳೆ ಅವರು ಒಂದು ವೇಳೆ ಪಾಕಿಸ್ತಾನ ರಚನೆಯಾದಲ್ಲಿ ಇಲ್ಲಿನ ಮುಸ್ಲಿಮರು ಅಲ್ಲಿಗೆ ಹೋಗಬೇಕು, ಅಲ್ಲಿನ ಹಿಂದೂಗಳು ಇಲ್ಲಿಗೆ ಬರಬೇಕು ಎಂದು ಸ್ಪಷ್ಟವಾಗಿ ತಿಳಿಸಿದ್ದರು.



ಜೊತೆಗೆ ಆರ್‌ಎಸ್‌ಎಸ್ ಶಿಬಿರಗಳಿಗೆ ಭೇಟಿ ನೀಡಿ ಪ್ರಶಂಸಿಸಿದ್ದರು. ಈ ವಿಷಯಗಳನ್ನು ಮುಚ್ಚಿಡಲಾಗಿತ್ತು. ಈ ನಾಟಕ ಈ ರೀತಿಯ ಸತ್ಯಗಳನ್ನು ತಿಳಿಸುತ್ತ ಸಾಗುತ್ತದೆ. ಇದರಿಂದಾಗಿ ಹಲವರು ನಾಟಕ ಪ್ರದರ್ಶನ ವೇಳೆ ತಂಟೆಯೆಬ್ಬಿಸುವುದು ಅಲ್ಲಲ್ಲಿ ನಡೆದಿದೆ. ಆದರೂ ಇದುವರೆಗೆ ರಾಜ್ಯದಾದ್ಯಂತ ಕಂಡಿರುವ 24 ಪ್ರದರ್ಶನಗಳೂ ಕಿಕ್ಕಿರಿದು ತುಂಬಿದ್ದವು. ಅಭಿವ್ಯಕ್ತಿ ಸ್ವಾತಂತ್ರ್ಯ ಎಂದು ಹೇಳಿಕೊಳ್ಳುವವರೇ ಈ ರೀತಿ ಅಡ್ಡಿ ಪಡಿಸುವುದು ಬೇಸರ ತಂದಿದೆ. ಕಾಂಗ್ರೆಸ್‌ನ ಕೆಲ ಮುಖಂಡರು, ಕೆಲ ದಸಲಿತ ಮುಖಂಡರು ಅಡ್ಡಿ ಪಡಿಸಿದ್ದುದೂ ಉಂಟು. ನಗರದಲ್ಲಿನ ಈ ಪ್ರದರ್ಶನಗಳ ನಂತರ ತಂಡ ಉತ್ತರ ಕರ್ನಾಕದಲ್ಲಿಯೂ ಪ್ರದರ್ಶಿಸಲಿದೆ. ದೆಹಲಿ, ಮುಂಬೈನಲ್ಲಿ ಪ್ರದರ್ಶನಕ್ಕೂ ಸಿದ್ಧತೆ ನಡೆದಿದೆ ಎಂದು ಮಾಹಿತಿ ನೀಡಿದರು. ಟ್ರಸ್ಟಿ ಅನಿತಾ ಕಾರ್ಯಪ್ಪ, ಟ್ರಸ್ಟ್ ಪೋಷಕರಾದ ಪ್ರೊ. ಶಶಿಕಲಾ ರಾಮಚಂದ್ರದೇವ, ಹೊಮ್ಮ ಮಂಜುನಾಥ್, ಕಲಾವಿದರಾದ ಲಿಖಿತ್ ಕುಮಾರ್, ಮನೋಜ್ ಇದ್ದರು.

# ಕಾಡಾನೆ ದಾಳಿ ಖಂಡಿಸಿ ಪ್ರತಿಭಟನೆ

## ಕಾಡಾನೆಗಳ ಹಾವಳಿ ತಪ್ಪಿಸಲು ಕ್ರಮ ಕೈಗೊಳ್ಳದಿದ್ದರೆ ಹೋರಾಟ: ರಮೇಶ್‌ಗೌಡ

ಚನ್ನಪಟ್ಟಣ: ತಾಲೂಕಿನಲ್ಲಿ ಕಾಡಾನೆಗಳ ಹಾವಳಿಯಿಂದ ರೈತರು ಆರ್ಥಿಕವಾಗಿ ನಷ್ಟ ಅನುಭವಿಸುತ್ತಿದ್ದು ಕೂಡಲೇ ಅರಣ್ಯ ಇಲಾಖೆ ಕಾಡಾನೆಗಳನ್ನು ತಾಲೂಕಿನಿಂದ ಓಡಿಸಲು ಕ್ರಮ ಕೈಗೊಳ್ಳದಿದ್ದರೆ ಉಗ್ರ ಹೋರಾಟ ಮಾಡುವುದಾಗಿ ಕಸ್ತೂರಿ ಕರ್ನಾಟಕ ಜನಪರ ವೇದಿಕೆ ರಾಜ್ಯಾಧ್ಯಕ್ಷ ರಮೇಶ್‌ಗೌಡರು ಎಚ್ಚರಿಕೆ ನೀಡಿದರು.

ತಾಲೂಕಿನ ವಿರುಪಾಕ್ಷಿಪುರ ಹೋಬಳಿಯಲ್ಲಿ ನಿರಂತರವಾಗಿ ಕಾಡಾನೆ ದಾಳಿ ಮಾಡಿ ರೈತರ ಬೆಳೆಗಳನ್ನು ನಾಶ ಮಾಡುತ್ತಿದ್ದು, ಈ ಬಗ್ಗೆ ನಿರ್ಲಕ್ಷ್ಯ ವಹಿಸಿರುವ ಅರಣ್ಯ ಇಲಾಖೆ ಅಧಿಕಾರಿಗಳ ನಡೆಯನ್ನು ಖಂಡಿಸಿ ಪಟ್ಟಣದ ತಾಲೂಕು ಕಚೇರಿ ಬಳಿ ಕಕಜ ವೇದಿಕೆ ಮತ್ತು ಕಾಡಾನೆ ದಾಳಿಯಿಂದ ಬೆಳೆ ನಷ್ಟಕ್ಕೆ ಒಳಗಾದ ರೈತರೊಂದಿಗೆ ನಡೆಸಿದ ಪ್ರತಿಭಟನೆಯಲ್ಲಿ ಅವರು ಮಾತನಾಡಿ, ವಿರುಪಾಕ್ಷಿಪುರ ಹೋಬಳಿಯಲ್ಲಿ ನಿರಂತರವಾಗಿ ಮೂರ್‍ನಾಲ್ಕು ದಿನಗಳಿಂದ ಕಾಡಾನೆಗಳು ದಾಳಿ ಮಾಡಿ ರೈತರು ವರ್ಷಪೂರ್ತಿ ಬೆಳೆದ ಲಕ್ಷಾಂತರ ರೂ. ಮೌಲ್ಯದ ಬೆಳೆಗಳನ್ನು ತಿಂದು, ತುಳಿದು ನಾಶ ಮಾಡುತ್ತಿದ್ದು, ಇದರಿಂದ ರೈತರು ಕಂಗಾಲಾಗಿದ್ದು ಅವರಿಗೆ ಒಂದು ಸಾಂತ್ವನ ಹೇಳುವ ನಿಟ್ಟಿನಲ್ಲೂ ಅರಣ್ಯ ಇಲಾಖೆ ಕ್ರಮಕ್ಕೆ ಮುಂದಾಗದಿರುವುದು ಖಂಡನೀಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕಿನ ಸಿಂಗರಾಜಪುರ ಗ್ರಾಮದ ರೈತ ರಾಮಕೃಷ್ಣೇಗೌಡರ ತೋಟದಲ್ಲಿ ಮೂರು ಬಾರಿ ಕಾಡಾನೆ ದಾಳಿ ಮಾಡಿ ಲಕ್ಷಾಂತರ ರೂ. ಮೌಲ್ಯದ ಬಾಳೆ ಬೆಳೆಯನ್ನು ನಾಶ ಮಾಡಿದ್ದು ಈ ಬಗ್ಗೆ ದೂರು ಕೊಟ್ಟರೂ ಈ ಬಗ್ಗೆ ಸ್ಥಳ ಪರಿಶೀಲನೆಗೆ ಬಂದಿಲ್ಲ ಎಂದರೆ ಇವರ ನಿರ್ಲಕ್ಷ್ಯಕ್ಕೆ ನಾವೇನು ಮಾಡಬೇಕು, ಈ ಬಗ್ಗೆ ತಾಲೂಕು ದಂಡಾಧಿಕಾರಿಗಳೆ ಸೂಕ್ತ ಕ್ರಮಕ್ಕೆ ಮುಂದಾಗಿ ರೈತರಿಗೆ ಸೂಕ್ತ ಪರಿಹಾರ ಕೊಡಿಸುವಲ್ಲಿ ಶ್ರಮಿಸಬೇಕು ಎಂದು ರಮೇಶ್ ಗೌಡರು ಒತ್ತಾಯಿಸಿದರು.

ಕಕಜ ವೇದಿಕೆಯ ಮಂಡ್ಯ ಜಿಲ್ಲಾಧ್ಯಕ್ಷ ಉಮಾ



ಶಂಕರ್ ಅವರು ಮಾತನಾಡಿ, ಇಂದು ಕಾರ್ಪೋರೇಟ್ ಸಂಸ್ಥೆಗಳು ತಯಾರಿಸುವ ಒಂದು ಜೊತೆ ಚಪ್ಪಲಿಗೆ ನಿಗಧಿತ ಬೆಲೆ ಇದೆ. ಆದರೆ ರೈತರು ಕಷ್ಟಪಟ್ಟು ಬೆಳೆಯುವ ಬೆಲೆಗೆ ನಿಗಧಿತ ಬೆಲೆ ಇಲ್ಲವಾಗಿದ್ದು ರೈತರು ಎಷ್ಟು ಸಾಲ ಮಾಡಿ ಬೆಳೆ ಬೆಳೆದರೂ ಸೂಕ್ತ ಬೆಲೆ ಸಿಗದೆ ನಷ್ಟಕ್ಕೆ ಒಳಗಾಗಿ ರೈತರ ಆತ್ಮಹತ್ಯೆ ಪ್ರಕರಣ ಹೆಚ್ಚಾಗುತ್ತಿದೆ. ರೈತರ ವಾಣಿಜ್ಯ ಬೆಳೆಗಳ ಮೇಲೆ ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗಿದ್ದು, ಈ ಬಗ್ಗೆ ಅರಣ್ಯ ಇಲಾಖೆ ಸಂಪೂರ್ಣವಾಗಿ ನಿರ್ಲಕ್ಷ್ಯ ವಹಿಸಿರುವುದು ಕಾರಣವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕಳೆದ ಒಂದು ವರ್ಷಗಳ ಹಿಂದೆ ರಮೇಶ್‌ಗೌಡರ ನೇತೃತ್ವದಲ್ಲಿ ಜಿಲ್ಲಾ ಅರಣ್ಯ ಇಲಾಖೆ ಅಧಿಕಾರಿಗಳ ಕಚೇರಿ ಬಳಿ ಬೃಹತ್ ಪ್ರತಿಭಟನೆ ಮಾಡಿ ಅಂದು ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಸೇರಿದಂತೆ ಮೇಲಾಧಿಕಾರಿಗಳು ಬಂದು ನಾಲ್ಕೈದು ತಿಂಗಳಲ್ಲಿ ಕಾಡಾನೆಗಳನ್ನು ಶಾಸ್ವತವಾಗಿ ಜಿಲ್ಲೆಯಿಂದ ಓಡಿಸುವ ಭರವಸೆ ನೀಡಿದ್ದರು ಆದರೆ ಈವರೆಗೆ ಕಾಡಾನೆಗಳನ್ನು ಜಿಲ್ಲೆಯಿಂದ ಓಡಿಸಲು ಆಗಿಲ್ಲ. ಇದರಿಂದ ರೈತರು ಬೆಳೆಯುವ ಲಕ್ಷಾಂತರ ರೂ. ಮೌಲ್ಯದ ಬೆಳೆ ಕಾಡಾನೆಗಳ ಪಾಲಾಗುತ್ತಿದೆ. ಈ ಬಗ್ಗೆ ಅರಣ್ಯ ಇಲಾಖೆ ಗಂಭೀರವಾಗಿ ಪರಿಗಣಿಸಿ ಕಾಡಾನೆ ಹಾವಳಿ ತಪ್ಪಿಸಲು ಕ್ರಮ ಕೈಗೊಳ್ಳದಿದ್ದರೆ ರಮೇಶ್ ಗೌಡರ ನೇತೃತ್ವದಲ್ಲಿ ಉಗ್ರ ಹೋರಾಟ ಮಾಡಲಾಗುತ್ತದೆ ಎಂದು ಉಮಾಶಂಕರ್ ಎಚ್ಚರಿಕೆ ನೀಡಿದರು.

ಕಕಜ ವೇದಿಕೆ ಜಿಲ್ಲಾಧ್ಯಕ್ಷ ಬೇವೂರು ಯೋಗೀಶ್‌ಗೌಡ ಮಾತನಾಡಿ, ತಾಲೂಕಿನಲ್ಲಿ ಕಾಡಾನೆಗಳ ಹಾವಳಿ ನಿರಂತರವಾಗಿದ್ದು, ಕಳೆದ ವರ್ಷ ಸ್ವತಃ ಅರಣ್ಯ ಇಲಾಖೆ ಸಚಿವರೆ ತಾಲೂಕಿಗೆ ಬಂದು ಕಾಡಾನೆಗಳ ಹಾವಳಿಯನ್ನು ತಪ್ಪಿಸಲು ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದ್ದರು. ಈ ಬಗ್ಗೆ ಏನು ಕ್ರಮ ಕೈಗೊಂಡಿದ್ದಾರೆ ಎಂದು ಈವರೆಗೆ ತಿಳಿದಿಲ್ಲ. ಅಲ್ಲದೆ ಈ ಬಗ್ಗೆ ಕ್ಷೇತ್ರದ ಶಾಸಕ ಸಿ.ಪಿ.ಯೋಗೇಶ್ವರ್‌ಅವರು ಸಹ ನಿರ್ಲಕ್ಷ್ಯ ವಹಿಸಿದ್ದಾರೆ. ಇಂದು ರೈತರು ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿರುವುದು ಅರಣ್ಯ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಸಾಕ್ಷಿಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರೈತ ರಾಮಕೃಷ್ಣೇಗೌಡ ಮಾತನಾಡಿ, ತಾಲೂಕಿನಲ್ಲಿ ರೈತರು ಕೃಷಿ ಮಾಡುವುದೇ ದುಸ್ಥರವಾಗಿದೆ. ಒಂದೆಡೆ ಕಾಡು ಪ್ರಾಣಿಗಳಿಂದ ಪ್ರಾಣಾಪಾಯ ಇದ್ದರೂ ಸಹ ವಿದ್ಯುತ್ ಸಮಸ್ಯೆಯಿಂದ ರಾತ್ರಿ ವೇಳೆ ರೈತರು ನೀರು ಕಟ್ಟಿ ಶ್ರಮದಿಂದ ಬೆಳೆದ ಬೆಳೆ ಒಂದೇ ದಿನದಲ್ಲಿ ನಷ್ಟವಾಗುತ್ತಿದೆ. ರೈತರು ಕೃಷಿ ಚಟುವಟಿಕೆಯನ್ನೇ ಬಿಟ್ಟಿದ್ದು, ಸರ್ಕಾರ ರೈತರ ಜಮೀನನ್ನು ವಾರ್ಷಿಕ ಭೋಗ್ಯಾಧಾರ ಮಾಡಿಕೊಂಡು ರೈತರ ಕುಟುಂಬ ನಿರ್ವಹಣೆಗೆ ವರ್ಷಕ್ಕೆ ಒಂದಷ್ಟು ಹಣವನ್ನು ನೀಡಲಿ ಎಂದು ಅಳಲನ್ನು ತೋಡಿಕೊಂಡರು.

ರೈತರಿಂದ ಮನವಿ ಸ್ವೀಕರಿಸಿದ ತಾಲೂಕು ಕಚೇರಿ ಅಧಿಕಾರಿ ಸುನೀಲ್‌ಕುಮಾರ್‌ಅವರು ಈ ಬಗ್ಗೆ ಸರ್ಕಾರದ ಗಮನಕ್ಕೆ ತಂದು ಸೂಕ್ತ ಪರಿಹಾರ ಕೊಡಿಸುವ ನಿಟ್ಟಿನಲ್ಲಿ ಕೂಡಲೇ ಅರಣ್ಯ ಇಲಾಖೆ, ತೋಟಗಾರಿಕೆ ಇಲಾಖೆ. ಕಂದಾಯ ಇಲಾಖೆ ಅಧಿಕಾರಿಗಳನ್ನು ಸ್ಥಳಕ್ಕೆ ಕಳಿಸಿ ಬೆಳೆ ಹಾನಿಯ ವರದಿ ಪಡೆದ ಸೂಕ್ತ ಪರಿಹಾರ ಕೊಡಿಸುವುದಾಗಿ ಭರವಸೆ ನೀಡಿದರು. ಜೊತೆಗೆ ಕಕಜ ವೇದಿಕೆಯಿಂದ ಜ. 9 ರಂದು ಆಯೋಜಿಸಲಾಗಿರುವ ಹೋರಾಟಕ್ಕೆ ಅರಣ್ಯ ಇಲಾಖೆ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳನ್ನು ಕರೆಸುವ ಬಗ್ಗೆ ಭರವಸೆ ನೀಡಿದ್ದರಿಂದ ಪ್ರತಿಭಟನೆಯನ್ನು ಹಿಂಪಡೆಯಲಾಯಿತು. ಸಂದರ್ಭದಲ್ಲಿ ಸಾ. ಒ. ವಿದ್ಯಾಸಂಸ್ಥೆಯ ಕಾರ್ಯದರ್ಶಿ ಚನ್ನಪ್ಪ(ಸಿಸಿ), ನಿವೃತ್ತ ಉಪಪ್ರಾಂಶುಪಾಲರು ಟಿ. ಆರ್. ರಂಗಸ್ವಾಮಿ, ನಿ. ಪ್ರಾಧ್ಯಾಪಕರು ಚನ್ನವೀರೇಗೌಡರು, ನಾರಾಯಣಸ್ವಾಮಿ ನಿ. ಶಿಕ್ಷಕರು, ಉಪಾಧ್ಯಕ್ಷ ರಂಜಿತ್‌ಗೌಡ, ಜಿಲ್ಲಾಧ್ಯಕ್ಷರಾದ ಉಮಾಶಂಕರ್, ಮಲ್ಲು, ಜಗದಾಪುರ ಕೃಷ್ಣೇಗೌಡ, ಮರಿಅಂಕೇಗೌಡ, ಕೋಡಂಬಹಳ್ಳಿ ರಾಜು, ಹೋಟಲ್ ನಾಗರಾಜು, ಹನುಮಂತನಗರ ವೆಂಕಟರಮಣ, ಚಿಕ್ಕಣ್ಣಪ್ಪ, ಸಿಂಗರಾಜಪುರ ರಾಮಕೃಷ್ಣೇಗೌಡ, ಮೋಹನ್, ಕೃಷ್ಣಪ್ರಸಾದ್, ಮೆಣಸಿಗನಹಳ್ಳಿ ಮಹೇಶ್, ರಾಮಕೃಷ್ಣಪ್ಪ ಮೆಣಸಿಗನಹಳ್ಳಿ, ಸಯ್ಯದ್, ಸೇರಿದಂತೆ ಹಲವರು ಇದ್ದರು.

# ಮುರಿದುಬಿದ್ದ ತೆಂಗಿನಮರ, ನೆಲಕುರುಳಿದ ವಿದ್ಯುತ್ ಕಂಬ

ಚಾಮರಾಜನಗರ, ಸೋಮವಾರ ರಾತ್ರಿ 11-30 ಸಮಯದಲ್ಲಿ.ನಾಯಕರ ಬೀದಿಯಲ್ಲಿ ತೆಂಗಿನಮರವೊಂದು ವಿದ್ಯುತ್ ತಂತಿ ಮೇಲೆ ಬಿದ್ದು ಒಂದು ವಿದ್ಯುತ್ ಕಂಬ ಮುರಿದು ಬಿದ್ದಿವೆ. ಮತ್ತೊಂದು ವಿದ್ಯುತ್ ಕಂಬ ವಾಲಿದೆ. ಯಾವುದೇ ಹಾನಿಯಾಗಿಲ್ಲ.

**ಅಕ್ರೋಶ**

ಘಟನೆ ನಡೆದ ತಕ್ಷಣವೇ ಕೆಇಬಿ ಅಧಿಕಾರಿಗಳ ಗಮನಕ್ಕೆ ತರಲಾಗಿದೆ' ಬೆಳಿಗ್ಗೆ 10 ಗಂಟೆ ತನಕ ಯಾವ ಅಧಿಕಾರಿಯು ಸ್ಥಳಕ್ಕೆ ಆಗಮಿಸಿಲ್ಲ... ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ. ಏನಾದರೂ ಅನಾಹುತ ಸಂಭವಿಸಿದರೆ ಏನು ಮಾಡುತ್ತಾರೆ ಎಂದು ಗ್ರಾಮಸ್ಥರು ಅಕ್ರೋಶ ವ್ಯಕ್ತ ಪಡಿಸಿದರು.



# ರಾಜಹಂಸ ಬಸ್ಸು ದರ ಇಳಿಕೆ

ಮಡಿಕೇರಿ:-ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ 2026 ರ ಜನವರಿ, 05 ರಿಂದ ಜಾರಿಗೆ ಬರುವಂತೆ ಕ.ರಾ.ರ.ಸಾ.ನಿಗಮ ಪುತ್ತೂರು ವಿಭಾಗದ ವತಿಯಿಂದ ಮಡಿಕೇರಿ, ಕುಶಾಲನಗರ, ವಿರಾಜಪೇಟೆ, ಗೋಣಿಕೊಪ್ಪ, ಸೋಮವಾರಪೇಟೆಯಿಂದ ಬೆಂಗಳೂರು ಹಾಗೂ ಮೈಸೂರಿಗೆ ಕಾರ್ಯಾಚರಿಸುವ ರಾಜಹಂಸ ಹಾಗೂ ನಾನ್ ಎಸಿ ಸ್ಲೀಪರ್ ಮಾದರಿಯ ಸಾರಿಗೆಗಳ ಪ್ರಯಾಣ ದರವನ್ನು ಕಡಿಮೆ ಮಾಡಲಾಗಿದೆ ಎಂದು ಕರಾರಸಾನಿ ಪುತ್ತೂರು ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಎಂ.ಪಿ.ಶ್ರೀಹರಿಬಾಬು ಅವರು ತಿಳಿಸಿದ್ದಾರೆ.

ವಿವರ ಇಂತಿದೆ: ಕುಶಾಲನಗರ-ಬೆಂಗಳೂರು ನಾನ್ ಎಸಿ ಸ್ಲೀಪರ್ ಈ ಹಿಂದೆ ವಿಧಿಸುತ್ತಿದ್ದ ಪ್ರಯಾಣದರ ರೂ.780, ಪ್ರಸ್ತುತ ನಿಗದಿಪಡಿಸಿದ ಪ್ರಯಾಣ ದರ ರೂ.700, ರಾಜಹಂಸ ಈ ಹಿಂದೆ ವಿಧಿಸುತ್ತಿದ್ದ ಪ್ರಯಾಣ ದರ ರೂ.680, ಪ್ರಸ್ತುತ ನಿಗದಿಪಡಿಸಿದ ಪ್ರಯಾಣದರ ರೂ.550, ಕುಶಾಲನಗರ-ಬೆಂಗಳೂರು ರಾಜಹಂಸ ಈ ಹಿಂದೆ ವಿಧಿಸುತ್ತಿದ್ದ ಪ್ರಯಾಣ ದರ ರೂ.620, ಪ್ರಸ್ತುತ ನಿಗದಿಪಡಿಸಿದ ಪ್ರಯಾಣದರ ರೂ.500,

ವಿರಾಜಪೇಟೆ-ಬೆಂಗಳೂರು ರಾಜಹಂಸ ಈ ಹಿಂದೆ ವಿಧಿಸುತ್ತಿದ್ದ ಪ್ರಯಾಣದರ ರೂ.620, ಪ್ರಸ್ತುತ ನಿಗದಿಪಡಿಸಿದ ಪ್ರಯಾಣದರ ರೂ.550, ಗೋಣಿಕೊಪ್ಪ-ಬೆಂಗಳೂರು ರಾಜಹಂಸ ಈ ಹಿಂದೆ ವಿಧಿಸುತ್ತಿದ್ದ ಪ್ರಯಾಣದರ ರೂ.620,ಪ್ರಸ್ತುತ ನಿಗದಿಪಡಿಸಿದ ಪ್ರಯಾಣದರ ರೂ.550, ಸೋಮವಾರಪೇಟೆ-ಬೆಂಗಳೂರು




ರಾಜಹಂಸ ಈ ಹಿಂದೆ ವಿಧಿಸುತ್ತಿದ್ದ ಪ್ರಯಾಣದರ ರೂ.630, ಪ್ರಸ್ತುತ ನಿಗದಿಪಡಿಸಿದ ಪ್ರಯಾಣದರ ರೂ.550, ಮಡಿಕೇರಿ-ಮೈಸೂರು ಮಾರ್ಗ ನಾನ್ ಎಸಿ ಸ್ಲೀಪರ್ ಈ ಹಿಂದೆ ವಿಧಿಸುತ್ತಿದ್ದ ಪ್ರಯಾಣದರ ರೂ.570, ಪ್ರಸ್ತುತ ನಿಗದಿಪಡಿಸಿದ ಪ್ರಯಾಣದರ ರೂ.450, ರಾಜಹಂಸ ಈ ಹಿಂದೆ ವಿಧಿಸುತ್ತಿದ್ದ ಪ್ರಯಾಣದರ ರೂ.430, ಪ್ರಸ್ತುತ ನಿಗದಿಪಡಿಸಿದ ಪ್ರಯಾಣದರ ರೂ.280 ಆಗಿದೆ.

ಸಾರ್ವಜನಿಕ ಪ್ರಯಾಣಿಕರು ಈ ರಿಯಾಯಿತಿ ಪ್ರಯಾಣದರದ ಸದುಪಯೋಗವನ್ನು ಪಡೆದುಕೊಂಡು ನಿಗಮದ ಸಾರಿಗೆಗಳಲ್ಲಿ ಪ್ರಯಾಣಿಸುವಂತೆ ಕರಾರಸಾನಿ ಪುತ್ತೂರು ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಎಂ.ಪಿ.ಶ್ರೀಹರಿಬಾಬು ಅವರು ಕೋರಿದ್ದಾರೆ.

# ಸರ್ಕಾರಿ ಶಾಲೆಗೆ ಬೀಗ ಹಾಕಿ ಪ್ರತಿಭಟನೆ

ಕೆ.ಆರ್.ಪೇಟೆ,ತಾಲ್ಲೂಕಿನ ಬೂಕನಕೆರೆ ಹೋಬಳಿಯ ಮುದುಗೆರೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಆಂಗ್ಲ ಭಾಷಾ ಶಿಕ್ಷಕರನ್ನು ಬೇರೆ ಕಡೆಗೆ ವರ್ಗಾವಣೆ ಮಾಡಿರುವುದನ್ನು ವಿರೋಧಿಸಿ ಗ್ರಾಮಸ್ಥರು, ಪೋಷಕರು ಹಾಗೂ ವಿದ್ಯಾರ್ಥಿಗಳು ಶಾಲೆಯ ಎಸ್.ಡಿ.ಎಂಸಿ ಅಧ್ಯಕ್ಷರಾದ ಎಂ.ಜೆ.ಕೃಷ್ಣ ಅವರ ನೇತೃತ್ವದಲ್ಲಿ ಶಾಲೆಗೆ ಬೀಗ ಜಡಿದು ಶಾಲೆಯ ಮುಂದೆ ಪ್ರತಿಭಟನೆ ನಡೆಸಿದರು.

ಶಾಲೆಯಲ್ಲಿ ಅತ್ಯುತ್ತಮವಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಆಂಗ್ಲ ಭಾಷೆಯನ್ನು ಬೋಧಿಸುತ್ತಿದ್ದ ಪವಿತ್ರ ಅವರನ್ನು ವಾರ್ಷಿಕ ಪರೀಕ್ಷೆಗಳು ಹತ್ತಿರ ಬರುತ್ತಿರುವ ವೇಳೆ ಏಕಾಏಕಿ ವರ್ಗಾವಣೆ ಮಾಡಿರುವ ಕಾರಣ ಶಾಲೆಯಲ್ಲಿ ಮಕ್ಕಳಿಗೆ ತೀವ್ರ ತೊಂದರೆಯಾಗಿದೆ. ಕೂಡಲೇ ಅದೇ ಶಿಕ್ಷಕಿ ಪವಿತ್ರ ಅವರನ್ನು ಮರು ನೇಮಕ ಮಾಡಬೇಕು. ಇಲ್ಲವೇ ಆಂಗ್ಲ ಮಾಧ್ಯಮ ಪಾಂಡಿತ್ಯವನ್ನು ಹೊಂದಿರುವ ಬೇರೆ ಶಿಕ್ಷಕರನ್ನಾದರೂ ತಕ್ಷಣವೇ ನೇಮಕ ಮಾಡಬೇಕು ಇಲ್ಲದಿದ್ದರೆ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಮುಂದೆ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಸ್.ಡಿ.ಎಂ.ಸಿ ಅಧ್ಯಕ್ಷ ಕೃಷ್ಣ ಮತ್ತು ಪೋಷಕರು ತಿಳಿಸಿದರು. ವರ್ಗಾವಣೆ ಮಾಡುದಾದರೆ ವರ್ಷದ ಆರಂಭದಲ್ಲಿ ಮಾಡಬೇಕು.



ಅದು ಬಿಟ್ಟು ವರ್ಷದ ಕೊನೆಯಲ್ಲಿ ವಾರ್ಷಿಕ ಪರೀಕ್ಷೆಗಳು ಹತ್ತಿರ ಇರುವ ವೇಳೆ ವರ್ಗಾವಣೆ ಮಾಡಿರುವುದು ಸರಿಯಲ್ಲ. ಶಿಕ್ಷಕರನ್ನು ಕಡಿಮೆ ಮಾಡಿದರೆ ಪೋಷಕರು ತಮ್ಮ ಮಕ್ಕಳನ್ನು ಬೇರೆ ಶಾಲೆಗೆ ಸೇರಿಸುವ ಅಪಾಯ ಇರುತ್ತದೆ. ಹಾಗಾಗಿ ಕೂಡಲೇ ನಮ್ಮ ಗ್ರಾಮದ ಶಾಲೆಗೆ ಇಂಗ್ಲೀಷ್ ಶಿಕ್ಷಕರನ್ನು ಮರು ನೇಮಕ ಮಾಡಬೇಕು ಎಂದು ಎಂದು ಶಿಕ್ಷಣ ಇಲಾಖೆಯ ಅಧಿಕಾರಿಗಳನ್ನು ಪ್ರತಿಭಟನಾಕಾರರು ಒತ್ತಾಯ ಮಾಡಿದರು. ಎಸ್.ಡಿ.ಎಂ.ಸಿ ಅಧ್ಯಕ್ಷ ಎಂ.ಜೆ.ಕೃಷ್ಣ, ಗ್ರಾ.ಪಂ.ಮಾಜಿ ಸದಸ್ಯ ಯೋಗಣ್ಣ, ಎಸ್.ಡಿ.ಎಂ.ಸಿ ಉಪಾಧ್ಯಕ್ಷ ಬಸವರಾಜು, ಸದಸ್ಯರಾದ ಜಲೇಂದ್ರ, ಲೋಕೇಶ್, ಮಹೇಂದ್ರ ಎಂ, ಮಂಜು, ನವೀನ್, ಗೋವಿಂದ್, ರೂಪ, ಮಾಯಿಗಯ್ಯ, ಕುಮಾರ್, ಸುರೇಶ್, ಚಂದ್ರಣ್ಣ, ನಿಂಗಯ್ಯ, ಗೋವಿಂದಯ್ಯ, ತಿಮ್ಮಯ್ಯ, ವರದರಾಜು, ಸಣ್ಣಯ್ಯ, ಮಂಜುನಾಥ್, ಗೌತಮ್ ಸೇರಿದಂತೆ ಹಲವು ಪೋಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಕ್ಷೇತ್ರ ವ್ಯಾಪ್ತಿಯಲ್ಲಿ 40 ಕೋಟಿ ವೆಚ್ಚದಲ್ಲಿ ಒಟ್ಟು 252 ಕಾಮಗಾರಿಗಳು**

# ಬೆಟ್ಟಗೇರಿಯಲ್ಲಿ ಶಾಸಕರಿಂದ ಕಾಮಗಾರಿಗೆ ಚಾಲನೆ

ಮಡಿಕೇರಿ: ತಾಲೂಕಿನ ಬೆಟ್ಟಗೇರಿಯಲ್ಲಿ ಶಾಸಕರ ವಿಶೇಷ ಅನುದಾನದಲ್ಲಿ ನಿರ್ಮಾಣವಾಗುತ್ತಿರುವ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ಎ.ಎಸ್.ಪೊನ್ನಣ್ಣ ಅವರು ಭೂಮಿ ಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿದರು.

ಕೆಆರ್‌ಐಡಿಎಲ್ ಸಂಸ್ಥೆ ಮೂಲಕ ವಿರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 40 ಕೋಟಿ ವೆಚ್ಚದಲ್ಲಿ ಒಟ್ಟು 252 ಕಾಮಗಾರಿಗಳನ್ನು ಎ.ಎಸ್.ಪೊನ್ನಣ್ಣ ಅವರು ಜನರ ಕೋರಿಕೆಯ ಮೇರೆಗೆ ಗುರುತಿಸಿ ಅನುದಾನದ ಹಂಚಿಕೆ ಮಾಡಿದ್ದಾರೆ. ಕ್ಷೇತ್ರದ ಕಟ್ಟಕಡೆಯ ವ್ಯಕ್ತಿಗೂ ಮೂಲಭೂತ ವ್ಯವಸ್ಥೆ ದೊರಕಬೇಕು ಎಂಬ ಆಶಯದೊಂದಿಗೆ ಆದ್ಯತೆ ಮೇರೆಗೆ ಗ್ರಾಮೀಣ ಪ್ರದೇಶಗಳನ್ನು ಗುರಿಯಾಗಿಸಿ ಕಾಮಗಾರಿಗೆ ಅನುದಾನ ಒದಗಿಸಲಾಗಿದೆ ಎಂದು ಅವರು ತಿಳಿಸಿದರು.

ಸಾರ್ವಜನಿಕರಿಂದ ಮತ್ತಷ್ಟು ಕೋರಿಕೆಗಳು ಸಲ್ಲಿಕೆಯಾಗಿದ್ದು, ಅವುಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದು ಎಂದು ಎ.ಎಸ್.ಪೊನ್ನಣ್ಣ ನವರು ಮಾಹಿತಿ



ನೀಡಿದರು. ಈ ಸಂದರ್ಭದಲ್ಲಿ ಪ್ರಮುಖರಾದ ಇಸ್ಮಾಯಿಲ್, ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆಯ ಜಿಲ್ಲಾಧ್ಯಕ್ಷರಾದ ತೆನ್ನಿರ ಮೈನಾ, ಕೊಡಗನ ತೀರ್ಥ ಪ್ರಸಾದ್, ಹನೀಫ್, ಬೆಟ್ಟಗೇರಿ ಗ್ರಾಮ ಪಂಚಾಯತ್ ಅಧ್ಯಕ್ಷೆ ಚಳಿಯಂಡ ಕಮಲಾ ಉತ್ತಯ್ಯ, ಮುಂಜಾಂದಿರ ಚಿಕ್ಕು ಕಾರ್ಯಪ್ಪ, ಕೇಟೋಳಿ ಮೋಹನ್ ರಾಜ್, ಅಪ್ರು ರವೀಂದ್ರ, ಹೊಸೂರು ಸೂರಜ್, ಪಿ.ಎಲ್.ಸುರೇಶ್, ಮಜೀದ್, ಬೊಳ್ಳಂಡ ನಾಚಪ್ಪ, ಮಹಮದ್ ಕುಂಞ, ಮುಂಜಾಂದಿರ ಅಜಿತ್, ತೋರೆರ ಮುದ್ದಯ್ಯ, ಮುಂಜಾಂದಿರ ಸದಾ, ಕಾಳೇರಮ್ಮನ ಕುಮಾರ್, ಪಟ್ಟಡ ದೀಪಕ್, ಮೊಯ್ದು ಬೆಟ್ಟಗೇರಿ, ಹನೀಫ್ ಸಂಪಾಜೆ, ರಘು, ಮುಂಜಾಂದಿರ ಬೋಪಣ್ಣ, ಕೊಕ್ಕಂಡ ಚಂಗಪ್ಪ, ಪುದಿನೆರವನ ಆಶಾ, ಗಣೇಶ್, ಗುತ್ತಿಗೆದಾರ ನರೇನ್ ಸೋಮಯ್ಯ, ಅರ್ಚಕರಾದ ದೇವಿಪ್ರಸಾದ್ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

# ಎಲ್ಲಾ ವರ್ಗದವರಿಗೂ ಕಾನೂನು ಅರಿವಿನ ಕಾರ್ಯಗಾರ ಅಗತ್ಯ: ಡಿಸಿ ಕುಮಾರ

**ಮಂಡ್ಯ :** ಸಮಾಜದ ಎಲ್ಲಾ ವರ್ಗದವರಿಗೂ ಕಾನೂನಿನ ಅರಿವು ಮೂಡಿಸುವ ಕಾರ್ಯಗಾರ ಅಗತ್ಯವಿದ್ದು ಕಾನೂನಿನ ಅರಿವು ಇದ್ದಾಗ ಮಾತ್ರ ದೌರ್ಜನ್ಯ ಪ್ರಕರಣಗಳನ್ನು ತಡೆಗಟ್ಟಲು ಸಾಧ್ಯ ಎಂದು ಜಿಲ್ಲಾಧಿಕಾರಿ ಡಾ. ಕುಮಾರ್ ಅವರು ಹೇಳಿದರು.

ನಗರದ ಡಾ. ಬಿಆರ್ ಅಂಬೇಡ್ಕರ್ ಭವನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ಪ್ರತಿಬಂಧ ) ಅಧಿನಿಯಮ 1989(ತಿದ್ದುಪಡಿ ) ಅಧಿನಿಯಮ 2015 ಮತ್ತು ನಿಯಮಗಳು 1995(ತಿದ್ದುಪಡಿ ) ನಿಯಮಗಳು ಮತ್ತು ನಾಗರೀಕ ಹಕ್ಕು ರಕ್ಷಣಾ ಕಾಯ್ದೆ 1955 ರನ್ವಯ ಆಯೋಜಿಸಲಾಗಿದ್ದ ವಿಚಾರಗೋಷ್ಠಿ ಮತ್ತು ಕಾರ್ಯಗಾರ ಕಾರ್ಯಕ್ರಮವನ್ನು ಗಿಡಕ್ಕೆ ನೀರೆರೆದು ಸಂವಿಧಾನ ಶಿಲ್ಪಿ ಡಾ. ಬಿ ಆರ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿದರು.



ನಂತರ ಮಾತನಾಡಿದ ಅವರು ಎಲ್ಲಾ ಸಮುದಾಯದ ಜನರಿಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ಪ್ರತಿಬಂಧ ) ಅಧಿನಿಯಮ 1989(ತಿದ್ದುಪಡಿ ) ಅಧಿನಿಯಮ 2015 ಮತ್ತು ನಿಯಮಗಳು 1995(ತಿದ್ದುಪಡಿ ) ನಿಯಮಗಳು ಮತ್ತು ನಾಗರೀಕ ಹಕ್ಕು ರಕ್ಷಣಾ ಕಾಯ್ದೆ 1955 ಕುರಿತು ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಅರಿವು ಮೂಡಿಸುವ ಕಾರ್ಯಗಾರವನ್ನು ಆಯೋಜಿಸಬೇಕು. ಆಗ ಮಾತ್ರ ಈ ಕಾಯ್ದೆ ತೀವ್ರತೆ ತಿಳಿಯುತ್ತದೆ ಎಂದು ಹೇಳಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ಪ್ರತಿಬಂಧ ಕಾಯ್ದೆಯ ಸದಸ್ಯರುಗಳು ಮುತುವರ್ಜಿ ವಹಿಸಿ ಪ್ರಯತ್ನ ಪಟ್ಟರೆ ತಾಲೂಕು ಮಟ್ಟದಲ್ಲಿ ಕಾರ್ಯಗಾರವನ್ನು ಯಶಸ್ವಿಗೊಳಿಸಬಸಹುದು. ಸದರಿ ಕಾಯ್ದೆಯಡಿ ನ್ಯಾಯಾಲಯಗಳಿಗೆ ಸಾಕ್ಷಿ ಹೇಳಲು ಬರುವ ಸಾಕ್ಷಿದಾರರಿಗೆ ಧೈರ್ಯ ತುಂಬುವ ಕೆಲಸವಾಗಬೇಕು ಎಂದರು.

ಕಾರ್ಯಗಾರವನ್ನು ಮಾಡುವ ಮೂಲಕ ಅಸ್ಪೃಶ್ಯತೆಯನ್ನು ಈಗಲೂ ಜೀವಂತವಾಗಿ ಉಳಿಸಿರುವುದು ತಪ್ಪು ಎಂಬ ಸಂದೇಶವನ್ನು ಸಮಾಜಕ್ಕೆ ನೀಡಬೇಕಿದೆ. ಅಸ್ಪೃಶ್ಯತೆಯನ್ನು ಆಚರಿಸಿದರೆ ಏನೆಲ್ಲಾ ಕಾಯ್ದೆಗಳನ್ನು ಎದುರಿಸಬೇಕಾಗುತ್ತದೆ ಎಂಬ ಸಂದೇಶ ಸಮಾಜಕ್ಕೆ ಹೋಗಬೇಕು ಎಂದು ಹೇಳಿದರು.

ಎಲ್ಲಾ ದೌರ್ಜನ್ಯ ಪ್ರಕರಣಗಳನ್ನು ಕಾನೂನಿನ ಮೂಲಕವೇ ಪರಿಹರಿಸುತ್ತೇವೆ ಎಂದರೆ ಪ್ರಯೋಜನವಿಲ್ಲ ಸಮಾಜದಲ್ಲಿ ಮನಪರಿವರ್ತನೆ ಆಗಬೇಕು. ಜನರಿಗೆ ಅರಿವು ಹೆಚ್ಚಾಗಬೇಕು. ಹೀಗಿದ್ದಾಗ ಮಾತ್ರ ಸಮಾಜದಿಂದ ಅಸ್ಪೃಶ್ಯತೆಯನ್ನು ಹೋಗಲಾಡಿಸಬಹುದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ್ಯವನ್ನು ತಡೆಗಟ್ಟಬಹುದು ಎಂದು ಅಭಿಪ್ರಾಯಪಟ್ಟರು.

ಪರಿಶಿಷ್ಟರ ಮೇಲಿನ ದೌರ್ಜನ್ಯವನ್ನು ತಡೆಗಟ್ಟಲು ಕಾಯ್ದೆ ಇದ್ದರೂ ಸಹ ಇನ್ನೂ ಪ್ರಸ್ತುತ ಸಮಾಜದಲ್ಲಿ ಪರಿಶಿಷ್ಟರ ಮೇಲೆ ದೌರ್ಜನ್ಯ ಪ್ರಕರಣಗಳು ನಡೆಯುತ್ತಿವೆ ಎಂದರೆ ನಮ್ಮನ್ನು ನಾವೇ ಅವಲೋಕಿಸಿಕೊಳ್ಳಬೇಕು. ಸದರಿ ಕಾಯ್ದೆ ಬಂದಾಗ ದೇಶದಲ್ಲಿ ಅನಕ್ಷರಸ್ಥರ ಸಂಖ್ಯೆ ಹೆಚ್ಚಿತ್ತು ಆದರೆ ಇಂದು ಸುಶಿಕ್ಷಿತ ಸಮಾಜದಲ್ಲಿ ಇದ್ದೇವೆ ಅರಿವಿನ ಸಂಖ್ಯೆ ಹೆಚ್ಚು ಇದೆ ಹೀಗಿದ್ದಾಗಿಯೂ ಪರಿಶಿಷ್ಟರ ಮೇಲೆ ದೌರ್ಜನ್ಯ ಪ್ರಕರಣಗಳು ನಡೆಯುತ್ತಿದೆ ಎಂದರೆ ಇದು ನಾಗರೀಕ ಸಮಾಜದ ಗುಣಲಕ್ಷಣವಲ್ಲ ಎಂದು ಹೇಳಿದರು.

ಸಂವಿಧಾನ ಶಿಲ್ಪಿ ಬಾಬಾ ಸಾಬ್ ಡಾ. ಬಿ.ಆರ್ ಅಂಬೇಡ್ಕರ್ ಅವರ ಆಶಯದಂತೆ ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದಲ್ಲಿ ಸಮಾನತೆಯಿಂದ ಬದುಕಲು ಎಲ್ಲರೂ ಶ್ರಮಿಸಬೇಕಾಗುತ್ತದೆ. ಡಾ.ಬಿ.ಆರ್ ಅಂಬೇಡ್ಕರ್ ಅವರ ಆದರ್ಶಗಳು ಮೌಲ್ಯಗಳು ಚಿಂತನೆಗಳು ಮತ್ತು ಕೊಡುಗೆಗಳು ಇನ್ನೂ ಸಮಾಜದಲ್ಲಿ ಜೀವಂತವಾಗಿ ಉಳಿದಿದೆ. ಬಾಬಾಸಾಹೇಬ ಅಂಬೇಡ್ಕರ್ ಅವರ ಆದರ್ಶಗಳನ್ನು ನಿಜವಾಗಿಯೂ ಜೀವನದಲ್ಲಿ ಅಳವಡಿಸಿಕೊಂಡಿದ್ದೆ ಆದಲ್ಲಿ ಸಮ ಸಮಾಜವನ್ನು ನಿರ್ಮಾಣ ಮಾಡಬಹುದು ಎಂದರು.

ಬರಿ ಮಾತಿನಲ್ಲಿ ಸಮ ಸಮಾಜ ನಿರ್ಮಾಣ ಮಾಡುವ ಬದಲು ಪ್ರತಿಯೊಬ್ಬರು "ಮನುಷ್ಯ ಕುಲಂ ತಾನೊಂದೇ ವಲಂ" ಸಿದ್ಧಾಂತವನ್ನು ಅನುಸರಿಸಿ ಬಾಳಿದ್ದೇ ಆದಲ್ಲಿ ಸಮಾಜದಲ್ಲಿನ ಅಸ್ಪೃಶ್ಯತೆ ಮತ್ತು ದೌರ್ಜನ್ಯವನ್ನು ತಡೆಗಟ್ಟಬಹುದು ಎಂದು ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಆನಂದ್ .ಎಂ ಅವರು ಮಾತನಾಡಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ದೌರ್ಜನ್ಯ ಕಾಯ್ದೆ ಅಡಿಯಲ್ಲಿ ಶಿಕ್ಷೆ ಪ್ರಮಾಣ ಕಡಿಮೆ ಆಗುತ್ತಿದೆ. ನ್ಯಾಯಾಲಯದಲ್ಲಿ ಸಾಕ್ಷಿ ಗಳ ಕೊರತೆ ಇದ್ದು ಈ ಕಾಯ್ದೆಯ ಕುರಿತು ಜನರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳು ಆಗಬೇಕಿದೆ ಎಂದರು.

ಪರಿಶಿಷ್ಟ ಕಾಯ್ದೆಯ ಕುರಿತು ಜಾಗೃತಿ ಮೂಡಿಸುವಂತ ಕೆಲಸಗಳು ನಡೆದಾಗ ಮಾತ್ರ ಸದರಿ ಕಾಯ್ದೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತದೆ. ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲೂ ಅರಿವು ಮೂಡಿಸುವ ಕಾರ್ಯಕ್ರಮಗಳು ಮಾಡಬೇಕು. ಈ ಕಾಯ್ದೆಯಡಿ ನೋಂದಣಿಯಾದ ಪ್ರಕರಣಗಳು ಸಮರ್ಪಕವಾಗಿ ತನಿಖೆ ಆಗಬೇಕು. ಡಾ.ಬಿ.ಆರ್ ಅಂಬೇಡ್ಕರ್ ಹಾಗೂ ಬಸವಣ್ಣ ರವರ ಆದರ್ಶಗಳು ಚಿಂತನೆಯತ್ತ ನಾವು ನಡೆಯಬೇಕು ಜಾತ್ಯತೀತ ರಾಷ್ಟ್ರವಾಗಿ ಎಲ್ಲಾ ಧರ್ಮಗಳು ಸಾಮರಸ್ಯದಿಂದ ಇರಬೇಕು ಹಾಗಾದರೆ ಮಾತ್ರ ಸರ್ವ ಧರ್ಮಸಮನ್ವಯ ಸಮಾಜ ನಿರ್ಮಿಸಲು ಸಾಧ್ಯ ಎಂದು ಹೇಳಿದರು.

ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಕೆ ಶ್ರೀನಿವಾಸ್, ಮಂಡ್ಯ ಐದನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಸರ್ಕಾರಿ ಅಭಿಯೋಜಕರಾದ ರಾಜೇಶ್ ಎಚ್ ಸಿ. ಸೇರಿದಂತೆ ಸಮುದಾಯದ ಮುಖಂಡರುಗಳು ಉಪಸ್ಥಿತರಿದ್ದರು.

# ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ



**ಕೆ .ಆರ್. ನಗರ :** ಮೈಸೂರು ಜಿಲ್ಲಾ ಸಹಕಾರ ಬ್ಯಾಂಕಿನನಿಂದ ರೈತರಿಗೆ 1400 ಕೋಟಿ ಬೆಳೆ ಸಾಲ ವಿತರಿಸಲಾಗಿದ್ದು 2026–27 ಸಾಲಿನಿಂದ ಈ ಸಾಲದ ಮೊತ್ತವನ್ನು ಇನ್ನಷ್ಟು ಹೆಚ್ಚಿಸಲಾಗುವುದು ಎಂದು ಜಿಲ್ಲಾ ಸಹಕಾರ ಬ್ಯಾಂಕಿನ ಅಧ್ಯಕ್ಷ ದೊಡ್ಡಸ್ವಾಮೇಗೌಡ ಹೇಳಿದರು. ತಾಲೂಕಿನ ಚಿಬುಕಹಳ್ಳಿ ಕೃಷಿಪತ್ತಿನ ಸಹಕಾರ ಸಂಘದಿಂದ ತಮಗೆ ಏರ್ಪಡಿಸಿದ್ದ ಸನ್ಮಾನ ಸ್ವೀಕರಿಸಿ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿ ನಂತರ ನಡೆದ ಸಮಾರಂಭದಲ್ಲಿ ಅವರು ಮಾತನಾಡಿದರು

ಇದರ ಜತಗೆ ನೀಡಲಾಗಿರುವ ಎನ್.ಎಪ್.ಎಸ್, 800 ಕೋಟಿ ರೂ ಸಾಲದ ಮೊತ್ತವನ್ನು ಇನ್ನಷ್ಟು ಹೆಚ್ಚಿಸುವುದರ ಜತಗೆ ಹೊಸದಾಗಿ ಸಾಲಕ್ಕಾಗಿ ಅರ್ಜಿ ಸಲ್ಲಿಸಿರುವ ರೈತರಿಗೆ ಸಾಲ ಕೊಡಿಸಲು ಕ್ರಮೈಗೊಳ್ಳಲಾಗುತ್ತಿದೆ ರೈತರು ಅತಂಕ ಪಡುವುದು ಬೇಡ ಎಂದರು

ಈವರಿಗೂ ಕೃಷಿ ಪತ್ತಿನ ಸಂಘದಿಂದ ನೀಡಲಾಗಿರುವ ಸಾಲವನ್ನು ಪಡೆದು ಸುಸ್ತಿಯಾಗಿರುವ ರೈತರಿಂದ ವಾಪಸ್ ಕಟ್ಟಿಸಲು ಮಾರ್ಚ್ ಅಂತ್ಯದ ಗುರಿಯನ್ನು ಸಂಘದ ಸಿಇಓ ಗಳಿಗೆ ಸೂಚನೆ ನೀಡಲಾಗಿದ್ದು ಸಾಲ ವಸೂಲಾತಿಯಿಂದ ಸಂಘದ ಅಭಿವೃದ್ದಿಗೆ ಸಹಕಾರಿಯಾಗಲಿದೆ ಎಂದರು

ಎರಡು ಜಿಲ್ಲೆಯಲ್ಲಿ ಕೃಷಿಪತ್ತಿನ ಸಹಕಾರ ಸಂಘಗಳು ನಿವೇಶನ ಹೊಂದಿ ಹೊಸದಾಗಿ ಕಟ್ಟಡ ನಿರ್ಮಿಸಲು ಮುಂದಾದರೇ ಜಿಲ್ಲಾ ಬ್ಯಾಂಕಿನಿಂದ ಅನುಧಾನ ಕೊಡಿಸುವೇ ಎಂದು ತಿಳಿಸಿದ ದೊಡ್ಡಸ್ವಾಮೇಗೌಡ ಚಿಬುಕಹಳ್ಳಿ ಸಂಘದ ಕಟ್ಟಡ ನಿರ್ಮಾಣಕ್ಕೆ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು

ಇದಕ್ಕು ಮೊದಲು ಗ್ರಾಮಕ್ಕೆ ಅಗಮಿಸಿದ ದೊಡ್ಡಸ್ವಾಮೇಗೌಡ ಅವರನ್ನು ಸಂಘದ ಅಧ್ಯಕ್ಷ ಸಿ.ಎಂ.ಶಿವಕುಮಾರ್ ಅವರ ನೇತೃತ್ವದಲ್ಲಿ ಪಟಾಕಿ ಸಿಡಿಸಿ ಅದ್ದೂರಿಯಾಗಿ ಸ್ವಾಗತಿಸಲಾಯಿತು

ಈ ಸಂದರ್ಭದಲ್ಲಿ ಪಹಳಿಯೂರು ಎಂಸಿಡಿಸಿ ಬ್ಯಾಂಕ್ ಶಾಖೆ ವ್ಯವಸ್ಥಾಪಕ ಪ್ರತಾಪ್ ಆಯರಹಳ್ಳಿ , ಮೇಲ್ವಿಚಾರಕ ದಿನೇಶ್ ಮೂಡಲಕೊಪ್ಪಲು ಸಂಘದ ಅಧ್ಯಕ್ಷ ಸಿ.ಎಂ.ಶಿವಕುಮಾರ್, ಉಪಾಧ್ಯಕ್ಷ ನಂಜೇಗೌಡ, ನಿರ್ದೇಶಕರಾದ ಸಚಿನ್, ಶಿವರಾಜು, ಗಣೇಶ್,ವೆಂಕಟೇಶ್,ಮಂಜುಳಾ,ವೀಣಾ ನಿಂಗರಾಜು, ಮಾಜಿ ಸದಸ್ಯ ಕೆ.ಎನ್.ತಮ್ಮೆಗೌಡ,

ತಾ.ಪಂ.ಮಾಜಿ ಸದಸ್ಯ ಚಿಕ್ಕೇಗೌಡ, ಹೊಸಕೋಟೆ ಗ್ರಾ.ಪಂ.ಅಧ್ಯಕ್ಷ ಮಾದೇಗೌಡ, ಸದಸ್ಯ ಪುನೀತ್, ಇದ್ದರು.

# ನಿಯಮದಂತೆ ಚುನಾವಣೆ ನಡೆಸುವವರೆಗೂ ಹಾಲಿ ಮಂಡಳಿಯ ವಿರುದ್ಧ ನಿರಂತರ ಹೋರಾಟ : ಸಾತನೂರು ಮಹೇಶ್

**ಮಂಡ್ಯ:** ಜಿಲ್ಲಾ ಕುರುಬ ಸಂಘದ ಕಾರ್ಯಕಾರಿ ಮಂಡಳಿಗೆ ಸಹಕಾರಿ ಸಂಘಗಳ ನಿಯಮದಂತೆ ಚುನಾವಣೆ ನಡೆಸುವವರೆಗೂ ಹಾಲಿ ಮಂಡಳಿಯ ವಿರುದ್ಧ ನಿರಂತರ ಹೋರಾಟ ಮಾಡಲಾಗುವುದು ಎಂದು ಸಂಘದ ನಿರ್ದೇಶಕ ಹಾಗೂ ಮೂಡಾ ಸದಸ್ಯ ಸಾತನೂರು ಮಹೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಿನ ಆಡಳಿತ ಮಂಡಳಿಯ ಏಕಪಕ್ಷೀಯ ಮತ್ತು ಕಾನೂನು ಬಾಹಿರ ನಡೆಯು ಖಂಡನಾರ್ಹವಾಗಿದೆ. ಸಂಘದ ಬೈಲಾ ಪ್ರಕಾರ ಪ್ರತಿ ಐದು ವರ್ಷಕ್ಕೊಮ್ಮೆ ಚುನಾವಣೆ ನಡೆಸಲು ಮುಂದಾಗಲಿ ಎಂದು ಆಗ್ರಹಿಸಿದರು.

ಕಳೆದ ಡಿ.28ರಂದು ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ 7 ಅಂಶಗಳಿಗೂ ಸಮಾಧಾನದಿಂದ ಚರ್ಚೆಯಲ್ಲಿ ಅಧ್ಯಕ್ಷರು ಭಾಗವಹಿಸಿದ್ದರು. ಆದರೆ 8 ವಿಷಯ ಬಂದಂತೆ ಚರ್ಚೆ ಮಾಡದೇ ಪಲಾಯನ ಮಾಡಿದ್ದಾರೆ. ಸಭೆಯಲ್ಲಿ ಸದಸ್ಯರು ಪ್ರತಿಭಟನೆಗೆ ಮುಂದಾದಾಗ ಸಭೆ ನಡೆಸದೇ, ಪ್ರಶ್ನೆಗಳಿಗೆ ಉತ್ತರ ನೀಡದೇ ಪೊಲೀಸರ ರಕ್ಷಣೆಯೊಂದಿಗೆ ಹೊರ ನಡೆದಿದ್ದಾರೆ ಎಂದು ಖಂಡಿಸಿದರು.

ಸಭೆಯಲ್ಲಿ ಭಾಗವಹಿಸಿದವರೆಲ್ಲರೂ ಸದಸ್ಯರೇ ಆಗಿದ್ದಾರೆ. ಆದರೂ ಸಭೆಯಲ್ಲಿ ಸದಸ್ಯರಲ್ಲವರು ಬಂದಿದ್ದರು ಎಂದು ಸಮುದಾಯದವರನ್ನು ಗೂಂಡಾಗಳು ಎಂದಿರುವ ಅಧ್ಯಕ್ಷರು ಬಹಿರಂಗ ಕ್ಷಮೆಯಾಚಿಸಬೇಕು. ಸಭೆಯನ್ನು ನಡೆಸದೇ ನಡಾವಳಿಯಲ್ಲಿ ಸದಸ್ಯರ ಸಹಿ ಪಡೆದಿದ್ದು, ಕಾರ್ಯಕಾರಿ ಮಂಡಳಿಗೆ ಮುಂದುವರೆಯಲು ಸಹಕಾರ ಸಂಘಗಳ ಉಪನಿರ್ದೇಶಕರಿಗೆ ಒಪ್ಪಿಸಿದರೆ ಅದನ್ನು ತಿರಸ್ಕರಿಸಬೇಕು ಎಂದು ಒತ್ತಾಯಿಸಿದರು.

ಇವರಿಲ್ಲದೇ ಇದ್ದರೂ ವಿದ್ಯಾರ್ಥಿ ನಿಲಯದ ಕಾಮಗಾರಿ ಮುಂದುವರೆಯುತ್ತದೆ. ತಮ್ಮಿಂದಲೇ ವಿದ್ಯಾರ್ಥಿನಿಲಯಕ್ಕೆ ಅನುದಾನ ದೊರೆತಿದೆ ಎಂಬ ತಪ್ಪು ಸಂದೇಶ ರವಾನಿಸುತ್ತಿದ್ದಾರೆ. ಸಿದ್ದರಾಮಯ್ಯ ಅವರ ಸೂಚನೆ ಮೇರೆಗೆ ರಾಜ್ಯ 17 ಜಿಲ್ಲೆಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ನೀಡಲಾಗಿದೆ ಎಂದು ಸಮರ್ಥಿಸಿಕೊಂಡರು.



ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ ಎನ್.ದೊಡ್ಡಯ್ಯ ಮಾತನಾಡಿ, ಹಾಲಿ ಅಧ್ಯಕ್ಷ ಎಂ.ಎಲ್.ಸುರೇಶ್ ಅವರನ್ನು ಮಳವಳ್ಳಿಯಿಂದ ನಿರ್ದೇಶಕರಾಗಿ ಆಯ್ಕೆಯಾಗುವಂತೆ ನಾನು ಮಾಡಿದ್ದೆ. ಜೊತೆಗೆ ಮುಖ್ಯಮಂತ್ರಿಗಳ ಸಲಹೆ ಮೇರೆಗೆ ಎರಡೂವರೆ ವರ್ಷಗಳ ಬಳಿಕ ಅಧ್ಯಕ್ಷ ಸ್ಥಾನವನ್ನು ಬೇರೆಯವರಿಗೆ ಬಿಟ್ಟುಕೊಡುವಂತೆ ಮಾತುಕೊಟ್ಟಿದ್ದ ಸುರೇಶ್ ತಮ್ಮ ವಾಗ್ದಾನ ತಪ್ಪಿದ್ದು, ಇದೀಗ ವಿದ್ಯಾರ್ಥಿನಿಲಯ ಪೂರ್ಣಗೊಳ್ಳುವವರೆಗೂ ಮುಂದುವರೆಯುವ ಇಚ್ಛೆಗೆ ವಿರೋಧ ವ್ಯಕ್ತಪಡಿಸಿದರು.

ಕಾಂಗ್ರೆಸ್ ಮುಖಂಡ ಕೋಡಿಕೊಪ್ಪಲು ನಾಗೇಶ್ ಮಾತನಾಡಿ, ಹಾಲಿ ಕಾರ್ಯಕಾಕಾರಿ ಮಂಡಳಿಯ ಅವಧಿಯು ಮಾ.6ಕ್ಕೆ ಪೂರ್ಣಗೊಳ್ಳಲಿದೆ. ಈ ಸಂಬಂಧ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಲಾಗುವುದು. ಸಿದ್ದರಾಮಯ್ಯ ಅವರು ಮುಂದಿನ ಮಂಡಳಿಯ ಆಯ್ಕೆಗೆ ಚುಣಾವಣೆ ನಡೆಸುವುದು ಅಥವಾ ಹಾಲಿ ಮಂಡಳಿ ಮುಂದುವರೆಯುವಂತೆಯೇ ಆಗಲಿ ನಿಧಾರ ಕೈಗೊಂಡರೆ ಅವರ ನಿರ್ಧಾರಕ್ಕೆ ಬದ್ಧರಾಗಿರುತ್ತೇವೆ ಎಂದು ಹೇಳಿದರು.

ಗೋಷ್ಠಿಯಲ್ಲಿ ಮುಖಂಡರಾದ ಬಿದರಕರೆ ಮಂಜೇಗೌಡ, ಎಸ್.ಎಲ್.ಶಂಕರ್, ಭಾಸ್ಕರ್, ವಿನಯಕುಮಾರ್, ಭರತೇಶ, ರಮೇಶ್ ಅಪ್ಪುಗೌಡ ಇದ್ದರು.

# ಮಹನೀಯರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸಿ: ಎಡಿಸಿ ಶಿವಾನಂದಮೂರ್ತಿ

**ಮಂಡ್ಯ:** ಜನವರಿ 2026 ರ ಮಾಯೆಯಲ್ಲಿ ಬಂದಿರುವ ಶಿವಯೋಗಿ ಸಿದ್ದರಾಮ ಜಯಂತಿ, ಮಹಾಯೋಗಿ ವೇಮನ ಜಯಂತಿ, ಅಂಬಿಗರ ಚೌಡಯ್ಯ ಜಯಂತಿ ಮತ್ತು ಸವಿತಾ ಮಹರ್ಷಿ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸಿ ಎಂದು ಅಪರ ಜಿಲ್ಲಾಧಿಕಾರಿ ಬಿ.ಸಿ ಶಿವಾನಂದಮೂರ್ತಿ ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮಂಗಳವಾರ 2025–2026 ನೇ ಸಾಲಿನ ಜನವರಿಯಲ್ಲಿ ಬರುವ ಮಹನೀಯರ ಜಯಂತಿಗಳ ಆಚರಣೆ ಕುರಿತು ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಜನವರಿ 20 ರಂದು ಶಿವಯೋಗಿ ಸಿದ್ದರಾಮ ಜಯಂತಿ, ಜನವರಿ 19 ರಂದು ವೇಮನ ಜಯಂತಿ ಹಾಗೂ ಜನವರಿ 21 ರಂದು ಅಂಬಿಗರ ಚೌಡಯ್ಯ ಜಯಂತಿಗಳನ್ನು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಅರ್ಥಪೂರ್ಣವಾಗಿ ಆಚರಿಸಿ ಎಂದು ಹೇಳಿದರು.

ಜನವರಿಯಲ್ಲಿ ಬರುವ ಮಹನೀಯರ ಕುರಿತು ತಿಳಿದಿರುವ ಸಂಪನ್ಮೂಲ ವ್ಯಕ್ತಿಯನ್ನು ಕರೆಸಿ ಮಹಾನ್ ಚೇತನರ ಉದ್ದೇಶ ಮೌಲ್ಯ ಹಾಗೂ ಅವರ ಸಾಧನೆಗಳ ಕುರಿತಾಗಿ ಉಪನ್ಯಾಸ ಕಾರ್ಯಕ್ರಮ ನೀಡಿ. ಸದರಿ ಸಮುದಾಯಗಳಿಗೆ ಸೇರಿದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಐದು ಜನರನ್ನು ಗೌರವಿಸಿ ಸನ್ಮಾನಿಸಲಾಗುವುದು ಎಂದರು. ಸವಿತಾ ಮಹರ್ಷಿ ಜಯಂತಿಯನ್ನು ಜನವರಿ 27 ರಂದು ನಗರದ ಕಲಾಮಂದಿರದಲ್ಲಿ ಆಯೋಜಿಸಲಾಗುವುದು. ಸದರಿ ಸಮುದಾಯಕ್ಕೆಸೇರಿದ ವಿವಿಧಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಐದು ಸಾಧಕರಿಗೆ ಗೌರವಿಸಲಾಗುವುದು. ಸವಿತಾ ಮಹರ್ಷಿಯ ಕುರಿತಾಗಿ ಸಂಪನ್ಮೂಲ ವ್ಯಕ್ತಿಗಳಿಂದ ವಿಶೇಷ ಉಪನ್ಯಾಸವನ್ನು ಆಯೋಜಿಸಲಾಗುವುದು. ಜಿಲ್ಲೆಯ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಮಹನೀಯರ ಜಯಂತಿಗಳನ್ನು ಆಚರಿಸುವಂತೆ ಸೂಚಿಸಲಾಗುವುದು ಎಂದು ಹೇಳಿದರು.



ಮಹನೀಯರ ಜಯಂತಿಗಳನ್ನು ಆಚರಿಸುವ ಉದ್ದೇಶ ಮುಂದಿನ ಪೀಳಿಗೆಗೆ ಮಹನೀಯರ ಕುರಿತಾಗಿ ಅರಿವು ಮೂಡಿಸುವುದು ಅವರ ಸಂದೇಶವನ್ನು ಸಾರುವುದಾಗಿದೆ. ಸಮುದಾಯಗಳ ಮುಖಂಡರುಗಳು ಸಮನ್ವಯ ಸಾಧಿಸಿ ಜಯಂತಿ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಡೆಸಬೇಕು. ಜಿಲ್ಲಾಡಳಿತಕ್ಕೆ ಅಗೌರವ ತರುವ ಸಂದರ್ಭಗಳನ್ನು ಉಂಟು ಮಾಡಬಾರದು ಎಂದು ಕಿವಿಮಾತು ಹೇಳಿದರು.ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ವಿ ನಂದೀಶ್ ಸೇರಿದಂತೆ ವಿವಿಧ ಸಮುದಾಯಗಳ ಮುಖಂಡರುಗಳು ಉಪಸ್ಥಿತರಿದ್ದರು.

# ಜಿಲ್ಲೆಯ ಸಣ್ಣ– ಅತಿ ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ ನೀಡಿ: ಡಾ. ಕುಮಾರ




**ಮಂಡ್ಯ**"ಜಿಲ್ಲೆಯಲ್ಲಿಕಾರ್ಯನಿರ್ವಹಿಸುತ್ತಿರುವ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ ನೀಡಿ ಜಿಲ್ಲೆಯಲ್ಲಿನ ಯುವಕರಿಗೆ ಉದ್ಯೋಗ ಸೃಷ್ಟಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಕುಮಾರ್ ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ ಹಾಗೂ ಜಿಲ್ಲಾ ಮಟ್ಟದ ಕೈಗಾರಿಕಾ ಸ್ಪಂದನ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ನಾಗಮಂಗಲ ತಾಲೂಕಿನಲ್ಲಿ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲು ಭೂಮಿಯನ್ನು ಗುರುತಿಸಿ ಎಂದು ಹೇಳಿದರು.

ಪಾಂಡವಪುರ ತಾಲ್ಲೂಕಿನ ಮಾಣಿಕ್ಯನಹಳ್ಳಿಯಲ್ಲಿ ಕೈಗಾರಿಕಾ ವಸಾಹತು ಅಭಿವೃದ್ಧಿಪಡಿಸಲು ಕಂದಾಯ ಇಲಾಖೆಯಲ್ಲಿ ಲಭ್ಯವಿರುವ ಭೂ ಜಾಗವನ್ನು ಕೈಗಾರಿಕಾ ಇಲಾಖೆಗೆ ಹಸ್ತಾಂತರಿಸುವಂತೆ ಸಂಬಂಧ ಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಮಳವಳ್ಳಿ ತಾಲೂಕಿನಲ್ಲಿ 563 ಎಕ್ಕರೆ ಜಾಗವನ್ನು ಕೆ.ಡಿ.ಬಿ ವಿಶೇಷ ಭೂಸ್ವಾಧೀನ ಅಧಿಕಾರಿಗಳು ಗುರುತಿಸಿ ಕೇಂದ್ರ ಕಚೇರಿಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಜಿಲ್ಲೆಯಲ್ಲಿ ಕೈಗಾರಿಕಾ ಪ್ರದೇಶಗಳು ಹಾಗೂ ಕೈಗಾರಿಕಾ ಅಸಾಹಾತುಗಳು ಅಭಿವೃದ್ಧಿ ಹೊಂದಬೇಕು ಎಂದು ತಿಳಿಸಿದರು. ಸಭೆಯಲ್ಲಿ ಕೈಗಾರಿಕಾ ಇಲಾಖೆಯ ಜಂಟಿ ನಿರ್ದೇಶಕ ದಿನೇಶ್, ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕ ಅರುಣ್ ಕುಮಾರ್ ಸೇರಿದಂತೆ ಇನ್ನಿತರರು ಇದ್ದರು.



**ಕೆ.ಆರ್.ನಗರ: ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯರಾದ ದೊಡ್ಡಸ್ವಾಮೇಗೌಡ ಅವರನ್ನು ತಾಲೂಕಿನ ಕಾಳಮ್ಮನ ಕೊಪ್ಪಲು ಗ್ರಾಮದ ಯುವ ಮುಖಂಡರುಗಳಾದ ಬಿಳಿಯಪ್ಪಮಹದೇವ, ಕೆ.ಜೆ. ಮಧುಸೂದನ್, ಡಿ.ಹರೀಶ್, ನಾಗರಾಜು ಅಭಿನಂದಿಸಿದರು.**

# ಜಿಲ್ಲೆಯಲ್ಲಿ ಏಕ ವ್ಯಕ್ತಿ ದುರಸ್ತಿ ರದ್ದು

**ಮೈಸೂರು:** ಏಕ ವ್ಯಕ್ತಿ ದುರಸ್ತಿಯಿಂದ ಆಗುತ್ತಿದ್ದ ಸಮಸ್ಯೆಗಳ ಹಿನ್ನೆಲೆ ಜಿಲ್ಲೆಯಲ್ಲಿ ಏಕ ವ್ಯಕ್ತಿ ದುರಸ್ತಿ ರದ್ದುಗೊಳಿಸಿ, ನೂರು ಎಕರೆ ಒಟ್ಟಿಗೆ ದುರಸ್ತಿ ಮಾಡಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಹೇಳಿದರು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶನಿವಾರ ಕೆಪಿಸಿಸಿ ರಾಜ್ಯ ವಕ್ತಾರ ಎಂ.ಲಕ್ಷ್ಮಣ್ ನೇತೃತ್ವದಲ್ಲಿ ಸೇರಿದ್ದ ಪಿರಿಯಾಪಟ್ಟಣ, ಎಚ್.ಡಿ.ಕೋಟೆ, ಹುಣಸೂರು ತಾಲೂಕಿನ ರೈತ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ರೈತರ ಪಹಣಿಯನ್ನು ದುರಸ್ತಿ ಮಾಡಿಕೊಡುವಲ್ಲಿ ಆಗುತ್ತಿದ್ದ ಲೋಪದೋಷ ಸರಿಪಡಿಸಲಾಗಿದೆ ಎಂದು ತಿಳಿಸಿದರು.

ಒಂದು ಸರ್ವೆ ನಂಬರ್ನಲ್ಲಿ ಇರುವ ಜಾಗಕ್ಕೆ ಮೀರಿದಷ್ಟು ಸಾಗುವಳಿ ಪತ್ರ ನೀಡಲಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಸಾಗುವಳಿಯಲ್ಲಿ ನಮೂದಿಸಿರುವಷ್ಟು ಜಾಗಕ್ಕೆ ದುರಸ್ತಿ ಮಾಡಿಕೊಡಲು ಜಾಗದ ಕೊರತೆ ಉಂಟಾಗುತ್ತದೆ.

ಅಲ್ಲದೇ ಒಮ್ಮೆ ಒಬ್ಬರಿಗೆ ದುರಸ್ತು ಮಾಡಿಕೊಟ್ಟರೆ ಕಡೆಯಲ್ಲಿ ಉಳಿಯುವ ರೈತರು ನೀಡುವ ಸಾಗುವಳಿಗೆ ದುರಸ್ತು ಮಾಡಿಕೊಡಲು ಜಾಗವೇ ಇಲ್ಲದಂತಾಗುತ್ತದೆ. ಹಾಗಾಗಿ ಸದ್ಯ ಏಕ ವ್ಯಕ್ತಿ ದುರಸ್ತಿ ವಿಧಾನ ಕೈಬಿಡಲಾಗಿದೆ. ಬದಲಾಗಿ ಒಮ್ಮೆಗೆ ಒಂದು ಸರ್ವೆ ನಂಬರ್ ನ ನೂರು ಎಕರೆಯಲ್ಲಿರುವ ಎಲ್ಲಾ ರೈತರಿಗೆ ದುರಸ್ತಿ ಮಾಡುವ ಪ್ರಕ್ರಿಯೆ ಜಾರಿಗೊಳಿಸಲಾಗಿದೆ. ಇದರಿಂದ ರೈತರಿಗೆ ಆಗುತ್ತಿದ್ದ ಅನ್ಯಾಯ ತಪ್ಪಿದಂತಾಗಿದೆ ಎಂದರು.

ರೈತರ ಬಳಿ ಸಾಗುವಳಿ ಸೇರಿದಂತೆ ಒಟ್ಟು ಮೂರು ದಾಖಲೆಗಳಿದ್ದರೆ ಆ ಜಮೀನು ಕೆರೆ ಅಥವಾ ಡೀಮ್ಡ್ ಫಾರೆಸ್ಟ್ ವ್ಯಾಪ್ತಿಗೆ ಬಾರದಿದ್ದರೆ ಒಂದು ವಾರದಲ್ಲಿ ದುರಸ್ತಿ ಮಾಡಿಕೊಟ್ಟು ಖಾತೆ ಮಾಡಿಸಿಕೊಡಲಾಗುವುದು. ಭೂ ಸುಧಾರಣೆಯಂತೆ ಬಹಳ ಹಿಂದೆ ಗ್ರ್ಯಾಂಟ್ ಆಗಿರುವ ಜಮೀನಿಗೆ ಸಂಬಂಧಿಸಿದ ವ್ಯಾಜ್ಯವನ್ನು ಗೈರು ವಿಲೆ ಕಡತ ಸಮಿತಿಯಲ್ಲಿ ಬಗೆಹರಿಸಲು ಕ್ರಮವಹಿಸಲಾಗಿದೆ. ಅಂತೆಯೆ ಈ ಸಮಿತಿಗೆ ಈವರೆಗೆ ಎಂಟು ಸಾವಿರ ಅರ್ಜಿಗಳು ಬಂದಿವೆ. ಪ್ರತಿವಾರ ಸಭೆ ನಡೆಸಿ 20ರಿಂದ 30 ಅರ್ಜಿಗಳನ್ನು ವಿಲೆ ಮಾಡಲಾಗುತ್ತಿದೆ ಎಂದು ಹೇಳಿದರು.

**ಬಂಡಿ, ಕಾಲುದಾರಿ ಬಿಡಿಸಿ ಕೊಡುತ್ತೇವೆ:** ಗ್ರಾಮ ನಕ್ಷೆಯಲ್ಲಿ ಜಮೀನುಗಳಿಗೆ ಹೋಗಲು ಕಾಲುದಾರಿ, ಬಂಡಿ ಹಾದಿ ಕಾಣಿಸಿದ್ದು ಅದನ್ನು ವಶಪಡಿಸಿಕೊಂಡಿದ್ದರೆ, ಕೂಡಲೇ ಅವುಗಳನ್ನು ಬಿಡಿಸಲಾಗುವುದು. ಒಂದು ವೇಳೆ ಹತ್ತಾರು ವರ್ಷಗಳಿಂದ ನಡೆದಾಡಲು ಬಳಕೆ ಮಾಡುತ್ತಿರುವ ಕಾಲುದಾರಿ, ಖಾಸಗಿ ವ್ಯಕ್ತಿಯ ಜಮೀನಿನಲ್ಲಿದ್ದರೆ ಅದನ್ನು ಸಿವಿಲ್ ಕೋರ್ಟ್‌ನಲ್ಲಿ ಬಗೆಹರಿಸಬಹುದು. ಇಲ್ಲವೇ ವಿಶೇಷ ಗ್ರಾಮ ಸಭೆ ಕರೆದು ಎಲ್ಲರ ಒಪ್ಪಿಗೆ ಮೇರೆಗೆ ಸಮಸ್ಯೆ ಬಗೆಹರಿಸಲಾಗುವುದು ಎಂದರು.



ಖರೀದಿ ಕೇಂದ್ರ ತೆರೆಯಲಾಗಿದೆ: 13 ಕಡೆ ಭತ್ತ, ರಾಗಿ ಖರೀದಿ ಕೇಂದ್ರ ತೆರೆಯಲಾಗಿದೆ. ಈಗಾಗಲೇ ತಮ್ಮ ಆರ್ಟಿಸಿ ನೀಡಿ, ತಮ್ಮ ಫ್ರೂಟ್ ಐಡಿ ಮುಖಾಂತರ ನೋಂದಾಯಿಸಿಕೊಂಡಿರುವ ರೈತರು ತಾವು ಬೆಳೆದ ಬೆಳೆಯನ್ನು ಬೆಂಬಲ ಬೆಲೆಗೆ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದೆ. ಅಲ್ಲದೇ ಕಾಡಂಚಿನ ಪ್ರಾಣಿಗಳ ದಾಳಿ ತಡೆಗಟ್ಟಲು ಈಗಾಗಲೇ ಸಾಕಷ್ಟು ಕ್ರಮಗಳನ್ನು ಅರಣ್ಯ ಇಲಾಖೆ ಕೈಗೊಂಡಿದೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿದ್ದ ರೈತರು ತಾಲೂಕು ಕೇಂದ್ರದಲ್ಲಿ ತಹಸೀಲ್ದಾರ್ ಸೂಕ್ತ ರೀತಿ ಸ್ಪಂದಿಸುತ್ತಿಲ್ಲ. ಸಮಸ್ಯೆ ಹೇಳಿಕೊಂಡು ಬರುವ ರೈತರನ್ನು ಕೂರಿಸಿ ಮಾತನಾಡುವ ಸೌಜನ್ಯವನ್ನೂ ತೋರದೇ ಯಾವ ಕೆಲಸಗಳನ್ನು ಮಾಡಿಕೊಡದೇ ತಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳುತ್ತಾರೆ. ರೈತರ ಸಮಸ್ಯೆಗಳಿಗೆ ಸ್ಪಂದಿಸದೇ ಉಡಾಫೆ ಉತ್ತರಗಳನ್ನು ನೀಡುತ್ತಿದ್ದಾರೆ ಎಂದು ದೂರಿದರು.

ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿಗಳು ತಹಸೀಲ್ದಾರ್ ಅವರೊಂದಿಗೆ ಸಭೆ ಮಾಡಿ ತಪ್ಪು ಮಾಡಿರುವವರ ವಿರುದ್ದ ಕ್ರಮ ವಹಿಸುತ್ತೇವೆ ಎಂದು ಹೇಳಿದರು

**ರೈತರ ಬೇಡಿಕೆಗಳು:** ಪೊಡಿ, ದುರಸ್ತಿ ಮಾಡಿಕೊಡಬೇಕು. ಸಾಗುವಳಿ ಚೀಟಿಯನ್ನು 53 ರ ಪ್ರಕಾರ ನೀಡದಿರುವುದು. ಕಾಡಂಚಿನ ಜಮೀನುಗಳಲ್ಲಿ ಕಾಡು ಪ್ರಾಣಿಗಳ ಹಾವಳಿ ತಪ್ಪಿಸಿ, ಬೆಳೆ ಪರಿಹಾರ ಕೊಡಿಸಿ. ಮಾನವ–ಪ್ರಾಣಿ ಸಂಘರ್ಷ ತಡೆಗೆ ಕ್ರಮವಹಿಸಿ. ತಾಲೂಕು ಕಚೇರಿಯಲ್ಲಿ ಜಮೀನಿಗೆ ಸಂಬಂಧಪಟ್ಟಂತಹ ಸಮಸ್ಯೆ ಇತ್ಯರ್ಥಕ್ಕೆ ವಿಳಂಬ. ಪಿಡಿಒಗಳು ಸರಕಾರದ ಸವಲತ್ತುಗಳನ್ನು ತಲುಪಿಸುತ್ತಿಲ್ಲ.

ರೈತರ ಸಹಾಯವಾಣಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ದಲ್ಲಾಳಿಗಳ ಹಾವಳಿ ತಪ್ಪಿಸಿ. ಸೂಕ್ತ ಸಾಲ ದೊರೆಯದೆ ರೈತರು ಮೈಕ್ರೊ ಫೈನಾನ್ಸ್ ಹಾವಳಿಗೆ ಸಿಲುಕಿರುವುದು. ರೈತ ಆತ್ಮಹತ್ಯ ತಪ್ಪಿಸಿ. ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗಪಡಿಸಿ. ಬೆಳೆ ವಿಮೆಯಿಂದ ರೈತರಿಗಿಂತ ಕಂಪೆನಿಗಳಿಗೆ ಅನುಕೂಲವಾಗುತ್ತಿದ್ದು, ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಯೋಜನೆ ರೂಪಿಸಿ ಎಂದು ಒತ್ತಾಯಿಸಿದರು.

## ಜ.9ರಂದು ಮೀಸಲಾತಿ ಕುರಿತು ರಾಜ್ಯಮಟ್ಟದ ವಿಚಾರ ಸಂಕಿರಣ




**ಮಂಡ್ಯ:** ಕರ್ನಾಟಕ ದಲಿತ ಸಂಘರ್ಷ ಸಮಿತಿ(ಸ್ವಾಭಿಮಾನಿ ಪ್ರೊ.ಬಿ.ಕೃಷ್ಣಪ್ಪ ಬಣ) ವತಿಯಿಂದ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ 69ನೇ ಪರಿನಿಬ್ಬಾಣದಿನ, ಭೀಮ್ ಕೋರೆಂಗಾವ್ ವಿಜಯೋತ್ಸವ ಅಸ್ಪೃಶ್ಯರ ವಿಜಯದಿನ ಹಾಗೂ ಮೀಸಲಾತಿಯಲ್ಲಿ ಕೆನೆಪದರ ಮತ್ತು ಖಾಸಗಿ ಕೇಂದ್ರದಲ್ಲಿ ಮೀಸಲಾತಿ ಕುರಿತು ರಾಜ್ಯಮಟ್ಟದ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಜ.9ರಂದು ಬೆಳಿಗ್ಗೆ 11.30ಕ್ಕೆ ಹಾಸನದ ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದೆ ಎಂದು ಸಮಿತಿಯ ಜಿಲ್ಲಾಧ್ಯಕ್ಷ ಅಂದಾನಿ ಸೋಮನಹಳ್ಳಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಸ್ಪೃಶ್ಯರು ಮೀಸಲಾತಿ ಮೂಲಕ ಸಮಾಜದ ಮುಖ್ಯವಾಹಿನಿಗೆ ಬರುವುದು ಸಹಿಸದ ಮನುವಾದಿಗಳಿಂದ ಎಸ್ಸಿ/ಎಸ್ಟಿಗೆ ಮೀಸಲಾತಿ ಲಭಿಸದಂತೆ ಕೆನಪದರ ಅಳವಡಿಸಲು ಸರಕಾರಕ್ಕೆ ಆಗ್ರಹಿಸಿ ಪಿತೂರಿ ನಡೆಸುತ್ತಿದ್ದಾರೆ ಎಂದರು.

ಸುಪ್ರೀಂ ನ್ಯಾಯಮೂರ್ತಿ ಬಿ.ಆರ್.ಗವಾಯಿಗಳು ನಿವೃತ್ತಿಯ ಅಂಚಿನಲ್ಲಿದ್ದು ತಮ್ಮ ಸಂಬಂಧವಿಲ್ಲದ ಕೇಸಿನ ವಿಚಾರಣೆಯಲ್ಲಿ ಕೆನೆಪದರ ಅಳವಡಿಸಲು ತೀರ್ಪು ನೀಡಿ ದೇಶದಲ್ಲಿ ಮತ್ತೆ ಚರ್ಚೆ ಹುಟ್ಟು ಹಾಕಿದ್ದಾರೆ. ಇದರಿಂದ ಕೆನೆಪದರ ಅಳವಡಿಸಿದರೆ ಡಿ.ಗ್ರೂಪ್ ನೌಕರರ ಮಕ್ಕಳು ಅವಕಾಶ ವಂಚಿತರಾಗುತ್ತಾರೆ. ಆದ್ದರಿಂದ ಈ ತೀರ್ಪನ್ನು ಸಮಿತಿ ಖಂಡಿಸುತ್ತದೆ ಎಂದು ಹೇಳಿದರು.

ದೇಶದ ಆಡಳಿತ ನಡೆಸಿದ ಕಾಂಗ್ರೆಸ್ ಹಾಗೂ ಜನತಾ ಪರಿವಾದ ಬಿಜೆಪಿ ಸರಕಾರಗಳಲ್ಲಿ ಮೀಸಲಾತಿ ವಿರೋಧಿಗಳು ಅಧಿಕಾರ ನಡೆಸಿ ಶೇಕಡಾವಾರು ಉದ್ಯೋಗಗಳನ್ನು ಭರ್ತಿ ಮಾಡದ ಕಾರಣ ಎಸ್ಸಿ/ಎಸ್ಟಿ, ಓಬಿಸಿ ಯುವಕರು ಉದ್ಯೋಗ ವಂಚಿತರಾಗಿದ್ದಾರೆ. ಆದ್ದರಿಂದ ಅನ್ಯ ಸಮುದಾಯಗಳಿಗೆ ಅನ್ವಯಿಸದ ಕೆನೆಪದರವನ್ನು ಎಸ್ಸಿ/ಎಸ್ಟಿ ಸಮುದಾಯಕ್ಕೆ ಅಳವಡಿಸುವ ನಿರ್ಧಾರ ಕೈಬಿಟ್ಟು, ಖಾಸಗಿ ಸಂಸ್ಥೆಗಳಲ್ಲು ಉದ್ಯೋಗ ಮೀಸಲಾತಿ ನೀಡುವಂತೆ ಆಗ್ರಹಿಸಿದರು. ಗೋಷ್ಠಿಯಲ್ಲಿ ಸಮಿತಿಯ ಮೈಸೂರು ವಿಭಾಗೀಯ ಅಧ್ಯಕ್ಷ ಟಿ.ಡಿ.ಬಸವರಾಜು, ನಿರಂಜನ್ ಬೌದ್ಧ, ಟಿ.ಕೆ.ಅಂಕಯ್ಯ, ಉಮೇಶ್, ಮುರುಗ ಇದ್ದರು.

## ವಿದ್ಯುತ್ ವ್ಯತ್ಯಯ

**ಮೈಸೂರು:** ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವತಿಯಿಂದ ವಿ.ವಿ.ಮೊಹಲ್ಲಾ ಉಪವಿಭಾಗದ ಒಂಟಿಕೊಪ್ಪಲು ಹಾಗೂ ಜಯಲಕ್ಷ್ಮಿಪುರಂ ಶಾಖಾ ವ್ಯಾಪ್ತಿಯ 11 ಕೆ.ವಿ ಯಾದವಗಿರಿ ವಿದ್ಯುತ್ ಮಾರ್ಗ ಮತ್ತು 11 ಕೆ.ವಿಜಯಲಕ್ಷ್ಮಿಪುರಂ ವಿದ್ಯುತ್ ಮಾರ್ಗದ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಸುವ ಕೆಲಸವನ್ನು ಹಮ್ಮಿಕೊಂಡಿರುವುದರಿಂದ ಜನವರಿ 08 ರಂದು ಬೆಳಗ್ಗೆ 10:00 ಗಂಟೆಯಿಂದ ಸಂಜೆ 5:30 ಗಂಟೆಯವರೆಗೆ ಈ ಕೆಳಕಂಡ ಪ್ರದೇಶಗಳಲ್ಲಿ ಆಗಿಂದ್ದಾಗೆ/ ಸಾಂದರ್ಭಿಕವಾಗಿ ವಿದ್ಯುತ್ ಸರಬರಾಜಿನ ವ್ಯತ್ಯಯವಾಗಲಿದೆ.

ಬೆತ್ತಲೆ ಪ್ರಪಂಚ

## "ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಿರಂತರ ಧಾಳಿ"

ಭಾರತದಲ್ಲಿ 'ಬಹು ಸಂಖ್ಯಾತ ಹಿಂದೂಗಳ ಮೇಲೆ, ಅಲ್ಪಸಂಖ್ಯಾತರ ಕಳಶ' – ಆದರೆ ಬಾಂಗ್ಲಾದೇಶದಲ್ಲಿ 'ಬಹುಸಂಖ್ಯಾತ ಶಾಂತಿಪ್ರಿಯ ಜನಾಂಗದಿಂದ , ಅಲ್ಪಸಂಖ್ಯಾತ ಹಿಂದೂಗಳ ಮಾರಣ ಹೋಮ'. ಜಾತ್ಯತೀತತೆ ಅನ್ನೋದು ಬರಿ ಭಾರತಕ್ಕೆ ಸೀಮಿತ ಅನ್ಸುತ್ತೆ. 1950 ರಲ್ಲಿ ಬಾಂಗ್ಲಾದೇಶದ 22% ಇದ್ದಿದ್ದ ಹಿಂದೂಗಳ ಜನಸಂಖ್ಯೆ 2025 ರಲ್ಲಿ 7%. ಹಿಂದೂಗಳ ಪಾಲಿಗೆ ಇದೊಂದು ಶೋಚನೀಯವಾದ ಸಂಗತಿ ಅಂತ ಹೇಳಿದರೆ ತಪ್ಪಾಗಲಾರದು ಏಕೆಂದರೆ ಭಾರತದಲ್ಲಿ 1950 ರಲ್ಲಿ ಮುಸ್ಲಿಂ ಜನಸಂಖ್ಯೆ ನಮ್ಮ ದೇಶದ 9% ಮಾತ್ರ ಇತ್ತು ಆದ್ರೆ 2025 ರಲ್ಲಿ ಬಲ್ಲ ಮಾಹಿತಿಗಳ ಪ್ರಕಾರ 15% ಗಿಂತಲೂ ಹೆಚ್ಚು.




ಈಗ ನೀವೇ ವಿಚಾರ ಮಾಡಿ ನೋಡಿ – ಕಳೆದ 60 ವರ್ಷದಲ್ಲಿ ಬಾಂಗ್ಲಾದೇಶದ ಸರಿಸುಮಾರು 15% ಹಿಂದೂಗಳು ಎಲ್ಲಿ ಮಾಯವಾದರೂ ? ಬಾಂಗ್ಲಾದೇಶದ ಮಾನವ ಹಕ್ಕುಗಳ ಸಂಸ್ಥೆ "ಐನ್ ಓ ಸಲಿಶ್ ಕೇಂದ್ರ" (ಂಖಏ) ಪ್ರಕಾರ ಹಿಂದೂ ಮತ್ತು ಹಿಂದೂ ದೇವಾಲಯಗಳ ಮೇಲೆ 2013 ರಿಂದ 2021 ರ ತನಕ 3679 ದಾಳಿಗಳಾಗಿವೆ. ಇದರಲ್ಲಿ ಎಷ್ಟೋ ಬಡ ಹಿಂದೂಗಳು ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ. 2024 ರಲ್ಲಿ ಯಾವಾಗ ಬಾಂಗ್ಲಾದೇಶದ ಹಿಂದಿನ ಪ್ರಧಾನ ಮಂತ್ರಿ ಶೈಖ್ ಹಸೀನಾ ಪದಚ್ಯುತಿ ಆದರೋ ಆ ಒಂದೇ ವರ್ಷದಲ್ಲಿ 2673 ದಾಳಿಗಳು ಹಿಂದೂಗಳ ಮೇಲೆ ಆಗಿವೆ ಅದರಲ್ಲಿ 80 ಜನಕ್ಕಿಂತ ಅಲ್ಪಸಂಖ್ಯಾತ ಹಿಂದುಗಳನ್ನು ಅಮಾನುಷವಾಗಿ ಕೊಲ್ಲಲಾಗಿದೆ. ಅದರ ಜೊತೆ 150 ಕ್ಕಿಂತ ಹೆಚ್ಚು ದೇವಾಲಯಗಳನ್ನು ಕೆಡವಲಾಗಿದೆ.ಎಲ್ಲೊ ಪ್ಯಾಲೇಸ್ತೀನಲ್ಲಿ ತಮ್ಮ ಬಾಂಧವರಿಗೆ ಅನ್ಯಾಯ ಆಗಿದೆ ಅಂತ ಬೊಬ್ಬೆ ಹೊಡೆಯುವ ಇಲ್ಲಿಯ ಜಾತ್ಯತೀತ ಹಿಂದೂಗಳು , ಎಡಚರರು , ಬುದ್ಧಿ ಜೀವಿಗಳು , ಮುಸ್ಲಿಮರು, ಕಮ್ಯುನಿಸ್ಟರು – ಅದೇ ಬಾಂಗ್ಲಾದೇಶದಲ್ಲಿ 18–ಡಿಸೆಂಬರ್–2025 ರಂದು ರಸ್ತೆ ಮಧ್ಯದಲ್ಲೆ "ದೀಪು ಚಂದ್ರ ದಾಸ್" ಎಂಬ ಗಾರ್ಮೆಂಟ್ ಫ್ಯಾಕ್ಟರಿಯ ಬಡ ಹಿಂದೂ ಯುವಕನನ್ನು ಯಾವುದೇ ಕಾರಣವಿಲ್ಲದೆ ಮರಕ್ಕೆ ಕಟ್ಟಿ ಹಾಕಿ ಹೊಡೆದು ಬಡೆದು ಜೀವಂತವಾಗಿ ಸುಟ್ಟು ಹಾಕಿದರೂ, ಅದನ್ನು ಕೇಳುವರು ಯಾರು ಇಲ್ಲ ಏಕೆಂದರೆ ನಮ್ಮ ದೇಶದ ಹಿಂದುಗಳು ತಮ್ಮ ಮನೆಗೆ ಬೆಂಕಿ ಹತ್ತುವ ತನಕ ಅವರಿಗೆ ಇದು ಅರಿವಾಗದು ಎಂಬುದನ್ನು ಹೇಳನು ನನಗೆ ಕಿಂಚಿತ್ತೂ ಭಯವಿಲ್ಲಾ. ಅದಕ್ಕೆ ತಾನೇ ಬ್ರಿಟಿಷರು , ಮುಘಲರು , ಡಚ್ಚರು , ಪೋರ್ಚುಗೀಸರು ನಮ್ಮನ್ನು ಒಡೆದು ಸಾವಿರಾರು ವರ್ಷ ಆಳಿದರು ಆದರೂ ಕೂಡ ನಮ್ಮ ಹಿಂದೂ ಜನಾಂಗಕ್ಕೆ ಇನ್ನು ಬುದ್ಧಿ ಬರ್ತಾ ಇಲ್ಲ.



ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ದಾಳಿಗಳು ಹೀಗೆ ಮುಂದುವರೆದರೆ ಇನ್ನು ಐದರಿಂದ ಹತ್ತು ವರ್ಷದಲ್ಲಿ ನಮಗೆ ಒಬ್ಬನು ಹಿಂದೂ ಕೂಡ ಆ ದೇಶದಲ್ಲಿ ಕಾಣಸಿಗಲ್ಲ. ಹಿಂದೂಗಳ ಪರಿಸ್ಥಿತಿ ಪಾಕಿಸ್ತಾನ ಮತ್ತೆ ಅಫಘಾನಿಸ್ತಾನ ಥರ ಆಗೋದರಲ್ಲಿ ಸಂಶಯವೇ ಇಲ್ಲ. ಏಕೆಂದರೆ ಬಾಂಗ್ಲಾದಲ್ಲಿರೋ ಬಹುಸಂಖ್ಯಾತ ಜನಾಂಗಕ್ಕೆ ತಮ್ಮ ಧರ್ಮ ಬಿಟ್ಟರೆ ಮತ್ತೆ ಯಾವ ಧರ್ಮದವರ ಮೇಲೆ ಕಿಂಚಿತ್ತೂ ಮಾನವೀಯತೆ , ಕನಿಕರ ಇಲ್ಲ. ಅಲ್ಲಿನ ಈಗಿನ ತಾತ್ಕಾಲಿಕವಾಗಿ ಇರುವ ಸರಕಾರವು ಕೂಡ ಹಿಂದೂಗಳ ಸಮಸ್ಯೆಗಳಿಗೆ ಸ್ಪಂದನೆ ಮಾಡ್ತಾ ಇಲ್ಲ ಅನ್ನೋದು ಕಾಕತಾಳೀಯ ಅಂತ ಹೇಳಲಾಗದು. ನಾನು ಪದೇ ಪದೇ ನನ್ನ ಸ್ನೇಹಿತರಿಗೆ ಹೇಳ್ತಾ ಇರ್ತೀನಿ , ಸಾವಿರ ಜನ ಹಿಂದೂಗಳ ನಡುವೆ ಒಬ್ಬ ಮುಸ್ಲಿಂ ನಿಶ್ಚಿಂತೆಯಾಗಿ ಬದುಕಬಲ್ಲ ಆದರೆ ಅದೇ ನೂರು ಮುಸ್ಲಿಮರ ಮಧ್ಯೆ ಒಬ್ಬ ಹಿಂದೂ ಬದುಕೋಕೆ ಸಾಧ್ಯನೇ ಇಲ್ಲ. ಅದೇ ನಮ್ಮ ಭಾರತದಲ್ಲಿರೋ ನಕಲಿ ಜಾತ್ಯತೀತತೆ. ಎಲ್ಲಿ ನೋಡಿದರು ಕಲ್ಲು ತೂರಾಟ , ಬೇರೆ ಧರ್ಮದವರನ್ನು ಕಾಫಿರರ ನೋಡೋದು , ಜನಸಂಖ್ಯಾ ಸ್ಫೋಟ, ತಾವು ನೆಲೆಸಿರುವ ದೇಶಕ್ಕಿಂತ ಧರ್ಮದ ಮೇಲೆ ಇರೋ ಅತಿಯಾದ ನಂಬಿಕೆ , ದೇಶ ವಿರೋಧಿ ಚಟುವಟಿಕೆಗಳು ಇವರು ತಾವು ನೆಲೆಸಿರುವ ದೇಶಲ್ಲೆ ಕೊಡ್ತಾ ಇರೋ ಕೊಡುಗೆಗಳು.



| ಸಂತೋಷ ಕೋರ್ಬು
ಬೆಲ್ಫಾಸ್ಟ್ – ಯುನೈಟೆಡ್ ಕಿಂಗ್ಡಮ್

ಬರೋ ಫೆಬ್ರುವರಿ ತಿಂಗಳಲ್ಲಿ ಬಾಂಗ್ಲಾದೇಶದಲ್ಲಿ ಮತ್ತೆ ಚುನಾವಣೆ ನಡೆಯೋದಿದೆ. ಅಲ್ಪಸಂಖ್ಯಾತ ಹಿಂದೂಗಳೆಲ್ಲ ಜೊತೆಗೂಡಿ "ಬಾಂಗ್ಲಾದೇಶ ಮೈನೋರಿಟಿ ಜನತಾ ಪಾರ್ಟಿ" (ಃಒಎಕ) ಅಂತ ಹೊಸ ರಾಜಕೀಯ ಪಕ್ಷವನ್ನ ಕಟ್ಟಿ ಕೊಂಡಿದ್ದಾರೆ. ಸುಮಾರು ತೊಂಬತ್ತೊಂದು ಸ್ಥಾನಗಳಲ್ಲಿ ಸ್ಪರ್ಧೆ ನಡೆಸುವರಿದ್ದಾರೆ. 40–45 ಸ್ಥಾನಗಳಲ್ಲಿ ಗೆಲ್ಲುವ ಆತ್ಮವಿಶ್ವಾಸವನ್ನ ಹೊಂದಿದ್ದಾರೆ . ಅವರಿಗೆ ಶುಭವಾಗಲಿ , ಹಿಂದೂಗಳ ಮೇಲೆ ನಿರಂತರ ಆಗುತ್ತಾ ಇರುವ ಅನ್ಯಾಯ ಕಡಿಮೆ ಆಗಬೇಕು , ಅಲ್ಲಿನ ಬಡ ಹಿಂದೂಗಳಿಗೂ ಕೂಡ ಬದುಕುವ ಸ್ವಾತಂತ್ರ್ಯ ಸಿಗಬೇಕು ಅನ್ನೋದು ಭಾರತದಲ್ಲಿರೋ ನಮ್ಮ ಬಹುಸಂಖ್ಯಾತ ಹಿಂದೂಗಳ ಆಶಯ.





"ಅಯಂ ನಿಜಃ ಪರೋ ವೇತಿ ಗಣನಾ ಲಘುಚೇತಸಾಮ್?
ಉದಾರಚರಿತಾನಾಂ ತು ವಸುಧೈವ ಕುಟುಂಬಕಮ್॥" –
ನಮ್ಮ ಉಪನಿಷದದಲ್ಲಿ ಹೇಳಿರೋ ಹಾಗೆ ,

"ಇವನು ನನ್ನವನು, ಇವನು ಪರನು" ಎಂದು ಅಲ್ಪ ಬುದ್ಧಿಯವರು ಮಾತ್ರ ಯೋಚಿಸುತ್ತಾರೆ, ಆದರೆ ಉದಾರ ಮನಸ್ಸಿನವರಿಗೆ ಇಡೀ ಭೂಮಂಡಲವೇ ಒಂದು ಕುಟುಂಬ. ಇದು 'ವಸುದೈವ ಕುಟುಂಬಕಂ' ತತ್ವವನ್ನು ವಿವರಿಸುತ್ತದೆ, ಅಂದರೆ ವಿಶಾಲ ಹೃದಯದವರು ಎಲ್ಲರನ್ನೂ ತಮ್ಮವರೇ ಎಂದು ಪರಿಗಣಿಸುತ್ತಾರೆ". ಇಡೀ ವಿಶ್ವಕ್ಕೆ "ವಸುದೈವ ಕುಟುಂಬಕಂ" ಬಗ್ಗೆ ಪಾಠ ಹೇಳಿ, ಅದರ ಹಾಗೆ ಶತ ಶತಮಾನಗಳಿಂದ ನಡೆದುಕೊಂಡು ಬಂದಿರೋ ನಮ್ಮ ಹಿಂದುಗಳಿಗೆ ಬಾಂಗ್ಲಾದೇಶಲ್ಲಿ ಬಂದಿರೋ ಈ ಪರಿಸ್ಥಿತಿ ತುಂಬಾ ಶೋಚನೀಯವಾದದ್ದು . ಇದಕ್ಕೆ ಪರಿಹಾರ ಅಲ್ಲಿನ ಹಿಂದೂಗಳು ಆ ಕಲಿಯುಗ ರಾಕ್ಷಸರ ವಿರುದ್ಧ ಹೋರಾಡಬೇಕು – ಅದಕ್ಕೆ ಬೇಕಾದ ಶಕ್ತಿಯನ್ನು ಪರಮಾತ್ಮ ಅವರಿಗೆ ಕರುಣಿಸಲಿ ಅನ್ನೋದೇ ನಮ್ಮ ಆಶಯ. ಒಗ್ಗಟ್ಟಿನಲ್ಲಿ ಬಲವಿದೆ ಎನ್ನೋ ನಾಣ್ನುಡಿ ಹಾಗೆ ನಾವು ಭಾರತದ ಹಿಂದೂಗಳು ಕೂಡ ಜಾತಿ ಆಧಾರದ ಮೇಲೆ ವಿಭಜನೆ ಆಗದೆ, ನಮ್ಮ ಸಂಸ್ಕೃತಿ, ಪರಂಪರೆ ಮತ್ತೆ ನಾಗರಿಕತೆಯನ್ನು ನಡೆಸುಕೊಂಡು ಹೋಗಲೇ ಬೇಕಾದ ಅನಿವಾರ್ಯತೆ ಇದೆ ಏಕೆಂದರೆ , ಮುಸ್ಲಿಂ ಮತ್ತೆ ಕ್ರಿಶ್ಚಿಯನ್ ಧರ್ಮದವರಿಗೆ ಜೀವಿಸಲು ನೂರಕ್ಕಿಂತ ಹೆಚ್ಚು ದೇಶಗಳಿವೆ ಆದರೆ ಹಿಂದುಗಳಿಗೆ ಇರೋದು ಎರಡು ಮೂರೋ ದೇಶ. ನಿಮ್ಮ ಮಕ್ಕಳಿಗೆ , ಯುವ ಪೀಳಿಗಿಗೆ ಈ ನಮ್ಮ ಇತಿಹಾಸ , ಪರಂಪರೆ , ಸಂಸ್ಕೃತಿ ಬಗ್ಗೆ ತಿಳಿ ಹೇಳಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯ.

ನಮ್ಮ ಕೈಯ್ಯಲ್ಲಿ ಎಷ್ಟು ಆಗುತ್ತೋ ಅಷ್ಟು ಹಿಂದುಗಳ ಮೇಲೆ ಆಗುತ್ತಿರುವ ಅನ್ಯಾಯ, ದೌರ್ಜನ್ಯದ ಜನ ಜಾಗೃತಿ ಮೂಡಿಸಲು ಪ್ರಯತ್ನ ಮಾಡಿ. ನಿಮ್ಮ ಗೆಳೆಯರ ಜೊತೆ ಇಂತಹ ವಿಚಾರಗಳನ್ನು ಚರ್ಚೆ ಮಾಡಿ, ಮುಂದಿನ ಪೀಳಿಗೆಯ ಹಿಂದುಗಳ ಭವಿಷ್ಯದ ಬಗ್ಗೆ ನಾವೆಲ್ಲರೂ ಜಾಗೃತರಾಗಿರುವುದು ಅತ್ಯಾವಶ್ಯಕ ಇಲ್ಲದಿದ್ದರೆ ನಮ್ಮ ಸಂಸ್ಕೃತಿ, ಪರಂಪರೆಯನ್ನು ಮುನ್ನಡೆಸುವುದು ತುಂಬಾ ಕಷ್ಟಕರ. ನೀವು ಬದುಕಿ , ನಮ್ಮನ್ನು ಬದುಕಲು ಬಿಡಿ ಅಂತ ಸಾರುವ ಹಿಂದೂ ಧರ್ಮ ಈ ಸೃಷ್ಟಿ ಇರುವವರೆಗು ಮಾನವರ ಏಳಿಗೆಗೆ ಅಸ್ತಿತ್ವದಲ್ಲಿ ಇರಬೇಕಾಗಿರೋದು ಅತ್ಯಾವಶ್ಯಕ

## ಹೆಣ್ಣಿಗೆ ಸೀರೆ ಏಕೆಅಂದ..?





ಹೆಣ್ಣಿಗೆ ನೂರಾರು ನಮೂನೆಯ ವೈವಿಧ್ಯಮಯ ಬಟ್ಟೆಗಳಿದ್ದರು ಪ್ರಸ್ತುತ ಸೀರೆಯೆ ಉಡುಪುಗಳ ಅನಭಿಷಕ್ತ ದೊರೆಯಾಗಿ ಉಳಿದುಕೊಂಡಿದೆ. ಎಂದಿಗೂ ಔಟ್ ಆಫ್ ಪ್ಯಾಷನ್ ಆಗದೆ ಸಾವಿರಾರು ವರುಷಗಳ ಇತಿಹಾಸ ಹೊಂದಿರುವ ಸೀರೆ ಇಂದಿಗು? ಪಟ್ಟದರಸಿಯಾಗಿ ಮೆರೆಯುತ್ತಿದೆ. ಸೀರೆಗಳ ಮೇಲಿನ ಚಿತ್ರಗಳು ಎಲೆ, ಹೂವು, ಬಳ್ಳಿ ಹೀಗೆ ಪ್ರಕೃತಿ ವಿರಚಿತಗಳಿಂದ ತುಂಬಿರುತ್ತದೆ. ಮುತ್ತು, ರತ್ನ, ಪಚ್ಚೆ, ಹವಳ ಇವುಗಳನ್ನು ಪೋಣಿಸಿದಂತೆ ಶಬ್ದಗಳನೇನಾದರು ಪೋಣಿಸ ಹೊರಟರೆ ನಮಗೆ ಮೊದಲಾಗಿ ದಕ್ಕುವ ಶಬ್ದಗಳೆ ಹೆಣ್ಣು, ಸೀರೆ, ಹೂವು, ಬಳ್ಳಿ ಹೀಗೆ..!ಸೀರೆ ಮತ್ತು ನೀರೆಗೆ ಅವಿನಾಭಾವ ಸಂಬಂಧವಿದೆ. ನೀರೆಗೆ ಸೀರೆಯೇ ಸೊಬಗು ನಮ್ಮ ಭಾರತ ದೇಶದ ಸಂಸ್ಕೃತಿ ಕೂಡ ಹೌದು. ಸೀರೆಯಿಂದ ನಾರಿಯ ಸೌಂದರ್ಯ ಇಮ್ಮಡಿಗೊಳ್ಳುವುದರಲ್ಲಿ ಎರಡು ಮಾತಿಲ್ಲ. ಪಾರಂಪರಿಕ ಉಡುಪು ಕೂಡ ಹೌದು, ಸೀರೆಯಲ್ಲಿ ನೀರೆಯ ಅಂದವೇ ಚಂದ, ಸೀರೆ ನಮ್ಮ ದೇಶದ ಸಂಸ್ಕೃತಿಯ ಜೀವಾಳ. ನೀರೆಗೆ ಸೀರೆಯ ಮೇಲೆ ಮೋಹ ಹೆಚ್ಚು ಅದರಿಂದ ಅವಳ ಮೆರುಗೂ ಕೂಡ ಹೆಚ್ಚಾಗುವುದು. ನವಿಲಿನ ನಾಟ್ಯ ಚಂದ, ಕೋಗಿಲೆಯ ಗಾನ ಚಂದ, ನೀರೆಗೆ ಸೀರೆ ಬಲು ಅಂದ. ಹೆಣ್ಣು ತೆಳ್ಳಗಿರಲಿ, ಬೆಳ್ಳಗಿರಲಿ, ದಪ್ಪಗಿರಲಿ, ಉದ್ದವಿರಲಿ, ಗಿಡ್ಡವಿರಲಿ, ಪ್ರತಿಯೊಬ್ಬರ ತನು ಮನವನ್ನು ಅಪ್ಪಿ ಬಳಸಿ ಎಲ್ಲರಿಗೂ ಖುಷಿ ಕೊಡುವುದು ಈ ಸೀರೆ.


?ಹೆಂಗಳೆಯರ ಸೀರೆಯ ಲೋಕವೆಂದರೆ ಅದೊಂದು ವೈವಿಧ್ಯಮಯ ಜಗತ್ತು. ಅಲ್ಲಿ ತರೇಹವಾರಿ ಬಣ್ಣದ, ತರೇಹವಾರಿ ಸ್ಪರ್ಶದ, ಒಗೆಯಲು ಆಗದಂತಹ, ಹಗುರವಾದ, ಅಪ್ಪಟ ಜರಿಯ ಹೀಗೆ ನಾನಾ ರೀತಿಗಳು. ಮನೆಯಲ್ಲಿ ಧರಿಸಲೊಂದು ಸೀರೆ, ಸಮಾರಂಭಕ್ಕೆ ಬೇರೆ, ಉದ್ಯೋಗಕ್ಕೆ ಹೊರಟಾಗ ಇನ್ನೊಂದು ರೀತಿಯವು ಹೀಗೆ ಸಾಗುತ್ತದೆ ಹೆಣ್ಣಿನ ಮನಸ್ಸು. ನೆನಪುಗಳ ಬೆಚ್ಚಗಿನ ಗೂಡಿನಲ್ಲಿ ಮೊದಲು ಸೀರೆ ಹಾಕಿದಾಗಿನ ಸಂಭ್ರಮವೆ ಒಂದು ಮರೆಯಲಾಗದ ಅನುಭವವಾಗಿರುತ್ತದೆ. ಬಣ್ಣ ಬಣ್ಣದ ಬಗೆ ಬಗೆಯ ಸೀರೆಗೆ ಸೆಳೆಯುವ ಗುಣವಿದೆ. ಎಲ್ಲ ಭಾವಗಳನ್ನು ಸಂಬಂಧಗಳನ್ನು ಬೆಸೆದುಕೊಂಡಿದೆ. ಪ್ರಾಚೀನ ಕಾಲದಿಂದ ಹಿಡಿದು ಆಧುನಿಕ ಕಾಲದವರೆಗೂ ಎಷ್ಟೇ ಉಡುಪುಗಳು ಬಂದರು ಕೂಡ ಸೀರೆಯ ಸ್ಥಾನ ಪಡೆದುಕೊಳ್ಳಲು ಸಾಧ್ಯವಾಗಿಲ್ಲ. ಎಲ್ಲಾ ಸಭೆ ಸಮಾರಂಭಗಳಲ್ಲಿ ಆಕರ್ಷಣೀಯ ಮೆರಗು ಕೊಡುವುದು ಸೀರೆ ಮಾತ್ರ. ಸೀರೆಯನ್ನು ಚೆನ್ನಾಗಿ ಧರಿಸುವುದು ಒಂದು ಕಲೆ, ಭಾರತೀಯ ಹೆಂಗಳೆಯರಿಗೆ ಈ ಕಲೆ ಬೆಳೆಯುತ್ತಿದ್ದಂತೆ ಕರಗತ ವಾಗಿಬಿಡುತ್ತದೆ. ಇಲ್ಲವೆಂದರೆ ನೆರಿಗೆ ಹಾಕಿ, ನೆಲಕ್ಕೆ ತಾಗದಂತೆ ಪಲ್ಲು ಹಾಕಿ ಜಾಗರೂಕತೆಯಿಂದ ಧರಿಸುವುದೆಂದರೆ ಸಣ್ಣ ವಿಷಯವೇ? ಸೀರೆಯ ಮಹಿಮೆ ಅಪಾರ, ಚಂದವಾಗಿ ಸೀರೆಯುಟ್ಟು ಜಡೆಗೆ ಮಲ್ಲಿಗೆ ಮುಡಿದು ಕೈತುಂಬ ಬಳೆತೊಟ್ಟು ಹಣೆಗೆ ಕುಂಕುಮವಿಟ್ಟು ನಿಂತರೆ ಸಾಕು ಆಕೆಯ ಸೌಂಧರ್ಯವನ್ನು ನೋಡಲು ಎರೆಡು ಕಣ್ಣು ಸಾಲದು.



| ಪುಷ್ಪ ಪ್ರಸಾದ್

ಅಮ್ಮಂದಿರ ಸೀರೆಯನ್ನು ನೋಡಿ ಪುಟ್ಟ ಮಕ್ಕಳಿಗು ಏನೋ ಆಕರ್ಷಣೆ. ಬಾಲ್ಯದಲ್ಲಿ ಸೀರೆ ಹಾಕಿ ಅಮ್ಮನಾಟವಾಡದ ಮಕ್ಕಳೇ ಇರುವುದಿಲ್ಲ. ಕಾಗದದ ದೋಣಿ ತೇಲಿಬಿಡುವ ಪ್ರಾಯದ ಜಾಣೆಯರಿಗು ಸೀರೆ ಬೇಕು. ಸೀರೆ ಧರಿಸುವುದರಲ್ಲು ಆಯಾ ಪ್ರದೇಶ ಮತ್ತು ರಾಜ್ಯಕ್ಕನುಸಾರವಾಗಿ ಆಯಾ ರೀತಿಗಳು ಅಚ್ಚರಿಯನ್ನುಂತುಮಾಡುತ್ತದೆ. ಅದೆಷ್ಟು ವಿಧದಲ್ಲಿ ಸೀರೆಯ ಸೊಬಗನ್ನು ನಾವು ಕಾಣಬಹುದು ಎಂದರೆ ಎದುರು ಸೆರಗು, ಹಿಂದೆ ಸೆರಗು, ತಲೆಗೆ ಸೆರಗು, ಹಿಂದೆ ನೆರಿಗೆ, ಮುಂದೆ ನೆರಿಗೆ, ಪೇರಿಸಿಟ್ಟಂತೆ ಪಲ್ಲು ಇನ್ನೂ ನಾನಾ ರೀತಿಗಳು ಕಣ್ಣಿಗೆ ಹಬ್ಬವನ್ನುಂಟುಮಾಡುತ್ತವೆ. ಹೀಗೆ ಸ್ವರೂಪಗಳು ಬದಲಾದರು ಸೀರೆಯ ರೂಪದಲ್ಲಿ ಯಾವುದೆ ಬದಲಾವಣೆಯಿಲ್ಲ. ಸೀರೆಯ ರಂಗು ರಂಗಿನ ಪ್ರಪಂಚದಲ್ಲಿ ಇನ್ನೊಂದು ಗಮನಾರ್ಹ ಅಂಶವಿದೆ. ಅದೇನೆಂದರೆ ಸಮಾರಂಭದ ಸಂಧರ್ಭಗಳಿಗನುಗುಣವಾಗಿ ಬಣ್ಣಗಳ ಸಂಕೇತದ ಮೇರೆಗೆ ಸೀರೆಯನ್ನು ಧರಿಸುವ ಅಪ್ರತಿಮ ಕ್ರಮ. ಧಾರೆಗೆ ಬಿಳಿಸೀರೆ, ಸೀಮಂತಕ್ಕೆ ಹಸಿರು ಸೀರೆ, ದೇವಸ್ಥಾನಕ್ಕೆ ಶುಭ್ರಬಿಳಿ ಈ ರೀತಿಯಲ್ಲಿ ಬಣ್ಣಗಳ ವಿಂಗಡನೆ ಮಾಡುತ್ತಾರೆ. ಶ್ರೀಮಂತರು ಬಡವರು ಎಂಬ ಭೇದಭಾವವಿಲ್ಲದೆ ಅವರವರ ಅನುಕೂಲಕ್ಕೆ ತಕ್ಕಂತ ಸೀರೆಗಳು ಬದುಕಿನ ಸಾಮರಸ್ಯವನ್ನು ಹೆಚ್ಚಿಸುತ್ತವೆ. ಜಗತ್ತಿನಲ್ಲಿ ಒಂದು ಆರೋಗ್ಯಕರ ಉಡುಪಿನ ಮಾದರಿಯೆಂದರೆ ಸೀರೆ ಹೊರತು ಬೇರೆ ಯಾವುದು ಇರಲು ಸಾಧ್ಯವಿಲ್ಲ.

## ಶತಮಾನದತ್ತ ಮೈಸೂರು ಸ್ಯಾಂಡಲ್ ಸೋಪಿನ ಪರಿಮಳ






ಭಾರತೀಯ ಬ್ರಾಂಡ್‌ಗಳ ಇತಿಹಾಸವನ್ನು ತೆರೆದು ನೋಡಿದರೆ, ಕಾಲದ ಪರೀಕ್ಷೆಯನ್ನು ಗೆದ್ದು ನಿಂತಿರುವ ಕೆಲವೇ ಕೆಲವು ಹೆಸರುಗಳು ಕಾಣಿಸುತ್ತವೆ. ಅವುಗಳಲ್ಲಿ ಮೈಸೂರು ಸ್ಯಾಂಡಲ್ ಸೋಪ್ ಬಹುಶಃ ಪ್ರಥಮ ಸ್ಥಾನದಲ್ಲಿ ನಿಲ್ಲುತ್ತದೆ . ಶತಮಾನಕ್ಕೂ ಹೆಚ್ಚು ಕಾಲ ತನ್ನ ಮೂಲ ಸ್ವರೂಪವನ್ನು ಕಳೆದುಕೊಳ್ಳದೆ, ಜಾಹೀರಾತಿನ ಅತಿ ಗದ್ದಲವಿಲ್ಲದೆ, ನಂಬಿಕೆಯ ಸುಗಂಧದಿಂದಲೇ ಬದುಕಿರುವ ಬ್ರಾಂಡ್ ಇದಾಗಿದೆ. ಇದರ ಇತಿಹಾಸ ತಿಳಿಯೋಣ ಬನ್ನಿ .

**ರಫ್ತು ನಿಂತಾಗ ಹುಟ್ಟಿದ ಸ್ವದೇಶಿ ಕ್ರಾಂತಿ:** ಮೈಸೂರಿನ ಸುತ್ತ ಮುತ್ತ ಕಾಡುಗಳು ಶ್ರೀಗಂಧಕ್ಕೆ ಹೆಸರುವಾಸಿ. 20 ನೇ ಶತಮಾನದ ಆರಂಭದಲ್ಲಿ, ಭಾರತದ ಮೈಸೂರು ಸಾಮ್ರಾಜ್ಯವು ಶ್ರೀ ಗಂಧದ ಮರದ ಪ್ರಮುಖ ರಫ್ತುದಾರರಲ್ಲಿ ಒಂದಾಗಿತ್ತು, ಅದರಲ್ಲಿ ಹೆಚ್ಚಿನದನ್ನು ಯುರೋಪಿಗೆ ರಫ್ತು ಮಾಡಲಾಗುತ್ತಿತ್ತು.

ಮೊದಲನೆಯ ಮಹಾಯುದ್ಧದ ಸಮಯದಲ್ಲಿ, ಯುದ್ಧದ ಕಾರಣದಿಂದಾಗಿ ರಫ್ತು ಮಾಡಲು ಸಾಧ್ಯವಾಗದ ಕಾರಣ ಶ್ರೀಗಂಧದ ದೊಡ್ಡ ದಾಸ್ತಾನುಗಳು ಮೈಸೂರಿನಲ್ಲೇ ಉಳಿದವು. ಈ ದಾಸ್ತಾನುಗಳನ್ನು ಸದುಪಯೋಗಪಡಿಸಿಕೊಳ್ಳಲು, ಮೈಸೂರಿನ ರಾಜ ನಾಲ್ವಡಿ ಕೃಷ್ಣರಾಜ ಒಡೆಯರ್, ದಿವಾನ್ ಸರ್ ಎಂ. ವಿಶ್ವೇಶ್ವರಯ್ಯ ಮತ್ತು ಶ್ರೀ ಸೋಸಲೆ ಗರಳ ಪುರಿ ಶಾಸ್ತ್ರಿಗಳು ಬೆಂಗಳೂರಿನಲ್ಲಿ ಸರ್ಕಾರಿ ಸೋಪ್ ಕಾರ್ಖಾನೆಯನ್ನು ಸ್ಥಾಪಿಸಿದರು.

1916 ರಲ್ಲಿ ಸ್ಥಾಪನೆಯಾದ ಈ ಕಾರ್ಖಾನೆಯು ಶ್ರೀಗಂಧದ ಎಣ್ಣೆಯನ್ನು ಮುಖ್ಯವಾಗಿ ಬಳಸಿಕೊಂಡು ಮೈಸೂರು ಸ್ಯಾಂಡಲ್ ಸೋಪ್ ಎಂಬ ಬ್ರಾಂಡ್ ಹೆಸರಿನಲ್ಲಿ ಸೋಪ್‌ಗಳನ್ನು ತಯಾರಿಸಲು ಪ್ರಾರಂಭಿಸಿತು. ಅದೇ ವರ್ಷ ಮೈಸೂರಿನಲ್ಲಿ ಶ್ರೀಗಂಧದ ಮರದಿಂದ ಎಣ್ಣೆಯನ್ನು




ತಯಾರಿಸುವ ಕಾರ್ಖಾನೆಯನ್ನು ಸ್ಥಾಪಿಸಲಾಯಿತು.

ಸೋಪ್ ಶಾಸ್ತ್ರಿ' ಗರಳಪುರಿ ಅವರ ಕೊಡುಗೆ

ಮೈಸೂರು ಸ್ಯಾಂಡಲ್ ಸೋಪ್ ಕನಸು ನನಸಾಗುವುದಕ್ಕೆ ಕಾರಣ ಕರ್ತೃವಾದವರು , ಅದಕ್ಕೆ ಸ್ವರೂಪ ನೀಡಿದವರು ಗರಳಪುರ ಶಾಸ್ತ್ರಿಯವರು. ಆದರೆ ಅವರ ಹೆಸರು ಮೈಸೂರು ಸ್ಯಾಂಡಲ್ ಸೋಪ್‌ನ ಇತಿಹಾಸದಲ್ಲಿ ಬಹುಶಃ ಅಜ್ಞಾತವಾಗೆ ಉಳಿದಿದೆ .

ಸೋಸಲೆ ಗರಲಪುರಿ ಶಾಸ್ತ್ರಿಯವರು ಬೆಂಗಳೂರಿನಲ್ಲಿ ಮೈಸೂರು ಸೋಪ್ ಕಾರ್ಖಾನೆಯನ್ನು ಸ್ಥಾಪಿಸುವ ಮೂಲಕ ಶ್ರೀಗಂಧದ ಸೋಪ್ ತಯಾರಿಕೆಯಲ್ಲಿನ ಕೆಲಸಕ್ಕಾಗಿ ಹೆಸರುವಾಸಿಯಾದ ಭಾರತೀಯ ಕೈಗಾರಿಕಾ ರಸಾಯನ ಶಾಸ್ತ್ರಜ್ಞರಾಗಿದ್ದರು. ಇದು ಅವರಿಗೆ ಸೋಪ್ ಶಾಸ್ತ್ರಿ ಎಂಬ ಅಡ್ಡ ಹೆಸರನ್ನು ತಂದುಕೊಟ್ಟಿತು. ಅವರು ಮೈಸೂರು ರಾಜ್ಯದಲ್ಲಿ ಕೈಗಾರಿಕೆಗಳು ಮತ್ತು ವಾಣಿಜ್ಯ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದರು.

ಸೋಪ್ ತಯಾರಿಕೆಯನ್ನು ಅಧ್ಯಯನ ಮಾಡಲು ಶಾಸ್ತ್ರಿ ಅವರಿಗೆ ಮೈಸೂರು ಮಹಾರಾಜರು ಪ್ರಾಯೋಜಿಸಿದರು. ಅವರು ಇಂಗ್ಲೆಂಡ್‌ಗೆ ಹೋಗಿ ಲಂಡನ್ ವಿಶ್ವವಿದ್ಯಾಲಯ ಕಾಲೇಜಿನಲ್ಲಿ ರಸಾಯನಶಾಸ್ತ್ರದಲ್ಲಿ ಎಂಎಸ್ಸಿ ಪಡೆದರು ಮತ್ತು ಕೈಗಾರಿಕಾ ಸೋಪ್ ತಯಾರಿಕೆಯನ್ನು ಸಹ ಪರಿಶೀಲಿಸಿದರು. ನಂತರ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾಗೆ ಭೇಟಿ ನೀಡಿದರು. ಅವರು ಹಿಂದಿರುಗಿದ ನಂತರ, ಮೈಸೂರು ಸೋಪ್ ಕಾರ್ಖಾನೆಯನ್ನು 1916 ರಲ್ಲಿ ಸ್ಥಾಪಿಸಲಾಯಿತು . 1918 ರಲ್ಲಿ ವಾಣಿಜ್ಯ ಉತ್ಪಾದನೆ ಪ್ರಾರಂಭವಾಯಿತು.

ಮೈಸೂರು ಸ್ಯಾಂಡಲ್ ಸೋಪ್‌ನಲ್ಲಿ ಬಳಸುವ ಶ್ರೀಗಂಧದ ಎಣ್ಣೆ ಶುದ್ಧವಾಗಿರಬೇಕು, ಮಿಶ್ರಿತವಾಗಿರಬಾರದು ಎಂಬುವುದು ಅವರ ಧೃಡ ನಿಲುವಾಗಿತ್ತು . ಕೈಗಾರಿಕಾ ಮಟ್ಟದಲ್ಲಿ ಇದು ಸುಲಭ ನಿರ್ಧಾರವಲ್ಲ. ಶುದ್ಧ ಶ್ರೀಗಂಧದ ಎಣ್ಣೆ ದುಬಾರಿ, ಸಂರಕ್ಷಣೆ ಕಷ್ಟ, ಉತ್ಪಾದನಾ ವೆಚ್ಚ ಹೆಚ್ಚಿಸುವ ಅಂಶ. ಆದರೆ ಗರಳಪುರ ಶಾಸ್ತ್ರಿಯವರ ದೃಷ್ಟಿಯಲ್ಲಿ, ಗುಣಮಟ್ಟದ ಮೇಲೆ ಮಾಡಿದ ಯಾವುದೇ ತ್ಯಾಗವು ಉತ್ಪನ್ನದ ಆಯುಷ್ಯವನ್ನು ಕಡಿಮೆ ಮಾಡುತ್ತದೆ. ಅವರು ತಂತ್ರಜ್ಞರೊಂದಿಗೆ ನಿರಂತರ ಸಂವಾದ ನಡೆಸಿ, ಉಷ್ಣತೆ, ರಾಸಾಯನಿಕ ಬಳಕೆ, ಮಿಶ್ರಣದ ಹಂತ, ಎಲ್ಲದರಲ್ಲೂ ಶ್ರೀಗಂಧದ ಔಷಧೀಯ ಗುಣ ನಾಶವಾಗದಂತೆ ನೋಡಿಕೊಂಡರು.

**'ಶರಭ' ಲೋಗೋ ಮತ್ತು ಅದರ ಗೂಢಾರ್ಥ**

ಬ್ರ್ಯಾಂಡಿಂಗ್ ವಿಷಯದಲ್ಲೂ ಶಾಸ್ತ್ರಿ ಅವರು ಅಪಾರ ದೂರದೃಷ್ಟಿ ಹೊಂದಿದ್ದರು. ಸಿಂಹದ ದೇಹ ಮತ್ತು ಆನೆಯ ತಲೆಯನ್ನು ಹೊಂದಿರುವ ಪೌರಾಣಿಕ ಜೀವಿ ಶರಭವನ್ನು ಕಂಪನಿಯ ಲೋಗೋ ರೂಪಿಸಿದರು. ಶರಭ ಬುದ್ಧಿವಂತಿಕೆ, ಧೈರ್ಯ ಮತ್ತು ಶಕ್ತಿಯ ಸಂಯೋಜಿತ ಸದ್ಗುಣಗಳನ್ನು ಪ್ರತಿನಿಧಿಸುತ್ತದೆ ಮತ್ತು ಕಂಪನಿಯ ತತ್ವಶಾಸ್ತ್ರವನ್ನು ಸಂಕೇತಿಸುತ್ತದೆ.

ಜೊತೆಗೆ ಮೈಸೂರು ಸ್ಯಾಂಡಲ್ ಸೋಪಿನ ಅಂಡಾಕಾರದ ವಿನ್ಯಾಸವನ್ನು ಅವರು ವಿನ್ಯಾಸಗೊಳಿಸಿದರು. ?ಮೈಸೂರು? ಎಂಬ ಹೆಸರನ್ನು ಉತ್ಪನ್ನದ ಜೊತೆಗೆ ಜೋಡಿಸುವ ಮೂಲಕ, ರಾಜ್ಯದ ಘನತೆ, ರಾಜ ಪರಂಪರೆ ಮತ್ತು ನೈಸರ್ಗಿಕ ಶುದ್ಧತೆಯನ್ನು ಬ್ರ್ಯಾಂಡ್‌ನ ಅಸ್ತಿತ್ವದಲ್ಲೇ ಅಡಗಿಸಿದರು. ಈ ಸ್ಪಷ್ಟ ಗುರುತಿನ ಕಾರಣದಿಂದಲೇ.

ಇವರ ದೂರದೃಷ್ಟಿಯಿಂದಲೇ ಮೈಸೂರು ಸ್ಯಾಂಡಲ್ ಸೋಪ್ ಇಂದು ಜಿಐ (Geographical Indication) ಟ್ಯಾಗ್ ಹೊಂದಿರುವ ವಿಶ್ವದ ಏಕೈಕ ಸೋಪು ಎಂಬ ಖ್ಯಾತಿ ಪಡೆದಿದೆ.

ಕೇವಲ 100 ರೂಪಾಯಿಯ ಸೋಪಿನಿಂದ ಹಿಡಿದು, ಸಾವಿರಾರು ರೂಪಾಯಿ ಬೆಲೆಯ ಐಷಾರಾಮಿ 'ಮಿಲೇನಿಯಂ ಸೋಪ್' ವರೆಗೆ ಈ ಸಂಸ್ಥೆ ಬೆಳೆದು ಬಂದ ಹಾದಿ ಅದ್ಭುತ. ಸಂಪ್ರದಾಯ ಮತ್ತು ಆಧುನಿಕತೆಯ ಈ ಅಪೂರ್ವ ಸಂಗಮವೇ ಮೈಸೂರು ಸ್ಯಾಂಡಲ್ ಸೋಪನ್ನು 'ಎಂದೆಂದಿಗೂ ಮಾಸದ ಸುಗಂಧ'ವನ್ನಾಗಿ ಮಾಡಿದೆ.

### ಜಾಗತಿಕ ಮಾರುಕಟ್ಟೆಯಲ್ಲಿ ಮೈಸೂರಿನ ಘಮಲು

ಮೈಸೂರು ಸ್ಯಾಂಡಲ್ ಸೋಪ್ ಇಂದು ಕೇವಲ ದಕ್ಷಿಣ ಭಾರತಕ್ಕೆ ಸೀಮಿತವಾಗಿಲ್ಲ. ತನ್ನ ಮಾರುಕಟ್ಟೆಯನ್ನು ಯುರೋಪ್, ಅಮೆರಿಕ ಮತ್ತು ಮಧ್ಯಪ್ರಾಚ್ಯ ರಾಷ್ಟ್ರಗಳಿಗೂ ವಿಸ್ತರಿಸಿದೆ.

* **80 ದೇಶಗಳಿಗೆ ರಫ್ತು:** ಸದ್ಯ ಕೆಎಸ್‌ಡಿಎಲ್ ತನ್ನ ಉತ್ಪನ್ನಗಳನ್ನು ವಿಶ್ವದ ಸುಮಾರು 80 ದೇಶಗಳಿಗೆ ತಲುಪಿಸುತ್ತಿದೆ. 2024–25ರ ಹಣಕಾಸು ವರ್ಷದಲ್ಲಿ ರಫ್ತು ವಹಿವಾಟಿನ ಮೂಲಕವೇ ಕೋಟ್ಯಂತರ ರೂಪಾಯಿ ಲಾಭ ಗಳಿಸಿದೆ.
* **ಜಾಗತಿಕ ರಾಯಭಾರಿ:** ಉತ್ತರ ಭಾರತದ ಮಾರುಕಟ್ಟೆ ಮತ್ತು ಯುವಜನತೆಯನ್ನು ಸೆಳೆಯಲು ತಮನ್ನಾ ಭಾಟಿಯಾ ಅವರಂತಹ ನಟಿಯರನ್ನು ರಾಯಭಾರಿಯನ್ನಾಗಿ ನೇಮಿಸಿಕೊಳ್ಳುವ ಮೂಲಕ ಕಂಪನಿಯು ತನ್ನ ಜಾಗತಿಕ ವರ್ಚಸ್ಸನ್ನು ಹೆಚ್ಚಿಸಿಕೊಳ್ಳುತ್ತಿದೆ.
* **ನೂತನ ಮಾರುಕಟ್ಟೆ:** ಈಗ ಕಂಪನಿಯು ಯೂರೋಪ್ ಮತ್ತು ಬ್ರಿಟನ್ ಮಾರುಕಟ್ಟೆಯತ್ತ ವಿಶೇಷ ಗಮನ ಹರಿಸುತ್ತಿದ್ದು, ಭಾರತೀಯ ಪಾರಂಪರಿಕ ಸುಗಂಧವನ್ನು ವಿಶ್ವದ ಮೂಲೆ ಮೂಲೆಗೆ ತಲುಪಿಸಲು ದಾಪುಗಾಲು ಹಾಕುತ್ತಿದೆ.






| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,